# ವಾಲ್ಮೀಕಿ ರಾಮಾಯಣದ ನಾಲ್ಕು ಪಾತ್ರಗಳು

ವಿದ್ವಾನ್ ರಂಗನಾಥ ಶರ್ಮಾ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ
ಮತ್ತು
ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಾಲಯ, ಅಂಬಲಪಾಡಿ

# ವಾಲ್ಮೀಕಿ ರಾಮಾಯಣದ ನಾಲ್ಕು ಪಾತ್ರಗಳು

(ಸೀತಾ, ಭರತ, ಹನುಮಂತ, ವಿಭೀಷಣ)

ವಿದ್ವಾನ್ ಎನ್. ರಂಗನಾಥ ಶರ್ಮಾ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ

ಮತ್ತು

ಶ್ರೀ ಜನಾರ್ದನ ಮತ್ತು ಮಹಾಕಾಳೀ ದೇವಾಲಯ,

ಅಂಬಲಪಾಡಿ

VĀLMĪKI RĀMĀYAṆADA NĀLKU PĀTRAGAḶU : *Sītā, Bharata, Hanumanta, Vibhīṣaṇa.* Lectures on the four characters of Rāmāyaṇa by Vidwan N. Ranganatha Sharma. Published by Rashtrakavi Govind Pai Samshodhana Kendra, M.G.M. College, UDUPI-576 102.

Year of Publication : 1996

Pages : 88

*ಬೆಲೆ :* ರೂಪಾಯಿ ಹದಿನೈದು ಮಾತ್ರ

**ISBN : 81-86668-02-0**

**ಪ್ರಕಟನ ಸಲಹಾ ಮಂಡಳಿ**

**ಪ್ರೊ| ಕು. ಶಿ. ಹರಿದಾಸ ಭಟ್ಟ** (ನಿರ್ದೇಶಕರು, ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ), **ಡಾ| ಎಸ್. ತಿರುಮಲೇಶ್ವರ ಭಟ್** (ಪ್ರಧಾನರು, ಆಂಗ್ಲ ಭಾಷಾ ವಿಭಾಗ, ಎಂ. ಜಿ. ಎಂ. ಕಾಲೇಜು, ಉಡುಪಿ), **ಡಾ| ಉಪ್ಪಂಗಳ ರಾಮ ಭಟ್** (ಪ್ರಧಾನರು, ಕನ್ನಡ ಭಾಷಾ ವಿಭಾಗ, ಎಂ. ಜಿ. ಎಂ. ಕಾಲೇಜು, ಉಡುಪಿ), **ಶ್ರೀ ಮುರಳೀಧರ ಉಪಾಧ್ಯ ಹಿರಿಯಡಕ** (ಪ್ರಧಾನರು, ಕನ್ನಡ ಭಾಷಾ ವಿಭಾಗ, ಪೂರ್ಣಪ್ರಜ್ಞ ಸಂಜೆ ಕಾಲೇಜು, ಉಡುಪಿ), **ಶ್ರೀ ಎಚ್. ಕೃಷ್ಣ ಭಟ್** (ನಿರ್ದೇಶಕರು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ. ಜಿ. ಎಂ. ಕಾಲೇಜು, ಉಡುಪಿ).

*ಕಂಪ್ಯೂಟರ್ ಅಕ್ಷರ ಸಂಯೋಜನೆ :*
'ನವದುರ್ಗಾ ಲೇಸರ್‌ಟೆಕ್', ಉಡುಪಿ-೨. [Phone : 20737 (P.P.)]
*ಮುದ್ರಣ :*
ಅಂಕುರ ಪ್ರಿಂಟ್ಸ್, ಬಸವೇಶ್ವರ ನಗರ, ಬೆಂಗಳೂರು.

# ಮೊದಲ ಮಾತು.

ವಾಲ್ಮೀಕಿ ರಾಮಾಯಣವನ್ನು ಕನ್ನಡದಲ್ಲಿ ಸರಳವಾಗಿ ಅನುವಾದಿಸಿ, ಕ್ಲಿಷ್ಟ ಸಮಸ್ಯೆಗಳಿಗೆ ಸರ್ವೋಪಯೋಗಿ, ಸರ್ವಜನ ಮೆಚ್ಚುಗೆಯ ಉತ್ತರಗಳನ್ನು ನೀಡಿ ಮನೆಮನೆಯ ಸರಸ್ವತೀ ಭಂಡಾರವನ್ನು ಬೆಳಗಿದ ಕನ್ನಡದ ವಿದ್ವಾಂಸ ಪರಂಪರೆಯಲ್ಲಿ ಸರ್ವಮಾನ್ಯರಾದ ವಿದ್ವಾನ್ ರಂಗನಾಥ ಶರ್ಮರು ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಾಲಯ, ಅಂಬಲಪಾಡಿ ದತ್ತಿ ಉಪನ್ಯಾಸವನ್ನು ನೀಡಿದ್ದರು. ನಮ್ಮ ಕೇಂದ್ರವೇ ಆಯೋಜಿಸಿದ ನಾಲ್ಕು ಉಪನ್ಯಾಸಗಳಲ್ಲಿ ಒಂದು ಅಂಬಲಪಾಡಿಯ ದೇವಳದಲ್ಲಿಯೂ, ಒಂದನ್ನು ಹೆಬ್ರಿಯಲ್ಲಿಯೂ ಉಳಿದೆರಡನ್ನು ನಮ್ಮ ಕೇಂದ್ರ ದಲ್ಲಿಯೂ ಆಯೋಜಿಸಿದ್ದೆವು. ಪ್ರತಿಯೊಂದು ಉಪನ್ಯಾಸವು ರಾಮಾಯಣದ ಒಂದೊಂದು ಪಾತ್ರದ ಕುರಿತಾಗಿದ್ದು ಆ ನಾಲ್ಕು ಉಪನ್ಯಾಸಗಳನ್ನು ಇಲ್ಲಿ ಕಿರಿಯ ಹೊತ್ತಗೆಯಾಗಿ ಆಸಕ್ತ ಜನರಿಗೆ ಉಪಯೋಗವಾಗಲಿ ಎಂದು ಹೊರತರುತ್ತಿದ್ದೇವೆ.

ಅಂಬಲಪಾಡಿಯ ದೇವಾಲಯದ ಧರ್ಮದರ್ಶಿ ಶ್ರೀ ನಿ. ಅಣ್ಣಾಜಿ ಬಲ್ಲಾಳರು ಇದರ ಮುದ್ರಣಕ್ಕೆ ಉದಾರವಾಗಿ ಆರ್ಥಿಕ ನೆರವು ಇತ್ತು ಉಪಕರಿಸಿರುವುದನ್ನು ನಾವು ನಮ್ರತೆಯಿಂದ ಸ್ಮರಿಸಿಕೊಳ್ಳುತ್ತಿದ್ದೇವೆ.

ವಿದ್ವಾನ್ ರಂಗನಾಥ ಶರ್ಮರು ಉಪನ್ಯಾಸಗಳ ಲಿಪ್ಯಂತರವನ್ನು ಗಮನಿಸಿ ಅದರ ಹಿನ್ನೆಲೆಯಲ್ಲಿ ಬೇರೆಯೇ ಪ್ರಬಂಧವನ್ನು ಬರೆದು ಕೊಟ್ಟಿರುತ್ತಾರೆ. ಅವರ ಉತ್ಸಾಹವನ್ನು ನಾವು ಮನಸಾ ಸ್ಮರಿಸುವೆವು.

ಧ್ವನಿಮುದ್ರಿತ ಉಪನ್ಯಾಸಗಳ ಲಿಪ್ಯಂತರಕರಣವನ್ನು ಮಾಡಿಕೊಟ್ಟ ಡಾ। ಕೆ. ಅಶೋಕ ಆಳ್ವ ಅವರಿಗೂ, ಅಂದವಾಗಿ ಡಿಟಿಪಿಯನ್ನು ನೀಡಿದ ಡಾ। ಪದ್ಮನಾಭ ಕೇಕುಣ್ಣಾಯರಿಗೂ, ಮುಖಪುಟ ವಿನ್ಯಾಸವನ್ನು ಬರೆದ ಶ್ರೀ ಜಯದೇವ, ಮಣಿಪಾಲ ಅವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಮೆಸರ್ಸ್ ಅಂಕುರ ಪ್ರಿಂಟ್ಸ್, ಬಸವೇಶ್ವರ ನಗರ, ಬೆಂಗಳೂರು ಇದರ ಮುಖ್ಯಸ್ಥರಾದ ಶ್ರೀ ಚಂದ್ರಕಾಂತ ವಡ್ಡು ಅವರಿಗೂ, ಅಲ್ಲಿಯ ಸಕಲ ಸಿಬಂದಿವರ್ಗದವರಿಗೂ ಕೃತಜ್ಞತೆಗಳು.

ಉಡುಪಿ – ೫೭೬ ೧೦೨
ದಿನಾಂಕ : ೧-೮-೧೯೯೬

ಹೆರಂಜೆ ಕೃಷ್ಣ ಭಟ್ಟ
ನಿರ್ದೇಶಕರು
ರಾಷ್ಟ್ರಕವಿ ಗೋವಿಂದ ಪೈ
ಸಂಶೋಧನ ಕೇಂದ್ರ

# ಉಪಕಾರ ಸ್ಮರಣೆ

ವಿದ್ವಾನ್ ಎನ್. ರಂಗನಾಥ ಶರ್ಮರು ಕಳೆದವರ್ಷ ವಾಲ್ಮೀಕಿ ರಾಮಾಯಣದ ಸೀತಾ, ಭರತ, ಹನುಮಂತ, ವಿಭೀಷಣ – ಈ ನಾಲ್ಕು ಪಾತ್ರಗಳ ಕುರಿತು ನೀಡಿದ ಸಾರ್ವಜನಿಕ ಉಪನ್ಯಾಸಗಳು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ವತಿಯಿಂದ ಈ ಹೊತ್ತಿಗೆಯಲ್ಲಿ ಪ್ರಕಟಗೊಳ್ಳುತ್ತಿವೆ. ಅಂಬಲಪಾಡಿಯ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದ ನೆರವಿನಿಂದ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು ೧೯೮೦ರಲ್ಲಿ ಪ್ರಾರಂಭಿಸಿದ ದತ್ತಿ ಉಪನ್ಯಾಸಗಳ ಸರಣಿಯಲ್ಲಿ ಕಳೆದ ವರ್ಷ ಈ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಭಾರತೀಯ ವಿದ್ಯಾ ಭವನದ ಉಡುಪಿ-ಮಣಿಪಾಲ ಕೇಂದ್ರ, ಹೆಬ್ರಿಯ ರಾಮ ಮಂದಿರ, ಅಂಬಲಪಾಡಿ ದೇವಸ್ಥಾನ ಹಾಗೂ ಉಡುಪಿಯ ಪೂರ್ಣಪ್ರಜ್ಞಾ ಸಂಧ್ಯಾ ಕಾಲೇಜು – ಈ ವೇದಿಕೆಗಳಲ್ಲಿ ವಿದ್ವಾನ್ ಶರ್ಮರು ಈ ಉಪನ್ಯಾಸ ಕಾರ್ಯವನ್ನು ನೆರವೇರಿಸಿದರು.

ವಿದ್ವಾನ್ ರಂಗನಾಥ ಶರ್ಮರು ವಾಲ್ಮೀಕಿ ರಾಮಾಯಣವನ್ನು ಸಮಗ್ರವಾಗಿ ಹಾಗೂ ಸಮರ್ಪಕವಾಗಿ ಗದ್ಯರೂಪದಲ್ಲಿ ಕನ್ನಡ ಭಾಷೆಗೆ ಅನುವಾದ ಮಾಡಿರುವ ಘನ ವಿದ್ವಾಂಸರು. ಅವರ ತಳಸ್ಪರ್ಶಿ ಸಂಸ್ಕೃತ ಭಾಷಾ ಪಾಂಡಿತ್ಯ, ಸರಳ ಶೈಲಿಯ ಮಾತುಗಾರಿಕೆ, ಸಾವಧಾನ ಗತಿಯ ನಿರೂಪಣೆ, ಹಿತಮಿತವಾದ ವಿವರಣೆ ಎಲ್ಲ ವಿವಾದಗ್ರಸ್ತ ವಿಷಯಗಳ ಸೂಕ್ಷ್ಮ ವಿವೇಚನೆ, ಅನುದ್ವೇಗಕರವಾದ ವಾಕ್ಯರಚನೆ, ಅಕ್ಷರಗಳ ಹಾಗೂ ಶಬ್ದಗಳ ಸ್ವಚ್ಛವಾದ ಉಚ್ಚಾರಣೆ ವ್ಯಾಕರಣ ನಿಯಮಗಳ ಬಗೆಗಿನ ಗೌರವ, ಉಪನ್ಯಾಸದ ದೇಶಕಾಲಮಿತಿಗಳ ಪರಿವೆ – ಮುಂತಾದ ಪ್ರಾಚೀನ ಪರಂಪರೆಯ ವಿದ್ವತ್ತೆಯ ವಿಶಿಷ್ಟ ಗುಣಗಳು ಈ ಉಪನ್ಯಾಸಗಳನ್ನು ಕೇಳಿದ ಸಭಾಸದರ ಮೇಲೆ ತುಂಬ ಪ್ರಭಾವವನ್ನೆ ಬೀರಿವೆ.

ನಮ್ಮ ದೇವಾಲಯದ ಹೆಸರಿನಲ್ಲಿ ನಡೆಯುತ್ತಿರುವ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ವಿದ್ವಾನ್ ರಂಗನಾಥ ಶರ್ಮರ ಉಪನ್ಯಾಸಗಳನ್ನು ಪೋಣಿಸುವ ಸುಯೋಗ ಒದಗಿಬಂದುದು ನಮ್ಮೀ ಪ್ರದೇಶದ ಜನರ ಪುಣ್ಯಫಲ ಎಂದು ಭಾವಿಸಿದ್ದೇವೆ. ಶ್ರೀಮಾನ್ ಶರ್ಮರಿಗೆ ನಮ್ಮ ದೇವಾಲಯದ ಪರವಾಗಿ ಗೌರವ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಒಳ್ಳೆಯ ಉಪನ್ಯಾಸಗಳು ಧ್ವನಿಮುದ್ರಿತವಾದರೂ, ಅವು ಕಿವಿಮರೆಯಾಗದಂತೆ ಪುನಃ ಕೇಳಿ ಎಲ್ಲರಿಗೂ ತಲಪುವಂತೆ ಮುದ್ರಿಸಿ ಪ್ರಕಟಿಸುವ ಕಾರ್ಯ ಸುಲಭವಲ್ಲ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ನಿರ್ದೇಶಕ ಶ್ರೀ ಹೆರಂಜೆ ಕೃಷ್ಣ ಭಟ್ಟರು ಪ್ರಕಾಶನದ ಭಾರಹೊತ್ತು ನಮ್ಮೀ ದೇವಾಲಯದ ಹೆಸರಿನ ದತ್ತಿ ಉಪನ್ಯಾಸ ಗಳು ಕಣ್ಮರೆಯಾಗದಂತೆ, ಕಿವಿಮರೆಯಾಗದಂತೆ ಮಾಡುತ್ತಿದ್ದಾರೆ. ದೇವಾಲಯದ ಪರವಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಇತಿ,

ಅಂಬಲಪಾಡಿ
ಉಡುಪಿ-೫೭೬೧೦೩
೨೩-೭-೧೯೯೬

**ನಿಡಂಬೂರುಬೀಡು ಅಣ್ಣಾಜಿ ಬಲ್ಲಾಳ,**
ಧರ್ಮದರ್ಶಿ,
ಶ್ರೀ ಜನಾರ್ದನ ಮತ್ತು
ಮಹಾಕಾಳೀ ದೇವಸ್ಥಾನ.

# ಅರಿಕೆ

ಕಳೆದ ವರ್ಷ ನಾನು ಉಡುಪಿಗೆ ಹೋಗಿದ್ದಾಗ ಅಲ್ಲಿಯ ಸಹೃದಯ ಬಂಧುಗಳು ಶ್ರೀಮದ್ರಾಮಾಯಣದ ಮೇಲೆ ಕೆಲವು ಪ್ರವಚನಗಳನ್ನು ಮಾಡಬೇಕೆಂದು ನನ್ನನ್ನು ಕೇಳಿದರು. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದವರೂ ಶ್ರೀಯುತರಾದ ಅಣ್ಣಾಜಿ ಬಲ್ಲಾಳ್ ಅವರು, ಅಂಬಾತನಯ ಮುದ್ರಾಡಿಯವರು, ಹೆರಂಜೆ ಕೃಷ್ಣ ಭಟ್ಟರು, ನಿಟಿಲಾಪುರ ಕೃಷ್ಣಮೂರ್ತಿಗಳು – ಮೊದಲಾದ ಮಹನೀಯರು ತುಂಬ ಆಸಕ್ತಿ ವಹಿಸಿ ಸಹಕರಿಸಿ ಉಪಚರಿಸಿದರು. ಈ ಮಹನೀಯರಿಗೆ ನಾನು ಕೃತಜ್ಞನಾಗಿದ್ದೇನೆ. ಅವರ ಪ್ರೋತ್ಸಾಹದಿಂದ ಬೇರೆ ಬೇರೆ ಸ್ಥಳಗಳಲ್ಲಿ ನೀಡಿದ ಉಪನ್ಯಾಸಗಳನ್ನು ಮೇಲ್ಕಂಡ ಸಂಶೋಧನ ಕೇಂದ್ರದವರು ಧ್ವನಿಸುರುಳಿಯಲ್ಲಿ ಸಂಗ್ರಹಿಸಿದರಂತೆ. ಅದರ ಹಸ್ತಪ್ರತಿಯನ್ನು ನನಗೆ ಕಳಿಸಿ, ಕಾರಣಾಂತರಗಳಿಂದ ಪ್ರವಚನಗಳು ಸರಿಯಾಗಿ ಮೂಡಿಬಂದಿಲ್ಲವೆಂದೂ, ಅದೆಲ್ಲ ವನ್ನೂ ಸರಿಪಡಿಸಿ ಪೂರ್ಣರೂಪವನ್ನಿತ್ತು ಲೇಖನರೂಪದಲ್ಲಿ ಬರೆದು ಕಳಿಸ ಬೇಕೆಂದೂ, ಅದನ್ನು ಮುದ್ರಿಸಿ ಪ್ರಕಟಿಸುವ ಉದ್ದೇಶವಿದೆಯೆಂದೂ ತಿಳಿಸಿದರು.

ಅವರ ಸಂಮತಿಯಂತೆ ನನ್ನ ಉಪನ್ಯಾಸಗಳನ್ನು ಪರಿಷ್ಕರಿಸಿ „ಬರೆದಿದ್ದೇನೆ. ಬರಿಯ ನೆರಳಿನಂತಿದ್ದ ಹಸ್ತಪ್ರತಿಯ ಆಧಾರದ ಮೇಲೆ ಅವುಗಳಿಗೆ ಒಂದು ರೂಪ ವನ್ನು ಕೊಟ್ಟಿದ್ದೇನೆ. ಭಾಷಣದ ಶೈಲಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಭೂತಕಾಲ ವರ್ತಮಾನಕಾಲಗಳ ಸಮಾವೇಶವಾಗಿದೆ. ಹೇಳದಿರುವ ಹೊಸ ವಿಚಾರವನ್ನೇನೂ ಸೇರಿಸಿಲ್ಲ. ಉಕ್ತಿಪ್ರಕಾರದಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬಹುದು. ಶ್ರೀಮದ್ರಾಮಾಯಣದ ನಾಲ್ಕು ಪಾತ್ರಗಳ ಚಿತ್ರಣವು ಮಾತ್ರ ಇಲ್ಲಿ ನಿರೂಪಿತವಾಗಿದೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದವರು ಇಷ್ಟು ಅಭಿಮಾನವನ್ನು ವಹಿಸಿ, ಆ ಪ್ರವಚನಗಳನ್ನೀಗ ಪ್ರಕಟಿಸಿದ್ದಾರೆ. ಈ ಮಹನೀಯರೆಲ್ಲರ ಪ್ರೀತ್ಯಾದರ ವಿಶ್ವಾಸಗಳಿಗೆ ನಾನು ಋಣಿಯಾಗಿದ್ದೇನೆ. ಇವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ವಾದ ವಂದನೆಗಳು ಸಲ್ಲುತ್ತವೆ.

ಬೆಂಗಳೂರು
೧೬-೬-೧೯೯೬

ಎನ್. ರಂಗನಾಥ ಶರ್ಮಾ

೧

# ಸೀತಾದೇವಿ

ವಾಲ್ಮೀಕಿಮುನಿಗಳ ಶ್ರೀಮದ್ರಾಮಾಯಣದಲ್ಲಿ ಸೀತಾದೇವಿಯ ಚರಿತೆ ವಿಸ್ತೃತವಾಗಿದೆಯಲ್ಲದೆ ಮಹತ್ತ್ವಪೂರ್ಣವಾಗಿದೆ. 'ಸೀತಾಯಾಶ್ಚರಿತಂ ಮಹತ್' ಎಂಬುದು ಕವಿವಚನ. ನಮ್ಮ ಭಾರತೀಯರು ಸ್ತ್ರೀಯರಲ್ಲಿರಬೇಕೆಂದು ನಂಬಿದ್ದ ಯಾವ ಯಾವ ಶೀಲ, ಆಚಾರ, ಸದ್ಗುಣಗಳುಂಟೋ ಅವೆಲ್ಲಕ್ಕೂ ತವರುಮನೆಯಾದ ಒಬ್ಬ ಆದರ್ಶ ಸ್ತ್ರೀಯೆಂದರೆ ಸೀತೆಯೇ. ವನಿತೆಯರಲ್ಲಿ ಪಾತಿವ್ರತ್ಯವು ಪರಮೋತ್ತಮಗುಣವೆಂದು ನಮ್ಮವರ ನಂಬಿಕೆ. ಅಂತಹ ಪಾತಿವ್ರತ್ಯಕ್ಕೆ ಪ್ರಥಮ ನಿದರ್ಶನವೆಂದರೆ ಜಾನಕಿ. 'ಪತಿವ್ರತಾ ಮಹಾಭಾಗಾ' ಎಂದು ಅವಳ ತಂದೆ ಜನಕರಾಜನೇ ಸೀತಾವಿವಾಹಸಂದರ್ಭದಲ್ಲಿ ಹೇಳಿದ್ದುಂಟು. 'ಛಾಯೇವಾನುಗತಾ ಸದಾ' ಎಂದೂ ಆತನು ಹೇಳಿದ್ದನು. ಹಾಗೆಯೇ ನೆರಳಿನಂತೆ ಪತಿಯಾದ ಶ್ರೀರಾಮನೊಡನೆ ವನಕ್ಕೆ ನಡೆದಳು. ವಾಲ್ಮೀಕಿ ಮುನಿಗಳು ಸೀತೆಯನ್ನು "ನಾರೀಣಾಮುತ್ತಮಾ ವಧೂಃ" ಎಂದು ಹೊಗಳಿದ್ದಾರೆ. ಇದಕ್ಕಿಂತ ದೊಡ್ಡ ಪ್ರಶಸ್ತಿ ಇನ್ನಾವುದು? ಭಾರತೀಯರು ತಮ್ಮ ಪ್ರಾಚೀನ ಸಂಸ್ಕೃತಿಗೆ ಅನುಗುಣವಾಗಿ ಯಾವ ಮೌಲ್ಯಗಳನ್ನು ನಂಬಿಕೊಂಡಿದ್ದರೋ ಆ ಮೌಲ್ಯಗಳಿಗೆ ಪ್ರತಿನಿಧಿಯಾಗಿ ಆ ಮೌಲ್ಯಗಳನ್ನು ಸಂರಕ್ಷಿಸಿದವಳು ಸೀತಾದೇವಿ. ಆ ಮೌಲ್ಯಗಳಿಗಾಗಿ ಅಷ್ಟು ಶ್ರಮಪಟ್ಟವರು, ಕಷ್ಟಪಟ್ಟವರು, ಅವನ್ನು ಹಿಡಿದು ಎತ್ತಿ ನಿಲ್ಲಿಸಿದವರು ಪುರಾಣಗಳಲ್ಲಾಗಲಿ ಚರಿತ್ರೆಗಳಲ್ಲಾಗಲಿ ಇನ್ನೊಬ್ಬಳು ಸಿಗಲಿಕ್ಕಿಲ್ಲ. ಪತಿವ್ರತೆಯರೆಂದು ವಿಖ್ಯಾತರಾದವರು ಅನೇಕರಿದ್ದಾರೆ. ಅನಸೂಯಾ, ಅರುಂಧತೀ, ಲೋಪಾಮುದ್ರಾ, ದಮಯಂತೀ – ಮೊದಲಾದವರು ಪತಿವ್ರತಾ ಶಿರೋಮಣಿಗಳೇ ಹೌದು. ಆದರೆ ಪಾತಿವ್ರತ್ಯದ ರಕ್ಷಣೆಗಾಗಿ ಸೀತಾದೇವಿಯಂತೆ ಯಾತನೆಯನ್ನನುಭವಿಸಿದವರು, ಕಠಿಣ ಪರೀಕ್ಷೆಗಳಿಗೆ ಒಳಗಾದವರು ಇನ್ನೊಬ್ಬರಿಲ್ಲ.

ಸ್ತ್ರೀಯರ ವಿಷಯದಲ್ಲಿ ನಮ್ಮವರು ಸಕಲ ಗೌರವಗಳನ್ನೂ ಸಲ್ಲಿಸುತ್ತಲೇ ಬಂದಿದ್ದಾರೆ. ಗಂಡಸಾಗಲಿ ಹೆಂಗಸಾಗಲಿ, ಪ್ರತಿಯೊಬ್ಬರಿಗೂ ಅವರವರ

ಕರ್ತವ್ಯವು ಭಿನ್ನವಾಗಿರುತ್ತದೆ. ದೇಶಕಾಲಪರಿಸ್ಥಿತಿಗಳಿಗೆ ಅನುಗುಣವಾಗಿ ಅದು ಆಗಾಗ ವ್ಯತ್ಯಾಸವಾಗಬಹುದು. ಈ ಪರಿಸ್ಥಿತಿಯಲ್ಲಿ ಈಗಿನ ಉದ್ದಾಮ ಬಯಕೆಗಳನ್ನು ಮುಂದೆಮಾಡಿ ಇವುಗಳೊಡನೆ ಸಾವಿರಾರು ವರ್ಷಗಳ ಹಿಂದಿನವರು ಸ್ತ್ರೀಯರಿಗಿತ್ತ ಸ್ಥಾನಗೌರವಗಳನ್ನು ಹೋಲಿಸುವುದು ಯುಕ್ತವಲ್ಲ. ಸೌಶೀಲ್ಯವೆಂದು ಮಾನವಜಾತಿಯು ಯಾವ ಯಾವ ಗುಣಗಳನ್ನು ಮಾನ್ಯಮಾಡಿದೆಯೋ ಅವುಗಳಿಗೆ ಯಾವಾಗಲೂ ದೇಶಕಾಲಗಳ ಕಟ್ಟು ಇಲ್ಲ. ವಿನಯ, ಸತ್ಯ, ದಯೆ, ತ್ಯಾಗ, ಪರೋಪಕಾರಾದಿ ಗುಣಗಳು ಎಲ್ಲ ಕಟ್ಟಗಳನ್ನು ಮೀರಿನಿಂತ ಶಾಶ್ವತ ಸದ್ಗುಣಗಳು.

## ಸಹಧರ್ಮಿಣಿ

ಜನಕರಾಜನು ಸೀತೆಯನ್ನು ಮದುವೆಮಾಡಿಕೊಡುವಾಗ **ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ** ಎಂದು ಹೇಳಿದ್ದ. ಈಗಲೂ ವಿವಾಹ ಕಾಲದಲ್ಲಿ 'ಧರ್ಮಪ್ರಜಾಸಂಪತ್‌ಸಿದ್ಧ್ಯರ್ಥಂ' ಎಂದು ಪುರೋಹಿತರು ಹೇಳುತ್ತಿರುವುದನ್ನು ಕೇಳಬಹುದು. ಧರ್ಮವು ಬಿಗಿದ ಈ ಸಾಹಚರ್ಯವು ಪಾಪಪುಣ್ಯ, ಲಾಭನಷ್ಟ, ಸುಖದುಃಖ– ಮುಂತಾದ ಎಲ್ಲ ದ್ವಂದ್ವಗಳಲ್ಲಿಯೂ ಅನುವರ್ತಿಸುತ್ತದೆ. 'ಜಾಯಾಪತ್ಯೋರ್ನ ವಿಭಾಗೋ ವಿದ್ಯತೇ' ಎಂದು ಧರ್ಮಸೂತ್ರ ಹೇಳುತ್ತದೆ. ಗಂಡಹೆಂಡಿರಿಗೆ ಆಸ್ತಿವಿಭಾಗ ಕೂಡ ಇಲ್ಲ. ಅವರಿಗೆ ಕಡೆಯತನಕ ಒಂದೇ ಆಸ್ತಿ. ಈ ನಂಬಿಕೆಯ ಬಾಳ್ವೆ ಸಹಧರ್ಮಚರ್ಯೆ.

ಶ್ರೀರಾಮನ ಯುವರಾಜ ಪಟ್ಟಾಭಿಷೇಕವು ಮುರಿದುಬಿತ್ತು. ಅವನು ವನವಾಸಕ್ಕೆ ಹೋಗುತ್ತೇನೆಂದು ಕೈಕೇಯಿಗೆ ಮಾತುಕೊಟ್ಟ. ತಾಯಿ ಕೌಸಲ್ಯೆಯಿಂದ ಬೀಳ್ಕೊಂಡು, ತನ್ನ ನಿವಾಸಕ್ಕೆ ಹಿಂದಿರುಗುತ್ತಾನೆ. ಅಲ್ಲಿಯವರೆಗೆ ವನವಾಸ ನಿಮಿತ್ತವಾಗಿ ಯಾವ ಚಿತ್ತವಿಕ್ರಿಯೆಯೂ ಅವನಿಗಾಗಿರಲಿಲ್ಲ. ಮಡದಿಯ ಬಳಿಗೆ ಬರುವಾಗ ಮಾತ್ರ ಒಂದು ಬಗೆಯ ನಾಚಿಕೆಯಿಂದ ತಲೆತಗ್ಗಿಸಿದ್ದನು. 'ಹ್ರಿಯಾ ಕಿಂಚಿದವಾಙ್ಮುಖಃ' ಅದನ್ನು ಗಮನಿಸಿದ ಜಾನಕಿ 'ಸ್ವಾಮಿ, ಈ ಸಮಯದಲ್ಲಿ ಇದೇಕೆ ಹೀಗೆ?'– **ಕಿಮಿದಾನೀಮಿದಂ ಪ್ರಭೋ** – ಎಂದು ಸಂಭ್ರಾಂತಚಿತ್ತಳಾಗಿ ಬಿಕ್ಕಿದಳು. ವೃತ್ತಾಂತವೆಲ್ಲವೂ ತಿಳಿಯಿತು. ತಾನೀಗ ವನಕ್ಕೆ ಹೊರಡುತ್ತಿದ್ದೇನೆಂದೂ ವನದಿಂದ ಬರುವವರೆಗೆ ಸೀತೆಯು ಅರಮನೆಯಲ್ಲಿಯೇ ಇರಬೇಕೆಂದೂ ತಿಳಿಸಿದ. ಅದಕ್ಕೆ ದೇವಿಯ ಪ್ರತಿಕ್ರಿಯೆಯೇನು? ಸಿಡಿಲೆರಗಿದಂತೆ ಬಂದ ಈ ಸುದ್ದಿಯಿಂದ ಇನ್ನೊಬ್ಬ ಸ್ತ್ರೀಯಾಗಿದ್ದರೆ ತತ್ತರಿಸಿಹೋಗುತ್ತಿದ್ದಳು.

"ಭರತನಿಗೆ ಬೇಕಾದರೆ ರಾಜ್ಯವನ್ನು ಕೊಟ್ಟುಕೊಳ್ಳಿ? ನೀನು ಕಾಡಿಗೆ ಹೋಗಬೇಕೆಂದು ಹೇಳಿದ್ದೇಕೆ?" ಎಂದು ದಶರಥ ಕೈಕೇಯಿಯರನ್ನು ಆಕ್ಷೇಪಿಸಿ ದೊಡ್ಡ ಕೋಲಾಹಲವನ್ನೇ ಮಾಡಿಬಿಡುತ್ತಿದ್ದಳು! ಆ ವಿಷಯವಾಗಿ ಜಾನಕಿಯ ಬಾಯಿಯಿಂದ ಒಂದು ಮಾತೂ ಬರಲಿಲ್ಲ. ಶ್ರೀರಾಮನನ್ನು ಕಾಡಿಗೆ ಕಳಿಸುವುದು ಹಿರಿಯರ ಇಚ್ಛೆಗೆ ಸಂಬಂಧಿಸಿದ್ದು. ಅಲ್ಲಿ ತಾನು ಬಾಯಿ ಹಾಕಬಾರದು – ಎಂದು ತಿಳಿದು ಶ್ರೀರಾಮನನ್ನೇ ಆಕ್ಷೇಪಿಸಿದಳು. "ಆರ್ಯ ಪುತ್ರ, ನಾನು ಅರಮನೆಯಲ್ಲಿರಬೇಕೆಂದು ಹೇಳಿದೆಯಲ್ಲ, ಇಷ್ಟು ಹಗುರವಾದ ಮಾತನ್ನು ನೀನು ಆಡಬಹುದೆ? ಕಾಡಿನಲ್ಲಿರಬೇಕೆಂದು ಮಾವನು ನಿನಗೆ ಅಪ್ಪಣೆಮಾಡಿದರೆ, ನನಗೂ ಅಪ್ಪಣೆಮಾಡಿದಂತೆಯೇ ಆಯಿತು. ಗಂಡನಿಗೆ ಬಂದ ಭಾಗ್ಯವೇ ಹೆಂಡತಿಗೂ ಸಲ್ಲುತ್ತದೆ. ನನ್ನನ್ನು ವನಕ್ಕೆ ಕರೆದುಕೊಂಡು ಹೋಗು" ಎನ್ನುತ್ತಾಳೆ–

**ಕಿಮಿದಂ ಭಾಷಸೇ ರಾಮ ವಾಕ್ಯಂ ಲಘುತಯಾ ಧ್ರುವಮ್ ॥**
**ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ ॥**
**ಅತಶ್ಚೈವಾಹಮಾದಿಷ್ಟಾ ವನೇ ವಸ್ತವ್ಯಮಿತ್ಯಪಿ ॥**
**ನಯ ಮಾಂ ವೀರ ವಿಸ್ರಬ್ಧಃ ॥**

*ಅಯೋ.೨೭.೨–೪*

"ನನ್ನನ್ನು ಬಿಟ್ಟುಹೋಗಲು, ನಾನು ಮಾಡಿದ ಪಾಪವೇನು?" ಎಂದು ಆಕ್ಷೇಪಿಸುತ್ತಾಳೆ. – **ಪಾಪಂ ಮಯಿ ನ ವಿದ್ಯತೇ** .

"ನೀನು ಅರಣ್ಯವನ್ನು ನೋಡಿದವಳಲ್ಲ. ಮುಳ್ಳುತುಂಬಿರುತ್ತದೆ. ಹೆಜ್ಜೆ ಇಡಲಾಗುವುದಿಲ್ಲ" ಎಂದರೆ, 'ಮುಳ್ಳನ್ನು ತೆಗೆದು ಹಾಕುತ್ತ ನಾನೇ ಮುಂದೆ ಹೋಗುತ್ತೇನೆ!' ಎಂದು ಅವಳ ಉತ್ತರ – **ಅಗ್ರತಸ್ತೇ ಗಮಿಷ್ಯಾಮಿ ಮೃದ್ನಂತೀ ಕುಶಕಂಟಕಾನ್.** ಅವಳಿಗೆ ಉತ್ತರಕೊಡಲಾರದೆ ಶ್ರೀರಾಮನೇ ಸೋತು ಹೋಗುತ್ತಾನೆ. ಅನಂತರ ಲಕ್ಷ್ಮಣನ ಸರದಿ. ಶ್ರೀರಾಮನಿಗೆ ಅವರಿಬ್ಬರನ್ನೂ ಕರೆದೊಯ್ಯುವ ಪ್ರಸಂಗವು ಅನಿರೀಕ್ಷಿತವಾಗಿ ಘಟಿಸುತ್ತದೆ. ಸ್ನೇಹಚೋದಿತ ವಾದ ಸೀತಾಲಕ್ಷ್ಮಣರ ತ್ಯಾಗ ಅನ್ಯತ್ರ ದುರ್ಲಭ.

## ಕೌಸಲ್ಯೆಯ ಹಿತವಚನ

ವನಗಮನಕ್ಕೆ ಸಿದ್ಧಳಾದ ಸೀತೆ ಕೌಸಲ್ಯೆಯ ಪಾದಗಳಿಗೆ ವಂದಿಸುತ್ತಾಳೆ.

ಆಗ ಕೌಸಲ್ಯೆ ಸೊಸೆಯನ್ನು ಅಪ್ಪಿಕೊಂಡು "ಸೀತೆ, ಲೋಕದಲ್ಲಿ ಸ್ತ್ರೀಯರು ಸಾಮಾನ್ಯವಾಗಿ ಗಂಡನ ಸುಖಕಾಲದಲ್ಲಿ ಸಂತೋಷವಾಗಿ ಇದ್ದುಬಿಡುತ್ತಾರೆ. ಗಂಡನಿಗೇನಾದರೂ ಕಷ್ಟವು ಪ್ರಾಪ್ತವಾದರೆ, ಆಗ ದೂರ ಸರಿಯುತ್ತಾರೆ. ಇದು ಲೋಕಸ್ವಭಾವ. ನೀನಾದರೋ ಪತಿಗೆ ಇಂತಹ ಆಪತ್ತಿನ ಕಾಲ ಒದಗಿದರೂ ಪತಿಯನ್ನು ಅನುಸರಿಸಿಕೊಂಡು ಹೊರಟಿದ್ದೀಯೆ. ಇದು ಸಾಧ್ವಿಯರ ಶುಭಕರವಾದ ನಡತೆ." ಎಂದು ಹೇಳಿ–

ಸ ತ್ವಯಾ ನಾವಮಂತವ್ಯಃ ಪುತ್ರಃ ಪ್ರವ್ರಾಜಿತೋ ವನಂ ।
ತವ ದೇವಸಮಸ್ತ್ವೇಷ ನಿರ್ಧನಃ ಸಧನೋಽಪಿ ವಾ ॥

*ಅಯೋ. ೩೯–೨೫*

ಎನ್ನುತ್ತಾಳೆ.

ನನ್ನ ಪುತ್ರನನ್ನು ಕಾಡಿಗೆ ಅಟ್ಟಿದ್ದಾರೆ. ಇವನನ್ನು ಅಸಡ್ಡೆಯಿಂದ ಕಾಣಬಾರದು. ಈತನ ಬಳಿ ಐಶ್ವರ್ಯವಿರಲಿ–ಇಲ್ಲದಿರಲಿ, ಇವನು ನಿನಗೆ ದೇವರಿಗೆ ಸಮಾನ" ಎಂದಳು. ಸೊಸೆಯ ಸೌಶೀಲ್ಯವು ಅವಳಿಗೆ ಚೆನ್ನಾಗಿ ಗೊತ್ತಿದ್ದರೂ, ಕಾಡಿಗೆ ಹೊರಟದ್ದರಿಂದ ಅದು ರುಜುವಾತಾಗಿದ್ದರೂ ಪುತ್ರ ವಾತ್ಸಲ್ಯವು ಉಕ್ಕಿಬಂದುದರಿಂದ ಈ ಮಾತು ಕೌಸಲ್ಯೆಯ ಬಾಯಿಯಿಂದ ಬಂದಿತು. ಇದಕ್ಕೆ ಸೀತೆಯು ಕೌಸಲ್ಯೆಗೆ ಕೈಮುಗಿದು ಹೇಳಿದ ಮಾತಿದು–

"ಅತ್ತೆ, ನಿನ್ನ ಆಜ್ಞೆಯಂತೆಯೇ ನಡೆಯುತ್ತೇನೆ. ಪತಿಯೊಡನೆ ಹೇಗೆ ನಡೆದುಕೊಳ್ಳಬೇಕೆಂಬುದು ನನಗೆ ಗೊತ್ತಿದೆ. ನನ್ನ ತಾಯಿತಂದೆಗಳಿಂದ ನಾನು ಕೇಳಿದ್ದೇನೆ. ಒಬ್ಬ ಕೀಳು ಹೆಂಗಸಿನಂತೆ ನಾನು ನಡೆದುಕೊಳ್ಳತಕ್ಕವಳಲ್ಲ. ಧರ್ಮಮಾರ್ಗದಿಂದ ಒಂದು ಹೆಜ್ಜೆಯೂ ಸರಿಯತಕ್ಕವಳಲ್ಲ."

ನಾತಂತ್ರೀ ವಾದ್ಯತೇ ವೀಣಾ ನಾಚಕ್ರೋ ವರ್ತತೇ ರಥಃ ।
ನಾಪತಿಃ ಸುಖಮೇಧೇತ ಯಾ ಸ್ಯಾದಪಿ ಶತಾತ್ಮಜಾ ॥

*ಅಯೋ. ೩೯–೨೯*

"ತಂತಿಯಿಲ್ಲದೆ ವೀಣೆ ನುಡಿಯುವುದಿಲ್ಲ. ಗಾಲಿಯಿಲ್ಲದೆ ಬಂಡಿ ಸಾಗುವುದಿಲ್ಲ. ಪತಿಯಿಲ್ಲದೆ ನಾರಿಗೆ ಏಳ್ಗೆಯಿಲ್ಲ. ಅವಳಿಗೆ ನೂರು ಮಕ್ಕಳಿದ್ದರೂ ಅಷ್ಟೆ" ಎಂದಳು. ಕೌಸಲ್ಯೆಗೆ ಕಣ್ಣೀರು ಉಕ್ಕಿಬಂದಿತು.

ಈ ಸಂದರ್ಭದಲ್ಲಿ ಮೊದಲು ಕೌಸಲ್ಯೆ ಹೇಳಿದ್ದ ಮಾತುಗಳು ಗಮನಾರ್ಹವಾದವು–

**ಅಸತ್ಯಃ ಸರ್ವಲೋಕೇಽಸ್ಮಿನ್ ಸತತಂ ಸತ್ಕೃತಾಃ ಪ್ರಿಯೈಃ ।**
**ಭರ್ತಾರಂ ನಾನುಮನ್ಯಂತೇ ವಿನಿಪಾತಗತಂ ಸ್ತ್ರಿಯಃ ॥**

ಎಲ್ಲ ಕಡೆಯಲ್ಲಿಯೂ ಕೆಟ್ಟ ಹೆಂಗಸರಿರುತ್ತಾರೆ. ಗಂಡಂದಿರು ಅವರನ್ನು ಪ್ರೀತಿಯಿಂದ ಸದಾ ನೋಡಿಕೊಳ್ಳುತ್ತಿದ್ದರೂ, ಗಂಡನು ಕಷ್ಟದಲ್ಲಿ ಸಿಲುಕಿದಾಗ ಅವನನ್ನು ಉಪೇಕ್ಷಿಸಿಬಿಡುತ್ತಾರೆ.

**ಏಷ ಸ್ವಭಾವೋ ನಾರೀಣಾಮನುಭೂಯ ಪುರಾ ಸುಖಂ ।**
**ಅಲ್ಪಾಮಪ್ಯಾಪದಂ ಪ್ರಾಪ್ಯ ದುಷ್ಯಂತಿ ಪ್ರಜಹತ್ಯಪಿ ॥**

ಮೊದಲು ಬೇಕಾದಷ್ಟು ಸುಖವನ್ನನುಭವಿಸಿದ್ದರೂ, ಸ್ವಲ್ಪ ಕಷ್ಟಬಂದರೆ ಸಾಕು, ಈ ಹೆಂಗಸರು ದುಷ್ಟರಾಗಿಬಿಡುತ್ತಾರೆ. ಗಂಡಂದಿರನ್ನು ಬಿಟ್ಟುಬಿಡುವುದೂ ಉಂಟು. ಇದು ಸ್ತ್ರೀಯರ ಸ್ವಭಾವ.

**ಅನಿತ್ಯಹೃದಯಾ ಹಿ ತಾಃ ॥**

ಅವರ ಹೃದಯ ಒಂದೇ ರೀತಿ ಇರುವುದಿಲ್ಲ.

ಆದರೆ ಸಾಧ್ವಿಯರು ಹೀಗೆ ಮಾಡುವುದಿಲ್ಲ– ಎಂದು ಕೌಸಲ್ಯೆ ಹೇಳಿದ್ದಾಳೆ.

ಮುಂದೆ ವನವಾಸದಲ್ಲಿರುವಾಗ ಶ್ರೀರಾಮನು ಸೀತಾಲಕ್ಷ್ಮಣಸಮೇತನಾಗಿ ಅಗಸ್ತ್ಯಮಹರ್ಷಿಗಳ ಆಶ್ರಮಕ್ಕೆ ಹೋಗುತ್ತಾನೆ. ಅಲ್ಲಿ ಅಗಸ್ತ್ಯಮುನಿಗಳು ಹೇಳಿದ ಮಾತು ಇದು–

"ರಾಮ, ಜನಕನಂದಿನಿಯಾದ ಈ ಸುಕುಮಾರಿ ಸೀತೆ ನಿನ್ನೊಡನೆ ಅರಣ್ಯಕ್ಕೆ ಬಂದುಬಿಟ್ಟಿದ್ದಾಳೆ. ಪತಿಯ ಮೇಲಿನ ಪ್ರೇಮದಿಂದ ಈ ಕಷ್ಟವನ್ನನುಭವಿಸುತ್ತಿದ್ದಾಳೆ. ಅವಳ ಚಿತ್ತಕ್ಕೆ ಹರ್ಷವಾಗುವಂತೆ ವರ್ತಿಸು. ಅವಳು ಹೀಗೆ ನಿನ್ನನ್ನು ಹಿಂಬಾಲಿಸಿ ಕಾಡಿಗೆ ಬಂದದ್ದು ಸಾಹಸಕಾರ್ಯವಾಯಿತು. ಏಕೆಂದರೆ–

**ಏಷಾ ಹಿ ಪ್ರಕೃತಿಃ ಸ್ತ್ರೀಣಾಮಾಸೃಷ್ಟೇ ರಘುನಂದನ ।**
**ಸಮಸ್ಥಮನುರಜ್ಯಂತಿ ವಿಷಮಸ್ಥಂ ತ್ಯಜಂತಿ ಚ ॥**

ರಾಘವ, ಜಗತ್ತು ಹುಟ್ಟಿದ ಲಾಗಾಯಿತು ಸ್ತ್ರೀಯರ ಸ್ವಭಾವವೇನೆಂದರೆ, ಗಂಡನು ಸುಖವಾಗಿದ್ದಾಗ ಪ್ರೀತಿಸುವುದು, ಅವನು ಕಷ್ಟದಲ್ಲಿ ಸಿಲುಕಿದಾಗ ಅವನನ್ನು ತ್ಯಜಿಸಿಬಿಡುವುದು!

**ಶತಹ್ರದಾನಾಂ ಲೋಲತ್ವಂ ಶಸ್ತ್ರಾಣಾಂ ತೀಕ್ಷ್ಣತಾಂ ತಥಾ ।**
**ಗರುಡಾನಿಲಯೋಃ ಶೈಘ್ರ್ಯಮನುಗಚ್ಛಂತಿ ಯೋಷಿತಃ ॥**

ಈ ತರುಣಿಯರು ಮಿಂಚಿನಂತೆ ಚಂಚಲಬುದ್ಧಿಯವರು. ಆಯುಧಗಳ ತೀಕ್ಷ್ಣತೆ ಇವರಲ್ಲಿರುತ್ತದೆ. ಗರುಡನಂತೆ, ಗಾಳಿಯಂತೆ ಇವರ ವ್ಯವಹಾರವು ಶೀಘ್ರವಾಗಿ ಬದಲಾಯಿಸಿಬಿಡುತ್ತದೆ!

**ಇಯಂತು ಭವತೋಭಾರ್ಯಾ ದೋಷೈರೇತೈರ್ವಿವರ್ಜಿತಾ ।**
**ಶ್ಲಾಘ್ಯಾ ಚ ವ್ಯಪದೇಶ್ಯಾ ಚ ಯಥಾ ದೇವೀ ಹ್ಯರುಂಧತೀ ॥**

*ಅರಣ್ಯ ೧೩.೫-೭*

ಆದರೆ ನಿನ್ನ ಪತ್ನಿಯು ಈ ಎಲ್ಲ ದೋಷಗಳಿಂದಲೂ ನಿರ್ಮುಕ್ತಳಾಗಿದ್ದಾಳೆ. ಇವಳು ಪ್ರಶಂಸನೀಯಳು. ಅರುಂಧತೀದೇವಿಯಂತೆ ಆದರ್ಶಭೂತಳಾಗಿದ್ದಾಳೆ.

ಸ್ತ್ರೀಯಾದ ಕೌಸಲ್ಯೆಗೂ ಪುರುಷರಾದ ಅಗಸ್ತ್ಯರಿಗೂ ಸ್ತ್ರೀಯರ ವಿಷಯದಲ್ಲಿ ಒಂದೇ ಅಭಿಪ್ರಾಯ. ಗಂಡಸರ ಸ್ವಭಾವವೂ ಹೆಂಗಸರ ಸ್ವಭಾವದಂತೆಯೇ ಸಂಮಿಶ್ರವಾದದ್ದು. ವಿಶೇಷವೇನೂ ಇಲ್ಲ. ಪ್ರಸಕ್ತವಾದ್ದರಿಂದ ಸ್ತ್ರೀ ಸ್ವಭಾವವನ್ನು ಎತ್ತಿಹೇಳಲಾಗಿದೆ. 'ದುರ್ಜನಾಃ ಸಂತೀತಿ ಸಜ್ಜನಾಃ ಶೋಭಂತೇ = ಕೆಟ್ಟವರು ಸಮಾಜದಲ್ಲಿರುವುದರಿಂದಲೇ ಒಳ್ಳೆಯವರು ಶೋಭಿಸುತ್ತಾರೆ!

## ಅನಸೂಯಾಪ್ರಶಸ್ತಿ

ಶ್ರೀರಾಮಾದಿಗಳು ಅತ್ರಿಮುನಿಗಳ ಆಶ್ರಮಕ್ಕೆ ಬಂದಾಗ ಮುನಿಗಳಿಗೆ ತುಂಬ ಸಂತೋಷವಾಗುತ್ತದೆ. ಅವರು ಸೀತಾದೇವಿಯ ಸೌಶೀಲ್ಯವನ್ನು ಹೊಗಳಿ, ತಮ್ಮ ಪತ್ನಿಯಾದ ಅನಸೂಯೆಯನ್ನು ಸಂದರ್ಶಿಸಲೆಂದು ಸಲಹೆ ಮಾಡುತ್ತಾರೆ. ಸೀತೆಯು ಆ ಕುಟೀರದೊಳಗೆ ಹೋಗಿ ಅನಸೂಯೆಯನ್ನು ಕಂಡಳು. ಅವಳಾದಲೋ ವೃದ್ಧೆ. ಸುಕ್ಕುಗಟ್ಟಿದ ಚರ್ಮ, ತಲೆಕೂದಲೆಲ್ಲ ಬೆಳ್ಳಗಾಗಿತ್ತು. ಗಾಳಿ ಬೀಸಿದಾಗ ಬಾಳೆಮರ ಅಲ್ಲಾಡುವಂತೆ ಮುಪ್ಪಿನಿಂದ ನಡುಗುತ್ತಿದ್ದಳು–

**ಶಿಥಿಲಾಂ ವಲಿತಾಂ ವೃದ್ಧಾಂ ಜರಾಪಾಂಡರಮೂರ್ಧಜಾಂ ।**
**ಸತತಂ ವೇಪಮಾನಾಂಗೀಂ ಪ್ರವಾತೇ ಕದಲೀ ಯಥಾ ॥**

*ಅಯೋ. ೧೧೭-೧೮*

ಅವಳು ಸೀತೆಯನ್ನು ಸ್ವಾಗತಿಸಿ ಆಕೆಯ ಸಾಧುಸ್ವಭಾವವನ್ನೂ ಪಾತಿವ್ರತ್ಯವನ್ನೂ ಪ್ರಶಂಸೆಮಾಡಿದಳು. **ಸ್ತ್ರೀಣಾಮಾರ್ಯಸ್ವಭಾವಾನಾಂ ಪರಮಂ ದೈವತಂ ಪತಿಃ** – ಎಂದಳು. "ನಿನ್ನ ಪತಿಯಾದ ರಾಮನು ವನವಾಸ ಮಾಡಬೇಕಾದರೂ ಅವನನ್ನು ಬಿಡದೆ ಅನುಸರಿಸಿಕೊಂಡಿದ್ದೀಯಲ್ಲ. ನಿನಗೆ ಸಮಾನರು ಯಾರುಂಟು?" – ಎಂದು ಹೊಗಳಿದಳು. ಸೀತೆಯ ವಿವಾಹ ವೃತ್ತಾಂತವನ್ನು ಅವಳ ಬಾಯಿಂದಲೇ ಕೇಳಬೇಕೆಂದು ಆ ಮುದುಕಿಗೆ ಚಾಪಲ್ಯ ಉಂಟಾಯಿತು! ಅವಳ ಅಪೇಕ್ಷೆಯಂತೆ ಸೀತೆ ತನ್ನ ಸ್ವಯಂವರ ವೃತ್ತಾಂತವನ್ನೆಲ್ಲ ಹೇಳಿದಳು. ಎಷ್ಟು ಸುಂದರವಾದ ಕಲ್ಪನೆ ಇದು, ತನ್ನ ಮದುವೆಯ ಸುದ್ದಿಯನ್ನು ತಾನೇ ಹೇಳುವುದು!

ಸೀತೆಯನ್ನು ಕಂಡು ಪರಮಸಂತುಷ್ಟಳಾದ ಅನಸೂಯೆ 'ಸೀತೆ, ನಾನು ಬಹಳ ತಪಸ್ಸುಮಾಡಿ ದಿವ್ಯಶಕ್ತಿಯನ್ನು ಗಳಿಸಿದ್ದೇನೆ. ನಿನಗೇನು ಬೇಕು? ನಡೆಸಿಕೊಡುತ್ತೇನೆ' ಎಂದಳು. ಆ ಕಷ್ಟಕಾಲದಲ್ಲಿಯೂ ಸೀತೆ ಹೇಳಿದ್ದೇನು? 'ಕೃತಂ'–ಇಷ್ಟೆ. 'ಸಾಕು, ಬೇಡ, ನೀವು ಇಷ್ಟು ವಾತ್ಸಲ್ಯದಿಂದ ನನ್ನನ್ನು ಮಾತಾಡಿಸಿದ್ದೀರಲ್ಲ, ಯಥೇಷ್ಟವಾಯಿತು' ಎಂದು ಅಭಿಪ್ರಾಯ. ಆದರೂ ಆ ವೃದ್ಧೆಗೆ ಮನಸ್ಸು ಕೇಳಲಿಲ್ಲ. ತನ್ನಲ್ಲಿದ್ದ ಶ್ರೇಷ್ಠವಾದ ವಸ್ತ್ರಾಭರಣಗಳನ್ನು ದಿವ್ಯಾಂಗರಾಗವನ್ನು ಸೀತೆಗೆ ಕೊಟ್ಟಳಂತೆ. ಆ ಪ್ರೀತಿದಾನವನ್ನು ಸೀತೆ ಸ್ವೀಕರಿಸಿದಳು! ಅಷ್ಟೇ ಅಲ್ಲ, ಅವನ್ನು ತನ್ನೆದುರಿಗೇ ಸೀತೆ ಧರಿಸಬೇಕೆಂದೂ ಅದನ್ನು ನೋಡಿ ತಾನು ಸಂತೋಷಪಡುವೆನೆಂದೂ ಆ ವೃದ್ಧೆ ಹೇಳಿದಳು.

**ಅಲಂಕುರು ಚ ತಾವತ್ತ್ವಂ ಪ್ರತ್ಯಕ್ಷಂ ಮಮ ಮೈಥಿಲೀ ।**
**ಪ್ರೀತಿಂ ಜನಯ ಮೇ ವತ್ಸೇ ದಿವ್ಯಾಲಂಕಾರ ಶೋಭಿತಾ ॥**

*ಅಯೋ. ೧೧೯-೧೧*

ಎಷ್ಟು ವಾತ್ಸಲ್ಯ ಆ ತಪಸ್ವಿನಿಗೆ!

## ಹೃದಯನಿವೇದನೆ

ದಂಡಕಾರಣ್ಯದಲ್ಲಿ ರಾಕ್ಷಸರ ಉಪದ್ರವ ವಿಪರೀತವಾಗಿತ್ತು. ಅವರು

ಹೇಗೆ ತಮಗೆ ತೊಂದರೆಕೊಡುತ್ತಿದ್ದಾರೆಂಬುದನ್ನು ಋಷಿಗಳು ಶ್ರೀರಾಮನಿಗೆ ತಿಳಿಸಿ, ಆ ಉಪದ್ರವವನ್ನು ತಪ್ಪಿಸಬೇಕೆಂದು ಕೇಳಿಕೊಂಡಿದ್ದರು. ಅವರ ಪ್ರಾರ್ಥನೆಯನ್ನು ನಡೆಸುವುದು ಕ್ಷತ್ರಿಯನೂ ರಾಜಪ್ರತಿನಿಧಿಯೂ ಆಗಿದ್ದ ಶ್ರೀರಾಮನ ಕರ್ತವ್ಯವಾಗಿತ್ತು. ಆದ್ದರಿಂದ ದುಷ್ಟರಾದ ರಾಕ್ಷಸರನ್ನು ಕೊಲ್ಲುತ್ತೇನೆಂದು ಅವನು ಋಷಿಗಳಿಗೆ ಪ್ರತಿಜ್ಞೆಮಾಡಿ, ದಂಡಕಾರಣ್ಯದೊಳಗೆ ಹೊರಟಿದ್ದನು. ಸೀತೆಗೆ ಮುಂದಿನ ಪರಿಸ್ಥಿತಿಯ ಅರಿವಾಯಿತು. ಅವಳು ಗಂಡನಿಗೆ ಹೃದ್ಯವೂ ಸ್ನಿಗ್ಧವೂ ಆದ ಮಾತಿನಲ್ಲಿ ಹೀಗೆಂದಳು – "ಶ್ರೀರಾಮ, ಮನುಷ್ಯನಿಗೆ ಬುದ್ಧಿಪೂರ್ವಕವಾಗಿ ಮೂರು ವ್ಯಸನಗಳು ಸಂಭವಿಸುತ್ತವೆ. ಸುಳ್ಳುಹೇಳುವುದು, ಪರಸ್ತ್ರೀಸಂಪರ್ಕ, ಕ್ರೌರ್ಯ. ಇವುಗಳಲ್ಲಿ ಮೊದಲನೆಯ ಎರಡು ದೋಷಗಳು ನಿನ್ನಲ್ಲಿ ಇಲ್ಲವೇ ಇಲ್ಲ. ಇದು ನಿಶ್ಚಿತ. ಈಗ ಮೂರನೆಯದಾದ ಕ್ರೌರ್ಯವು ಘಟಿಸಬಹುದೆಂದು ನನಗೆ ಹೆದರಿಕೆಯಾಗಿದೆ. ರಾಕ್ಷಸರನ್ನು ಕೊಲ್ಲುತ್ತೇನೆಂದು ಋಷಿಗಳಿಗೆ ಮಾತು ಕೊಟ್ಟು ಹೊರಟಿದ್ದೀಯೆ. ಇದರಿಂದ ನನಗೆ ಚಿಂತೆಯಾಗಿದೆ. ರಾಕ್ಷಸರಿಂದ ನಮಗೆ ಯಾವ ಅಪಕಾರವಾಗಿದೆ? ಏಕೆ ಅವರನ್ನು ಕೊಲ್ಲಬೇಕು? ನೀನೀಗ ತಪಸ್ವಿಯಾಗಿ ಕಾಡಿಗೆ ಬಂದಿದ್ದೀಯ. ಈಗ ಋಷಿಧರ್ಮವನ್ನು ಪಾಲಿಸಬೇಕು. ಮತ್ತೆ ಅಯೋಧ್ಯೆಗೆ ಹೋದಮೇಲೆ ಕ್ಷತ್ರಿಯಧರ್ಮವನ್ನು ಚರಿಸಬಹುದು. ಒಂದು ವೇಳೆ ರಾಜ್ಯದ ಆಸೆಯನ್ನೇ ತೊರೆದು ತಪಸ್ಸುಮಾಡುತ್ತ ಅರಣ್ಯದಲ್ಲೇ ಇರುವುದಾದರೆ ಇನ್ನೂ ಉತ್ತಮವೇ."

**ಧರ್ಮಸಾರಮಿದಂ ಜಗತ್ ।**
**ನಿತ್ಯ ಶುಚಿಮತಿಃ ಸೌಮ್ಯ ಚರ ಧರ್ಮಂ ತಪೋವನೇ ॥**

ಸೀತಾದೇವಿ ಎಷ್ಟು ಪರಿಶುದ್ಧ ಹೃದಯಳೆಂಬುದೂ ಅವಳ ಸೌಮ್ಯಸ್ವಭಾವವೂ ಇದರಿಂದ ಗೊತ್ತಾಗುತ್ತದೆ. ಗಂಡನಿಗೆ ಬುದ್ಧಿವಾದ ಹೇಳಿದ್ದು ಸರಿಯೆ? ದೇವಿಯೇ ಹೇಳುತ್ತಾಳೆ – ನಿನಗೆ ಇದೆಲ್ಲವೂ ತಿಳಿದ ಸಂಗತಿಯೇ ಸರಿ. ಧರ್ಮಜ್ಞನಾದ ನಿನಗೆ ನಾನು ಹೇಳಬೇಕಾದ್ದೇನಿದೆ?

**ಸ್ತ್ರೀಚಪಲಾದೇತದುದಾಹೃತಂ ಮಯಾ ।**
**ಯದ್ರೋಚತೇ ತತ್ಕುರು ।**

ಹೆಂಗಸರಿಗೆ ಸಹಜವಾದ ಚಾಪಲ್ಯದಿಂದ ಹೀಗೆ ಹೇಳಿಬಿಟ್ಟೆನು! ನಿನಗೆ ಹೇಗೆ ತೋರುತ್ತದೆಯೋ ಹಾಗೆ ಮಾಡಬಹುದು.

ಸೀತೆ ಎಷ್ಟು ನಯವಾಗಿ ಮಾತಾಡಿದಳೋ ಅಷ್ಟೇ ನಯದಿಂದ ಶ್ರೀರಾಮನು ಉತ್ತರಿಸುತ್ತಾನೆ. "ರಾಕ್ಷಸರು ನಮಗೆ ಅಪಕಾರಮಾಡದಿದ್ದರೂ ಋಷಿಗಳಿಗೆ ನಿಷ್ಕಾರಣವಾಗಿ ಹಿಂಸೆಕೊಡುತ್ತಿದ್ದಾರೆ. ಅವರ ಪೀಡೆಯನ್ನು ತಪ್ಪಿಸುತ್ತೇನೆಂದು ಋಷಿಗಳಿಗೆ ಮಾತುಕೊಟ್ಟಿದ್ದೇನೆ. ಕೊಟ್ಟ ಮಾತಿನಿಂದ ಹಿಂದೆ ಸರಿಯುವುದು ಯೋಗ್ಯವಲ್ಲ" – ಎಂದು ಹೇಳುತ್ತಾನೆ. ಕಡೆಯಲ್ಲಿ ಅವನು ಸೀತೆಯ ಸಾಂತ್ವನಕ್ಕಾಗಿ ಹೇಳುವ ಈ ನುಡಿಯನ್ನೆ ಕೇಳಿ–

**ಮಮ ಸ್ನೇಹಾಚ್ಚ ಸೌಹಾರ್ದಾದಿದಮುಕ್ತಂ ತ್ವಯಾನಘೇ ।**
**ಪರಿತುಷ್ಟೋಽಸ್ಮ್ಯಹಂ ಸೀತೇ ನ ಹ್ಯನಿಷ್ಟೋಽನುಶಿಷ್ಯತೇ ॥**

ಸೀತೆ, ನನ್ನ ಮೇಲಿರುವ ಸ್ನೇಹದಿಂದ ಒಳ್ಳೆಯ ಅಭಿಪ್ರಾಯವನ್ನಿಟ್ಟುಕೊಂಡೇ ಈ ಮಾತನ್ನು ಹೇಳಿದ್ದೀಯೆ. ನನಗೆ ಸಂತೋಷವಾಯಿತು. ಪ್ರೀತಿಪಾತ್ರನಲ್ಲ ದವನಿಗೆ ಯಾರೂ ಬುದ್ಧಿವಾದ ಹೇಳುವುದಿಲ್ಲ!

**ಸದೃಶಂ ಚಾನುರೂಪಂ ಚ ಕುಲಸ್ಯ ತವ ಚಾತ್ಮನಃ ।**
**ಸಧರ್ಮಚಾರಿಣೀ ಮೇ ತ್ವಂ ಪ್ರಾಣೇಭ್ಯೋಽಪಿ ಗರೀಯಸೀ ॥**

*ಅರಣ್ಯ ೧೦-೨೨*

ಸೀತೆ, ನಿನಗೂ ನಿನ್ನ ವಂಶಕ್ಕೂ ಯೋಗ್ಯವೂ ಅನುರೂಪವೂ ಆದ ಮಾತನ್ನಾಡಿದ್ದೀಯೆ. ನೀನು ನನ್ನ ಸಧರ್ಮಚಾರಿಣಿಯಲ್ಲವೆ? ನನಗೆ ಪ್ರಾಣಕ್ಕಿಂತಲೂ ಪ್ರಿಯತಮೆ ನೀನು.

ಇದು ಸೀತಾರಾಮರ ಸಂವಾದ ಪ್ರಕಾರ. ಸಂಸಾರದಲ್ಲಿ ದಂಪತಿಗಳಿಗೆ ಮತಭೇದವಾದರೆ ಪರಿಹರಿಸಿಕೊಳ್ಳುವ ವಿಧಾನ.

## ಸೀತಾಪಾರುಷ್ಯ

ಮಾರೀಚನು ಮಾಯಾಮೃಗರೂಪದಲ್ಲಿ ಬಂದು ವಂಚಿಸಿದ ಪ್ರಸಂಗದಲ್ಲಿ ಸೀತೆಯು ಲಕ್ಷ್ಮಣನಿಗೆ ಪರುಷ ವಾಕ್ಯಗಳನ್ನಾಡುತ್ತಾಳಷ್ಟೆ. ಅದು ತುಂಬ ಅನುಚಿತವಾಯಿತು. ತನ್ನ ಸೌಖ್ಯವನ್ನು ತೃಣಕ್ಕೆ ಸಮವೆಂದು ಬದಿಗೊತ್ತಿ ಕೇವಲ ತ್ಯಾಗಮನೋಭಾವದಿಂದ ಅರಣ್ಯಕ್ಕೆ ಬಂದು ಸೇವೆಯನ್ನು ಸಲ್ಲಿಸುತ್ತಿದ್ದ ಧೀರೋದಾತ್ತನೂ ವಿನೀತನೂ ಆದ ಲಕ್ಷ್ಮಣನಿಗೆ ಸೀತೆ ಹೇಳಿದ್ದು ಎಂದಿಗೂ

ಆಡಲಾರದ ಮಾತು. ಸಾಧ್ವೀಶಿರೋಮಣಿಯಾದ ಜಾನಕಿಯ ಬಾಯಿಯಿಂದ ಅಂತಹ ಕಠೋರವಾಕ್ಯಗಳು ಹೇಗೆ ಹೊರಟಿರಬಹುದು?

ಶೋಕ, ಭಯ, ಕ್ರೋಧ – ಇವುಗಳ ಅತಿರೇಕವಾದಾಗ ಬುದ್ಧಿ ನಮ್ಮ ಹತೋಟಿಯಲ್ಲುಳಿಯುವುದಿಲ್ಲ. ವಿವೇಕವು ಲುಪ್ತವಾಗುತ್ತದೆ. ಸರಿ–ತಪ್ಪುಗಳೆಂಬ ವಿಚಾರಶಕ್ತಿಯೇ ಮಾಯವಾಗಿಬಿಡುತ್ತದೆ. ಕೌಸಲ್ಯೆಯಂತಹ ಹಿರಿಯಳೂ ಸಹ ಮಗನ ವನವಾಸದುಃಖದಿಂದ ನೊಂದು ದಶರಥನನ್ನು ಹಂಗಿಸಿದ್ದಾಳೆ. ಪರಮ ಸಾಧುವಾದ ಧರ್ಮರಾಯನು ಯುದ್ಧದಲ್ಲಿ ಕರ್ಣನಿಂದಾದ ಅವಮಾನದಿಂದ ಶೋಕಸಂತಪ್ತನಾಗಿ ಅರ್ಜುನನಿಗೆ ಆಡಬಾರದ ಮಾತುಗಳನ್ನಾಡಿಬಿಟ್ಟನು. ಆ ಮಾತುಗಳಿಂದ ಕ್ರುದ್ಧನಾದ ಅರ್ಜುನನೂ ಸಹ ಧರ್ಮರಾಯನನ್ನು ಕೊಲ್ಲುವುದಕ್ಕಾಗಿ ಕತ್ತಿಯನ್ನು ಹಿರಿದಿದ್ದ. ಸೀತೆಗಾದರೋ ತನ್ನ ಪತಿಗೆ ಏನಾಗುವುದೋ ಎಂದು ಭಯ, ಏನಾಗಿ ಬಿಟ್ಟಿತೋ ಎಂದು ಶೋಕ, ತನ್ನ ಮಾತನ್ನು ಲಕ್ಷ್ಮಣನು ನಡೆಸದೆಹೋದನಲ್ಲ ಎಂದು ಕ್ರೋಧ – ಹೀಗೆ ಬುದ್ಧಿಯನ್ನು ಕೆಡಿಸುವ ಮೂರು ಕಾರಣಗಳು ಸೇರಿದಾಗ ಅವಳ ಬಾಯಿಯಿಂದ ಕಟುವಾಕ್ಯಗಳು ಹೊರಬಂದದ್ದು ಸಹಜವೇ. ಇದಕ್ಕಾಗಿ ಅವಳು ಅನಂತರ ಪಶ್ಚಾತ್ತಾಪ ಪಟ್ಟಿದ್ದಾಳೆ.

ಅನುಚಿತವಾದ ಒಂದು ಮಾತಿನ ಫಲವು ಘೋರವಾಗಿ ಪರಿಣಮಿಸಿತು. ಅಶೋಕವನದಲ್ಲಿ ಅವಳು ಅನುಭವಿಸಿದ ಮಾನಸಿಕ ಯಾತನೆಗಳಿಗೆ ಎಣೆ ಇಲ್ಲ. ಅಶೋಕ ವನವೇ ಶೋಕವನವಾಯಿತು. ರಾಮಲಕ್ಷ್ಮಣರಿಗಾದ ಚಿಂತೆ ಆತಂಕಗಳೆಷ್ಟು? ಮುಂದೆ ನಡೆದ ಘೋರಯುದ್ಧಗಳ ಪರಿಣಾಮವೆಷ್ಟು? ದುಡುಕಿದ ಒಂದು ಮಾತಿನಿಂದ ಏನೇನಾಗಿ ಬಿಡುತ್ತದೆಯೆಂಬುದಕ್ಕೆ ಇದೊಂದು ನಿದರ್ಶನ.

## ನ ಸ್ತ್ರೀ ಸ್ವಾತಂತ್ರ್ಯಮರ್ಹತಿ

ಮನುಸ್ಮೃತಿಯಲ್ಲಿ ಈ ಮಾತು ಬರುತ್ತದೆ–

**ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।**
**ಪುತ್ರೋ ರಕ್ಷತಿ ವಾರ್ಧಕ್ಯೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥**

“ಬಾಲ್ಯದಲ್ಲಿ ಸ್ತ್ರೀಯನ್ನು ತಂದೆಯು ರಕ್ಷಿಸುತ್ತಾನೆ. ಯೌವನಕಾಲದಲ್ಲಿ

ಅವಳನ್ನು ಗಂಡನು ರಕ್ಷಿಸುತ್ತಾನೆ. ಮುಪ್ಪಿನಲ್ಲಿ ಮಗನು ರಕ್ಷಿಸುತ್ತಾನೆ. ಆದ್ದರಿಂದ ಸ್ತ್ರೀಗೆ ಸ್ವಾತಂತ್ರ್ಯವು ಸಲ್ಲದು''

ಜನರು ಈ ಶ್ಲೋಕವನ್ನು ಪೂರ್ತಿಯಾಗಿ ಕೇಳದಿರಬಹುದು. ಮನುಸ್ಮೃತಿಯನ್ನು ಕಣ್ಣೆತ್ತಿಯೂ ನೋಡದಿರಬಹುದು. ಆದರೆ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮಾತನ್ನು ಬಹುಶಃ ಎಲ್ಲರೂ ಕೇಳಿದ್ದಾರೆ! ವಿಚಾರವಾದಿಗಳೆಂಬ ಮಹಾಜನರು ಮನುವಿನ ಈ ನುಡಿಯನ್ನು ಎಲ್ಲೆಲ್ಲಿಯೂ ಪ್ರಚಾರಮಾಡಿದ್ದಾರೆ. ಸ್ತ್ರೀಯರ ಸ್ವಾತಂತ್ರ್ಯವನ್ನೇ ಕಿತ್ತುಹಾಕಿದನೆಂದು ಮನು ಮಹಾರಾಯನನ್ನು ಯಥೇಚ್ಛವಾಗಿ ನಿಂದಿಸಿದ್ದಾರೆ. ಯಾವ ಪ್ರಕರಣದಲ್ಲಿ ಈ ಮಾತು ಬಂದಿದೆ, ಇದರ ಅರ್ಥವೇನು?- ಎಂಬ ವಿಚಾರವನ್ನೇ ಈ ವಿಚಾರವಾದಿಗಳು ಮಾಡಲಿಲ್ಲ. ಎಲ್ಲಿ ಯಾವುದು ಪ್ರಾಪ್ತವಾಗಿರುತ್ತದೆಯೋ ಅದಕ್ಕೆ 'ನ' ಎಂಬ ನಿಷೇಧವು ಅನ್ವಯಿಸುತ್ತದೆ. ಅಪ್ರಾಪ್ತವಾದ್ದಕ್ಕೆ ನಿಷೇಧವಿಲ್ಲ. ಊಟದ ಪ್ರಕರಣದಲ್ಲಿ 'ನೀನು ಊಟಮಾಡುತ್ತೀಯಾ?' ಎಂದು ಕೇಳಿದರೆ, ಒಬ್ಬನು 'ಇಲ್ಲ' ಎಂದು ಉತ್ತರಿಸುತ್ತಾನೆ. 'ಈಗ ನಾನು ಊಟ ಮಾಡುವುದಿಲ್ಲ' ಎಂದು ಆ ಮಾತಿನ ಅರ್ಥ. ಯಾವ ಸಂದರ್ಭದಲ್ಲಿಯೂ ಇನ್ನುಮೇಲೆ ಊಟಮಾಡುವುದೇ ಇಲ್ಲ' ಎಂದು ಆ ಮಾತಿಗೆ ಅರ್ಥವನ್ನು ಕಲ್ಪಿಸಬಹುದೆ?

ಸ್ತ್ರೀಯರ ರಕ್ಷಣೆ ಇಲ್ಲಿ ಪ್ರಸ್ತುತವಾದದ್ದು. ಬಾಲ್ಯ, ಯೌವನ, ಮುಪ್ಪುಗಳಲ್ಲಿ ಅವಳ ರಕ್ಷಣೆಯ ಭಾರವನ್ನು ತಂದೆ ಮೊದಲಾದವರು ವಹಿಸಿಕೊಳ್ಳಬೇಕು. ತನ್ನನ್ನು ತಾನೇ ರಕ್ಷಿಸಿಕೊಳ್ಳುತ್ತೇನೆಂಬ ಸ್ವಾತಂತ್ರ್ಯವನ್ನು ಅವಳಿಗೆ ವಹಿಸಬಾರದು-ಎಂದು ಅನುಕಂಪೆಯಿಂದ ಮನುವು ಹಿತೋಪದೇಶ ಮಾಡಿದ್ದಾನೆ. ಸ್ತ್ರೀಯರು ಅಬಲೆಯರಾದ್ದರಿಂದ ಯಾವಾಗಲೂ ಅವರಿಗೆ ರಕ್ಷಣೆ ಬೇಕಾಗುತ್ತದೆ ಎಂದು ಉದಾರಹೃದಯನಾದ ಮನುವಿನ ಆಶಯ. ಆದ್ದರಿಂದಲೇ ಶ್ರೀರಾಮನು ಸೀತಾರಕ್ಷಣೆಗಾಗಿ ಲಕ್ಷ್ಮಣನನ್ನು ನಿಯೋಜಿಸಿ ಮಾಯಾಮೃಗವನ್ನು ಹಿಂಬಾಲಿಸಿ ಹೋದನು. ಲಕ್ಷ್ಮಣನನ್ನು ಒತ್ತಾಯದಿಂದ ಕಳಿಸಿ ಸೀತೆ ಸ್ವತಂತ್ರಳಾದಳು. ಸ್ವಾತಂತ್ರ್ಯದ ಫಲವನ್ನೂ ಅನುಭವಿಸಿದಳು. ಕುಸುಮಕೋಮಲೆಯಾದ ಸೀತೆಯ ವಿಷಯವಿರಲಿ. ಹೆಣ್ಣುಸಿಂಹದಂತೆ ಗರ್ಜಿಸಬಲ್ಲ ದ್ರೌಪದಿಯ ಪಾಡು ಏನಾಯಿತು? ವನವಾಸದ ಸಂದರ್ಭದಲ್ಲಿ ಪಾಂಡವರಿಲ್ಲದಾಗ ದ್ರೌಪದಿಯನ್ನು ಸೈಂಧವನು ಬಲಾತ್ಕರಿಸಿ ಅವಳನ್ನು ರಥದಲ್ಲಿ ಹೇರಿಕೊಂಡು ಹೋಗಿದ್ದಾನೆ. ಮನುವೇ ಮೊದಲಾದ ಧರ್ಮಶಾಸ್ತ್ರ

ಕಾರರು ಸ್ತ್ರೀಯರಿಗೆ ಎಷ್ಟು ಗೌರವವನ್ನು ಸಲ್ಲಿಸಿ ಬರೆದಿದ್ದಾರೆಂಬುದನ್ನೂ ಈ ವಿಚಾರವಾದಿಗಳು ನೋಡಿದ್ದಾರೆಯೆ? ಪಕ್ಷಪಾತವನ್ನು ಮಾಡಿದರೆ, ಅದು ಧರ್ಮಶಾಸ್ತ್ರವೇ ಆಗುವುದಿಲ್ಲ.

## ಪಾರುಷ್ಯಕ್ಕೆ ಪಶ್ಚಾತ್ತಾಪ

ಲಕ್ಷ್ಮಣನು ಅತ್ಯಂತ ಪರಿಶುದ್ಧ ಹೃದಯನೆಂಬುದು ಸೀತೆಗೆ ತಿಳಿದೇ ಇತ್ತು. ಶೋಕಾವೇಶದಲ್ಲಿ ದುಡುಕಿನ ಮಾತನ್ನು ಆಡಿಬಿಟ್ಟಳು. ತನ್ನೊಬ್ಬಳನ್ನೇ ಬಿಟ್ಟುಹೋಗಲು ಅವನು ಏಕೆ ನಿರಾಕರಿಸಿದನೆಂಬುದು ಒಡನೆಯೇ ಅವಳಿಗೆ ಗೊತ್ತಾಯಿತು. ಅವಳು ಪಶ್ಚಾತ್ತಾಪದಿಂದ ಲಕ್ಷ್ಮಣನನ್ನು ಮುಂದೆ ವಿಶೇಷವಾಗಿ ಪ್ರಶಂಸೆಮಾಡಿದ್ದಾಳೆ. ಭಿಕ್ಷುವೇಷದಲ್ಲಿ ಬಂದಿದ್ದ ರಾವಣನಿಗೆ, ಲಕ್ಷ್ಮಣನು ಧರ್ಮಚಾರಿ, ದೃಢವ್ರತ, ಧರ್ಮನಿತ್ಯ, ಜಿತೇಂದ್ರಿಯ – ಎಂದು ಹೊಗಳಿ ನುಡಿದಿದ್ದಾಳೆ. ಈ ವಿಶೇಷಣಗಳು ಅವಳ ಹೃದಯವನ್ನು ಪ್ರತಿಬಿಂಬಿಸುತ್ತವೆ. ರಾವಣನು ಸೀತೆಯನ್ನು ಬಲಾತ್ಕಾರದಿಂದ ಒಯ್ಯುವಾಗ **ಹಾ ಲಕ್ಷ್ಮಣ ಮಹಾಬಾಹೋ ಗುರುಚಿತ್ತಪ್ರಸಾದಕ** ಎಂದು ಆರ್ತಸ್ವರದಿಂದ ಕೂಗುತ್ತಾಳೆ. ಅಶೋಕವನದಲ್ಲಿ ಹನುಮಂತನೊಡನೆ ಮಾತನಾಡುವಾಗ ಲಕ್ಷ್ಮಣನನ್ನು ವಿಶೇಷವಾಗಿ ಹೊಗಳಿದ್ದಾಳೆ.

**ಸಿಂಹಸ್ಕಂಧೋ ಮಹಾಬಾಹುರ್ಮನಸ್ವೀ ಪ್ರಿಯದರ್ಶನಃ ।**
**ಪಿತೃವದ್ವರ್ತತೇ ರಾಮೇ ಮಾತೃವನ್ಮಾಂ ಸಮಾಚರನ್ ॥**

*ಸುಂ. ೩೮–೬೦*

"ಲಕ್ಷ್ಮಣನು ಶ್ರೀರಾಮನಲ್ಲಿ ತಂದೆಯಂತೆಯೂ ನನ್ನನ್ನು ತಾಯಿಯಂತೆಯೂ ನೋಡಿಕೊಳ್ಳುತ್ತಾನೆ"

**ಮತ್ತಃ ಪ್ರಿಯತರೋ ನಿತ್ಯಂ ಭ್ರಾತಾ ರಾಮಸ್ಯ ಲಕ್ಷ್ಮಣಃ ॥**
**ತಂ ದೃಷ್ಟ್ವಾ ರಾಘವೋ ನೈವ ವೃತ್ತಮಾರ್ಯಮನುಸ್ಮರೇತ್ ॥**

"ಶ್ರೀರಾಮನಿಗೆ ನನ್ನಲ್ಲಿರುವುದಕ್ಕಿಂತಲೂ ತಮ್ಮನಾದ ಲಕ್ಷ್ಮಣನ ಮೇಲೆ ಹೆಚ್ಚು ಪ್ರೀತಿ ಇದೆ. ಜೊತೆಗೆ ಲಕ್ಷ್ಮಣನಿರುವುದನ್ನು ನೋಡಿ ರಾಘವನು ಮೃತನಾದ ತನ್ನ ತಂದೆಯನ್ನೂ ಸ್ಮರಿಸಿಕೊಳ್ಳುವುದಿಲ್ಲ!" ಈ ಮಾತುಗಳು ಸೀತೆಗಾದ ಪಶ್ಚಾತ್ತಾಪದಿಂದ ಮೂಡಿಬಂದವುಗಳೇ ಹೊರತು ಬೇರೆಯಲ್ಲ.

## ಕ್ಷತ್ರಿಯೋಚಿತವಾದ ಧೀರತೆ

ಜಾನಕಿಯು ಅತ್ಯಂತ ಕೋಮಲಹೃದಯಳೆಂಬುದನ್ನೂ, ಪಾತಿವ್ರತ್ಯದಲ್ಲಿ ಅವಳನ್ನು ಸರಿಗಟ್ಟುವವರು ಯಾರೂ ಇಲ್ಲವೆಂಬುದನ್ನೂ ನಾವು ಬಲ್ಲೆವು. ಕ್ಷತ್ರಿಯೋಚಿತವಾದ ಧೀರತೆಯೂ ಅವಳಲ್ಲಿತ್ತು. ರಾವಣನ ಮುಷ್ಟಿಯಲ್ಲಿ ಸಿಕ್ಕಿ ಏಕಾಕಿನಿಯಾಗಿ ನರಳುತ್ತಿದ್ದರೂ ರಾವಣನನ್ನು ಲೆಕ್ಕಿಸದೆ, ಕಠೋರವಾಕ್ಯಗಳನ್ನು ಅವನಿಗೆ ಹೇಳಿದ್ದಾಳೆ. ಅವನನ್ನು ಹುಲ್ಲು ಕಡ್ಡಿಯಂತೆ ಅಲಕ್ಷಿಸಿದ್ದಾಳೆ. ಒಂದು ಸಂದರ್ಭದಲ್ಲಿ ಸೀತೆಯ ಸ್ವಾಭಿಮಾನವೂ ಧೀರತೆಯೂ ಸ್ಪಷ್ಟವಾಗಿದೆ. ಅವಳ ಶೋಚನೀಯ ಪರಿಸ್ಥಿತಿಯನ್ನು ಕಂಡು ಹನುಮಂತನು "ತಾಯಿ, ನನ್ನ ಬೆನ್ನ ಮೇಲೆ ಕುಳಿತುಕೊ. ಈಗಲೇ ನಿನ್ನನ್ನೊಯ್ದು ಶ್ರೀರಾಮನ ಬಳಿಗೆ, ಸೇರಿಸಿಬಿಡುತ್ತೇನೆ!" ಎಂದು ಅನುಕಂಪೆಯಿಂದ ನುಡಿಯುತ್ತಾನೆ. ಇನ್ನೊಬ್ಬ ಸ್ತ್ರೀಯಾಗಿದ್ದರೆ ಒಪ್ಪಿಕೊಂಡು ಬಿಡುತ್ತಿದ್ದಳು! ಸೀತೆಯು ಒಪ್ಪಲಿಲ್ಲ. ಅದಕ್ಕೆ ಅವಳು ಹೇಳಿದ ಕಾರಣಗಳನ್ನು ನೋಡಿ. ಬುದ್ಧಿಪೂರ್ವಕವಾಗಿ ತಾನು ಪರಪುರುಷಸ್ಪರ್ಶವನ್ನು ಮಾಡುವುದಿಲ್ಲವೆಂಬುದು ಸಾಮಾನ್ಯವಾದ ಕಾರಣ. ಹನುಮಂತನು ಅವಳನ್ನು ಒಯ್ಯುತ್ತಿರುವಾಗ ರಾಕ್ಷಸರು ಅಡ್ಡಗಟ್ಟಿಯಾರು. ಸಾಗರದ ಮೇಲೆ ಹಾರುತ್ತಿರುವಾಗ ಅಪಾಯಕಾರಿಯಾಗಿ ಪರಿಣಮಿಸಬಹುದು – ಎಂಬುದು ಇನ್ನೊಂದು ಕಾರಣ. ಮುಖ್ಯವಾಗಿ ಅವಳು ಹೇಳುವ ಕಾರಣ ಬೇರೆ ಇದೆ. ಏನೆಂದರೆ–

**ಯದಿ ರಾಮೋ ದಶಗ್ರೀವಮಿಹ ಹತ್ವಾ ಸಬಾಂಧವಂ ।**
**ಮಾಮಿತೋ ಗೃಹ್ಯ ಗಚ್ಛೇತ ತತ್ತಸ್ಯ ಸದೃಶಂ ಭವೇತ್ ॥**

*ಸುಂ. ೩೭–೬೨*

ಶ್ರೀರಾಮನೇ ಇಲ್ಲಿಗೆ ಬಂದು ರಾವಣನ ಬಂಧುಗಳನ್ನೂ ಅವನನ್ನು ಕೊಂದು, ನನ್ನನ್ನೂ ಇಲ್ಲಿಂದ ಬಿಡಿಸಿಕೊಂಡು ಹೋದರೆ, ಅದು ಶ್ರೀರಾಮನಿಗೆ ಒಪ್ಪುವ ಕಾರ್ಯವಾಗುತ್ತದೆ.

ಇದೇ ಅಭಿಪ್ರಾಯವನ್ನು ಮತ್ತೊಮ್ಮೆ ಹೀಗೆ ತಿಳಿಸಿದ್ದಾಳೆ–

**ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।**
**ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್ ॥**

*ಸುಂ. ೩೯–೩೦*

ನನ್ನ ಗಂಡನಾದ ಶ್ರೀರಾಮನು ಆತ್ಮಾಭಿಮಾನಿ. ಕಕುತ್ಸ್ಥ, ಇಕ್ಷ್ವಾಕು, ರಘು – ಮುಂತಾದ ಮಹಾವೀರರ ವಂಶದಲ್ಲಿ ಹುಟ್ಟಿದವನು ತಾನೆಂಬ ಅಭಿಮಾನಶಾಲಿ. ಸ್ವತಃ ಅಸಾಧಾರಣ ಪರಾಕ್ರಮಿ. ನಿನ್ನ ಬೆನ್ನೇರಿ ಬಂದರೆ ಅವನು ಕ್ರುದ್ಧನಾಗಿ ನನ್ನನ್ನು ಹಂಗಿಸದೆ ಬಿಡುವುದಿಲ್ಲ. "ತನ್ನ ಪತ್ನಿಯನ್ನೊಬ್ಬ ರಾಕ್ಷಸನು ಕಳ್ಳತನದಿಂದ ಅಪಹರಿಸಿದನಂತೆ. ಒಬ್ಬ ವಾನರನು ಹೋಗಿ ಕಳ್ಳತನದಿಂದಲೇ ಬಿಡಿಸಿಕೊಂಡುಬಂದನಂತೆ"– ಎಂಬ ಕಥೆಗೆ ಈಡಾದೆನೆಂದು ವ್ಯಥೆಪಡುತ್ತಾನೆ. ಆತನ ಮನೋಧರ್ಮವನ್ನು ನಾನು ಬಲ್ಲೆ. ಆದ್ದರಿಂದ ಆತನೇ ಇಲ್ಲಿಗೆ ಬಂದು ರಾವಣನನ್ನು ಧ್ವಂಸಮಾಡಿ ನನ್ನನ್ನು ಕರೆದೊಯ್ಯಲಿ. ಆಗಲೇ ನಾನು ವೀರಪತ್ನಿಯೆನಿಸುವೆನು. ಅಲ್ಲಿಯವರೆಗೆ ಎಷ್ಟು ಕಷ್ಟವಾದರೂ ಅನುಭವಿಸಿಕೊಂಡಿರುತ್ತೇನೆ – ಎಂದು ಅವಳ ಹೃದ್ಗತವಾದ ಆಶಯ.

## ಕ್ಷಮಾಗುಣದ ಮೂರ್ತಿ

ಅಶೋಕವನದಲ್ಲಿದ್ದಾಗ ಜಾನಕಿಯನ್ನು ಕಾಯುತ್ತಿದ್ದ ರಾಕ್ಷಸಿಯರು ಅವಳನ್ನು ತುಂಬ ಹಿಂಸೆಗೆ ಒಳಪಡಿಸಿದ್ದರು. ರಾವಣನ ಆಜ್ಞೆಯಂತೆ ಕ್ರೂರವಾದ ಮಾತುಗಳಿಂದ ಹೆದರಿಸುತ್ತಿದ್ದರು. ಹುಲಿಗಳು ಸುತ್ತುಗಟ್ಟಿದ ಹುಲ್ಲೆಯ ಹಾಗೆ ಅವಳ ಪರಿಸ್ಥಿತಿಯಾಗಿತ್ತು. ಇದನ್ನೆಲ್ಲ ಹನುಮಂತನು ಸ್ವತಃ ಕಂಡಿದ್ದನು. ರಾವಣನ ಸಂಹಾರವಾದ ಮೇಲೆ ಶ್ರೀರಾಮನ 'ವಿಜಯವಾರ್ತೆ'ಯನ್ನು ದೇವಿಗೆ ತಿಳಿಸುವ ಭಾಗ್ಯವೂ ಅವನಿಗೆ ಒದಗಿಬಂದಿತು. ವಿಜಯವಾರ್ತೆಯನ್ನು ಕೇಳಿದಾಗ ಸೀತೆಗೆ ಪರಮಾನಂದವಾಯಿತು. ಹನುಮಂತನನ್ನು ಅಭಿನಂದಿಸುತ್ತ–

**ನ ಹಿ ಪಶ್ಯಾಮಿ ತತ್ ಸೌಮ್ಯ ಪೃಥಿವ್ಯಾಮಪಿ ವಾನರ ।**
**ಸದೃಶಂ ಮತ್ಪ್ರಿಯಾಖ್ಯಾನೇ ತವ ದಾತುಂ ಸಮಂ ಭವೇತ್ ॥**

*ಯುದ್ಧ ೧೧೬–೨೦*

ಎನ್ನುತ್ತಾಳೆ.

"ಸೌಮ್ಯ–ಹನುಮಂತ, ಈ ಸಂತೋಷದ ಸುದ್ದಿಯನ್ನು ಹೇಳಿದ್ದಕ್ಕೆ ಪಾರಿತೋಷಿಕವೆಂದು ಈ ಜಗತ್ತಿನಲ್ಲಿ ಏನನ್ನು ನಿನಗೆ ನೀಡಿದರೂ ಸಾಟಿಯಾಗದು" ಎಂದು ಗದ್ಗದಿಸುತ್ತಾಳೆ. ಹನುಮಂತನಿಗೆ ಯಾವ ವಸ್ತು ಬೇಕಾಗಿತ್ತು? ಅವನು ಕೇಳಿಕೊಂಡದ್ದು ಇದು: "ದೇವಿ, ಈ ರಾಕ್ಷಸಿಯರು ನಿನ್ನನ್ನು ತುಂಬ ಹಿಂಸೆಪಡಿಸಿದ್ದಾರೆ. ಇವರನ್ನು ಚಿತ್ರಹಿಂಸೆಯಿಂದ

ಕೊಲ್ಲಬೇಕೆಂದು ಮನಸ್ಸಾಗಿದೆ. ಈ ಕೆಟ್ಟ ರಾಕ್ಷಸಿಯರನ್ನು ಬಡಿದು ಕೊಂದು ಬಿಡುತ್ತೇನೆ! ಇದೇ ನಾನು ಕೇಳಿಕೊಳ್ಳುವ ವರ!'' ಎಂದನು. ಅದಕ್ಕೆ ಈ ದೇವಿಯು ಹೇಳಿದ್ದೇನು? ``ಸೌಮ್ಯ-ವಾನರೋತ್ತಮ, ಈ ರಾಕ್ಷಸಿಯರು ರಾವಣನ ದಾಸಿಯರು. ಅವನು ಹೇಳಿದಂತೆ ನಡೆದುಕೊಂಡಿದ್ದಾರೆ. ಇವರ ಮೇಲೆ ನಾವು ಕೋಪಿಸಿಕೊಳ್ಳಬಹುದೆ? ನಾನು ಮಾಡಿದ ಕರ್ಮ ಹಾಗಿತ್ತು, ಕಷ್ಟವನ್ನನುಭವಿಸಿದೆ. ಸ್ವಾಮಿಗೆ ವಿಧೇಯರಾಗಿ ನಡೆದುಕೊಂಡ ಇವರ ಮೇಲೆ ಸೇಡು ತೀರಿಸಿಕೊಳ್ಳುವುದು ಯುಕ್ತವಲ್ಲ. 'ನ ಕಶ್ಚಿನ್ನಾಪರಾಧ್ಯತಿ' ತಪ್ಪು ಮಾಡದೇ ಇರುವವರು ಯಾರೂ ಇಲ್ಲ. ಇವರು ಪಾಪಕೃತ್ಯವನ್ನೆಸಗಿದ್ದರೂ ನಾನು ಕ್ಷಮಿಸುತ್ತೇನೆ'' ಎಂದಳು.

'ಕ್ಷಮಯಾ ಧರಿತ್ರೀ' ಎಂಬ ಮಾತಿದೆ. ಭೂಮಿಗೆ 'ಕ್ಷಮಾ' ಎಂಬ ಹೆಸರು ಕೂಡ ಇದೆ. ಅದನ್ನು ಒದ್ದರೂ ಅಗೆದರೂ ಕಡಿದರೂ ಭೂಮಿಯು ಮನುಷ್ಯನನ್ನು ಕ್ಷಮಿಸಿಬಿಡುತ್ತಾಳೆ. ಪ್ರತಿಯಾಗಿ ಸಸ್ಯಸಮೃದ್ಧಿಯನ್ನೇ ನೀಡುತ್ತಾಳೆ. ಭೂದೇವಿಯ ಮಗಳು ಸೀತೆ. 'ಕ್ಷಮಯಾ ಪೃಥಿವೀಸಮಾಃ' ಎಂದು ಖ್ಯಾತನಾದ ಶ್ರೀರಾಮನ ಪತ್ನಿ.

## ವರಪ್ರದಾನ

ಶ್ರೀರಾಮ-ಸೀತೆಯರಿಗೆ ಹನುಮಂತನಿಂದಾದ ಉಪಕಾರ-ಸೇವೆ ಅಸಾಧಾರಣವಾದದ್ದು. ಅದಕ್ಕೆ ಪ್ರತಿಫಲವಾಗಿ ಹನುಮಂತನಿಗೆ ಏನನ್ನು ನೀಡಿದರೂ ಅಲ್ಪವೇ. ಲಂಕೆಯಲ್ಲಿದ್ದ ಸೀತೆಯ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸಿ, ಅವಳ ಚೂಡಾಮಣಿಯನ್ನು ಅಭಿಜ್ಞಾನವೆಂದು ಸಮರ್ಪಿಸಿದಾಗ, ಶ್ರೀರಾಮನು ಇತ್ತುದೇನು? ದೀನನಾಗಿ ಅರಣ್ಯದಲ್ಲಿ ಅಲೆಯುತ್ತಿರುವಾಗ ಪಾರಿತೋಷಕವಾಗಿ ಕೊಡಲು ತಾನೇ ಅವನ ಬಳಿ ಏನಿತ್ತು? ಹನುಮಂತನನ್ನೆ ಹೃದಯಪೂರ್ವಕವಾಗಿ ಹೊಗಳಿ-

> **ಏಷ ಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ ।**
> **ಮಯಾ ಕಾಲಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ ॥**

*ಯುದ್ಧ ೧-೧೪*

ಎಂದು ಹೇಳಿ, ಹನುಮಂತನನ್ನು ಗಾಢವಾಗಿ ಆಲಿಂಗಿಸಿಕೊಂಡಿದ್ದನು. ಈಗ ಸೀತೆ ಏನು ಮಾಡಿಯಾಳು? ಪಟ್ಟಾಭಿಷೇಕ ಸಮಯದಲ್ಲಿ ದೇವೇಂದ್ರನು

ಶ್ರೀರಾಮನಿಗೆ ಒಂದು ದಿವ್ಯವಾದ ಮುತ್ತಿನ ಸರವನ್ನು ಕಾಣಿಕೆಯಾಗಿ ಕಳಿಸಿದ್ದನು. ಅದನ್ನು ಶ್ರೀರಾಮನು ಜಾನಕಿಯ ಕೊರಳಿಗೆ ಹಾಕಿದನು. ಅವಳು ಅದನ್ನು ಕೊರಳಿಂದ ತೆಗೆದು ಕೈಯಲ್ಲಿ ಹಿಡಿದುಕೊಂಡು, ನೆರೆದಿದ್ದ ವಾನರರ ಸಮೂಹವನ್ನೂ ಪತಿಯ ಮುಖವನ್ನೂ ನೋಡುತ್ತಿದ್ದಳು.

ಅವಳ ಇಂಗಿತವನ್ನರಿತು–

**ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ ॥**

ಎಂದನು.

**ದದೌ ಸಾ ವಾಯುಪುತ್ರಾಯ ತಂ ಹಾರಮಸಿತೇಕ್ಷಣಾ ॥**

ಮುತ್ತಿನ ಸರವನ್ನು ಹನುಮಂತನಿಗೆ ಕೊಟ್ಟಳು. ಇದು ಹನುಮಂತನಿಗೆ ಸಂದ ವರಪ್ರದಾನ.

ಉಪನ್ಯಾಸದ ಸಮಯ ಕಳೆಯುತ್ತ ಬಂದಿತು. ಆದರೂ ಎರಡು ವಿಷಯಗಳನ್ನು ಪ್ರಸ್ತಾವಿಸಬೇಕೆನಿಸಿದೆ. ಸಂಕ್ಷೇಪವಾಗಿ ಹೇಳಿ ಮುಗಿಸುತ್ತೇನೆ.

## ಯುದ್ಧವಾದ ಮೇಲೆ ಸೀತೆಯ ಅಗ್ನಿಪ್ರವೇಶ

ಆ ಸಮಯದಲ್ಲಿ ಶ್ರೀರಾಮನು ದೇವಿಗೆ ಕಠೋರವಾದ ಮಾತುಗಳನ್ನಾಡಿದ್ದು ತುಂಬ ಅನುಚಿತವೆಂದು ವಿಮರ್ಶಕರು ಹೇಳುತ್ತಿದ್ದಾರೆ. ಭವಭೂತಿಯು ವರ್ಣಿಸಿದಂತೆ 'ಅಪಿ ಗ್ರಾವಾ ರೋದಿತ್ಯಪಿ ದಲತಿ ವಜ್ರಸ್ಯ ಹೃದಯಂ' ಎಂಬುದಾಗಿ, ಸೀತಾವಿರಹದಿಂದ ಕಾಡಿನಲ್ಲಿ ಗೋಳಾಡಿದ ಶ್ರೀರಾಮನ ಹೃದಯ ಅದೇಕೆ ಇದ್ದಕ್ಕಿದ್ದ ಹಾಗೆ ಕಠೋರವಾಗಿಬಿಟ್ಟಿತು? ವಾನರಸಮೇತನಾಗಿ ಸಮುದ್ರದ ತೀರಕ್ಕೆ ಬಂದಾಗಲೂ **ವಾಹಿ ವಾತ ಯತಃ ಕಾಂತಾ ತಾಂ ಸ್ಪೃಷ್ಟ್ವಾ ಮಾಮಪಿ ಸ್ಪೃಶ** ಎಂದು ಹಲುಬಿದವನು, 'ಲಕ್ಷ್ಮಣ, ಈ ವಿರಹವೇದನೆಯನ್ನೂ ಸಹಿಸಲಾರೆ, ಸಮುದ್ರದಲ್ಲಿಳಿದು ನೀರಲ್ಲಿ ಮಲಗಿಬಿಡುತ್ತೇನೆ! ಎಂದು ಹಂಬಲಿಸಿದವನು, ಸೀತೆಯು ಎದುರಿಗೆ ಬಂದಾಗ ಮುಖವನ್ನು ಸಿಟ್ಟಿನಿಂದ ತಿರುಗಿಸಿದ್ದೇಕೆ?

ಶ್ರೀರಾಮನು ಇಲ್ಲಿ ಬಾಲಿಶವಾಗಿ ವರ್ತಿಸಿದ್ದಾನೆಂದೂ ಅವನಾಡಿದ ಕೀಳುನುಡಿ ಅಕ್ಷಮ್ಯವಾದದ್ದೆಂದೂ ಬಹಳ ಮಂದಿ ವಿದ್ವಾಂಸರು ಹೇಳಿದ್ದಾರೆ.

ನಾನು ಅವರೆಲ್ಲರ ಕ್ಷಮೆಯನ್ನು ಬೇಡುತ್ತೇನೆ. ವಿನಯದಿಂದ ಅವರಿಗೆ ಕೈಮುಗಿದು ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ.

ಸೀತೆಯು ಅತ್ಯಂತ ಪರಿಶುದ್ಧಳೆಂಬುದು ಶ್ರೀರಾಮನಿಗೆ ಸ್ಪಷ್ಟವಾಗಿ ತಿಳಿದಿತ್ತು. ಹನುಮಂತನು ಅವಳ ಪಾತಿವ್ರತ್ಯವನ್ನು ಕೊಂಡಾಡಿ ಸಾಕ್ಷ್ಯವನ್ನೇ ಕೊಟ್ಟಿದ್ದಾನೆ. ಸೀತೆಯು ರಾವಣನಿಗೆ ಹೇಳಿದ ಪರುಷೋಕ್ತಿಗಳನ್ನು ಪ್ರತ್ಯಕ್ಷವಾಗಿ ಕೇಳಿದವನು ಹನುಮಂತ. ಪತ್ನಿಯ ಶೀಲದ ವಿಷಯದಲ್ಲಿ ಶ್ರೀರಾಮನಿಗೆ ಸಂದೇಹಲೇಶವೂ ಇರಲಿಲ್ಲ.

**ಅನನ್ಯಾ ಹಿ ಮಯಾ ಸೀತಾ ಭಾಸ್ಕರಸ್ಯ ಪ್ರಭಾ ಯಥಾ ॥**

ಎಂದು ಸ್ಪಷ್ಟವಾಗಿ ನುಡಿದಿದ್ದಾನೆ. ಹಾಗಿದ್ದರೆ ಏಕಿಷ್ಟು ಕೋಲಾಹಲವಾಯಿತು? ಕಾರಣವನ್ನು ಶ್ರೀರಾಮನೇ ತಿಳಿಸಿದ್ದಾನೆ. "ಜಾನಕಿ ಬಹಳಕಾಲ ರಾವಣನ ವಶದಲ್ಲಿದ್ದಳು. ಇವಳ ಚಾರಿತ್ರವನ್ನು ಶೋಧಿಸದೆ ಸ್ವೀಕರಿಸಿದರೆ, ಲೋಕವೇನು ಹೇಳೀತು? 'ಈ ದಶರಥನ ಮಗ ಕಾಮಾತ್ಮ; ಬಾಲಿಶ. ಸೀತೆ ಸಿಕ್ಕಿದರೆ ಸಾಕು ಎಂದು ಕಾದುಕೊಂಡಿದ್ದ' ಎಂದು ಜನರು ನನ್ನನ್ನು ಹಂಗಿಸದೆ ಬಿಡುವುದಿಲ್ಲ. ಆದ್ದರಿಂದ ಅವಳನ್ನು ಪರೀಕ್ಷೆಗೆ ಒಳಪಡಿಸಿದೆ. ಇವಳು ಅನನ್ಯ ಹೃದಯಳಾದವಳು. ನನ್ನ ಪರಮಭಕ್ತಳು"

ಈ ಮಾತನ್ನು ನಂಬದಿರಲು ಕಾರಣವೇನೂ ಇಲ್ಲ. ಮೊದಲನೆಯದಾಗಿ ಹನುಮಂತನೊಬ್ಬನನ್ನು ಬಿಟ್ಟು ಉಳಿದ ವಾನರರೇ ಈ ಶಂಕೆಗೆ ಒಳಗಾಗುತ್ತಿದ್ದರು. ತಾರೆ, ರಮೆಯರ ಚೆಲ್ಲಾಟವನ್ನು ಅವರು ಕಂಡಿದ್ದರು. ಇಷ್ಟಾದರೂ ಅಯೋಧ್ಯೆಯಲ್ಲಿ ಸೀತಾಚಾರಿತ್ರದ ವಿಷಯವಾಗಿ ಮತ್ತೆ ಗುಲ್ಲೆದ್ದಿತೆಂಬುದನ್ನೂ ಮನಸ್ಸಿಗೆ ತಂದುಕೊಂಡರೆ, ಲೋಕಾಪವಾದವು ಎಷ್ಟು ಪ್ರಬಲವಾಗಿ ಹಬ್ಬುತ್ತದೆಯೆಂಬುದು ಗೊತ್ತಾಗುತ್ತದೆ. ಇಂತಹ ಸಂದರ್ಭದಲ್ಲಿ 'ದಿವ್ಯ' ಎಂಬ ಒಂದು ಪರೀಕ್ಷೆಯನ್ನು ಧರ್ಮಶಾಸ್ತ್ರಕಾರರು ಹೇಳಿದ್ದಾರೆ. ಅಗ್ನಿಪ್ರವೇಶವು ದಿವ್ಯದ ಪರಮಾವಧಿ. ಜಾನಕಿಯು ಈ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ತನ್ನ ಪರಮಪವಿತ್ರ ಚಾರಿತ್ರವನ್ನು ಲೋಕವಿಶ್ರುತವಾಗಿ ಮಾಡಿದಳು. ಆದ್ದರಿಂದಲೇ ಅವಳು ಅಗ್ನಿಪ್ರವೇಶ ಮಾಡುವಾಗ–

**ಯಥಾ ಮೇ ಹೃದಯಂ ನಿತ್ಯಂ ನಾಪಸರ್ಪತಿ ರಾಘವಾತ್ ।**
**ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ ॥**

ಎಂದು ಹೇಳಿದ್ದಾಳೆ. 'ಮಾಂ ಪಾತು ಪಾವಕಃ = ಅಗ್ನಿಯು ನನ್ನನ್ನು ರಕ್ಷಿಸಲಿ' ಎಂದು ಮೂರು ಸಲ ನುಡಿದಿದ್ದಾಳೆ. ದೇಹತ್ಯಾಗವೇ ಅವಳ ಉದ್ದೇಶ ವಾಗಿದ್ದರೆ 'ನನ್ನನ್ನು ಅಗ್ನಿಯು ರಕ್ಷಿಸಲಿ' ಎಂದು ಬೇಡಿಕೊಳ್ಳುವುದಕ್ಕೆ ಕಾರಣವೇ ಇರುವುದಿಲ್ಲ. ವಾಲ್ಮೀಕಿಮುನಿಗಳೂ ಸಹ ಸೀತಾಪರೀಕ್ಷೆಯೇ ತನ್ನ ಉದ್ದೇಶವಾಗಿತ್ತೆಂದು ಶ್ರೀರಾಮನ ಬಾಯಿಯಿಂದ ಹೇಳಿಸಿದ್ದಾರೆ. "ಧರ್ಮಾತ್ಮ ನಾದ ಶ್ರೀರಾಮನು ಆ ಸಮಯದಲ್ಲಿ ಬಾಷ್ಪವ್ಯಾಕುಲನೇತ್ರನಾಗಿದ್ದನು" ಎಂದು ವರ್ಣಿಸಿಯೂ ಇದ್ದಾರೆ. ಸೀತಾತ್ಯಾಗವೇ ಶ್ರೀರಾಮನ ಉದ್ದೇಶವಾಗಿ ದ್ದಲ್ಲಿ ಅವನನ್ನು ಧರ್ಮಾತ್ಮನೆಂದೂ ಬಾಷ್ಪವ್ಯಾಕುಲನೇತ್ರನಾಗಿದ್ದನೆಂದೂ ಹೇಳಲು ಕಾರಣವೇ ಉಳಿಯುವುದಿಲ್ಲ. ವಾಲ್ಮೀಕಿಗಳ ಮಾತನ್ನೇ ನಂಬದೆ ಹೋದರೆ, ಕವಿಗೆ ಅಪಚಾರವಾಗುವುದೇ ಹೊರತು ಬೇರೆಯಾಗದು.

## ಸೀತಾಪರಿತ್ಯಾಗ

ಅಗ್ನಿಪ್ರವೇಶಮಾಡಿದರೂ ಅಗ್ನಿಯು ಸುಡದೇ ಹೋದಾಗ ಅದು ಲೋಕವಿಖ್ಯಾತವಾದ ಪರಮಸಾಕ್ಷ್ಯವಾಗುತ್ತದೆ. ಸೀತಾದೇವಿಯ ವಿಷಯದಲ್ಲಿ ಇನ್ನೂ ಒಂದು ಅದ್ಭುತ ನಡೆದುಹೋಯಿತು. ಅಗ್ನಿದೇವನೇ ಪ್ರತ್ಯಕ್ಷನಾಗಿ ದೇವಿಯನ್ನು ತಂದು ಶ್ರೀರಾಮನಿಗೆ ಒಪ್ಪಿಸಿದನು. ಬ್ರಹ್ಮಾದಿದೇವತೆಗಳೂ ಪ್ರತ್ಯಕ್ಷರಾಗಿ ದೇವಿಯ ಶುದ್ಧಚಾರಿತ್ರವನ್ನು ಪ್ರಶಂಸೆಮಾಡಿದರು. ಇದೆಲ್ಲವೂ ಸುಗ್ರೀವಾದಿ ಸಮಸ್ತಜನರ ಎದುರಿಗೇ ನಡೆದುಹೋಯಿತು. ಪ್ರತ್ಯಕ್ಷವಾದ ಈ ವೃತ್ತಾಂತವನ್ನೂ ಸಹ ಕೋಸಲರಾಜ್ಯದ ಬಹುಮಂದಿ ಪ್ರಜೆಗಳು ನಂಬದೆಹೋದರು. ರಜಕನೊಬ್ಬನು ಕೆಟ್ಟ ಮಾತನ್ನಾಡಿದನೆಂದು ರಾಮಾಯಣ ದಲ್ಲಿಲ್ಲ. ಪ್ರಜಾಸಾಮಾನ್ಯರೂ **ಚತ್ವರಾಪಣ ರಥ್ಯಾಸು ವನೇಷೂಪವನೇಷು ಚ** ಅದೇ ಕೊಳಕುಮಾತನ್ನಾಡುತ್ತಿದ್ದರು. "ರಾಜನೇ ಈ ರೀತಿಯಾಗಿ ನಡೆದು ಕೊಂಡರೆ ಪ್ರಜೆಗಳು ಇನ್ನೇನು ಮಾಡುತ್ತಾರೆ? ಹೆಂಡತಿಯರು ವ್ಯಭಿಚಾರ ಮಾಡಿದರೆ ನಾವೂ ಸಹಿಸಿಕೊಳ್ಳಬೇಕಾಗುತ್ತದೆ. **ಯಥಾ ಹಿ ಕುರುತೇ ರಾಜಾ ಪ್ರಜಾ ತಮನುವರ್ತತೇ!**" ಎಂದು ಹೇಳಿಕೊಳ್ಳುತ್ತಿದ್ದರು. ಯಾವ ಅಭಿಮಾನ ಶೀಲನು ಇಂತಹ ಮಾತನ್ನು ಸಹನೆಯಿಂದ ಕೇಳಿಯಾನು? ರಾಘವನು ಪರಮಾರ್ತನಾಗಿ ತನ್ನ ಮಿತ್ರರನ್ನು ಕುರಿತು ಜನರು ಹಾಗೆ ಮಾತಾಡಿ ಕೊಳ್ಳುತ್ತಿರುವುದು ಸತ್ಯವೇ ಎಂದು ವಿಚಾರಿಸಿದ. ಅವರು **ಏವಮೇತನ್ನ ಸಂಶಯಃ** ಎಂದುಬಿಟ್ಟರು. ಮುಂದೆ ನಡೆದದ್ದು ಗೊತ್ತೇ ಇದೆ.

ಇಂತಹ ಸಮಯದಲ್ಲಿ ಶ್ರೀರಾಮನು ವಸಿಷ್ಠರೊಡನೆ, ಮಂತ್ರಿಗಳೊಡನೆ ಅಥವಾ ತಾಯಿಯಾದ ಕೌಸಲ್ಯೆಯೊಡನೆ ಸಮಾಲೋಚನೆಮಾಡಬಹುದಾಗಿತ್ತು. ಅವನು ದುಡುಕಿ ಏಕಪಕ್ಷೀಯವಾಗಿ ತೀರ್ಮಾನಿಸಿದ್ದೇಕೆ? ಎಂದು ಕೆಲವರು ಆಕ್ಷೇಪಿಸುತ್ತಾರೆ. ವಸಿಷ್ಠಾದಿಗಳಲ್ಲಿ ಯಾರೂ ಸೀತಾಪರಿತ್ಯಾಗವನ್ನು ಒಪ್ಪುತ್ತಿರಲಿಲ್ಲ. ಆಗ ಲೋಕಾಪವಾದಕ್ಕೆ ಪರಿಹಾರವೇನು? ನಮ್ಮ ಕಾಲದಲ್ಲಿಯೇ 'ಎಮರ್ಜೆನ್ಸಿ' ಜಾರಿಗೆ ಬಂದಿತು. ಮಂತ್ರಿಗಳ ಒಪ್ಪಿಗೆಯನ್ನು ಪಡೆದು ರಾಷ್ಟ್ರಪತಿಯ ಅಂಗೀಕಾರವನ್ನು ಗಳಿಸಿ ಜಾರಿಗೆ ಬಂದಿತು. ಜನರು ಒಪ್ಪಿದರೇನು?

ದೋಷಾನ್ವೇಷಣೆಯನ್ನೇ ಹವ್ಯಾಸಮಾಡಿಕೊಂಡ ಕೆಲವರು "ರಾಮನೇ 'ಪರಿತ್ಯಾಗ'ದ ವಿಷಯವನ್ನು ಸ್ವತಃ ಹೋಗಿ ಸೀತೆಗೆ ತಿಳಿಸಬೇಕಾಗಿತ್ತು. ಅಷ್ಟು ಸಹಾನುಭೂತಿಯೂ ಅವನಿಗಿಲ್ಲವಾಯಿತು" ಎನ್ನುತ್ತಾರೆ. ಶ್ರೀರಾಮನಿಗೆ ಸೀತೆಯಲ್ಲಿದ್ದ ಪ್ರೇಮವೆಷ್ಟೆಂಬುದನ್ನು ಇವರು ಚಿಂತಿಸಿದವರೇ ಅಲ್ಲ. ಸೀತೆಯ ಎದುರಿಗೆ ಈ ಮಾತನ್ನಾಡಲು ಅವನ ನಾಲಿಗೆ ಚಲಿಸುತ್ತಿತ್ತೇನು? ಅದರಲ್ಲಿಯೂ ಗರ್ಭಿಣಿಯಾದ ಆ ಸಾಧ್ವೀಶಿರೋಮಣಿಯ ಎದುರಿಗೆ ಹೋದಾಗ, ಮಾತಾಡುವುದಿರಲಿ, ಅವನು ಕರಗಿ ನೀರಾಗಿ ಹೋಗುತ್ತಿದ್ದ.

ರಾಮಾಯಣವನ್ನು ರಚಿಸಿದ ಮಹಾಕವಿಯ ಸಂದೇಶವೇನೆಂಬುದನ್ನು ನಾವು ಅರ್ಥಮಾಡಿಕೊಳ್ಳಲಾರದೆ ಹೋಗಿದ್ದೇವೆ. ಈ ಕಾಲದಲ್ಲಿ ನೀತಿನಿಯಮಗಳ ಮೌಲ್ಯವು, ರೂಪಾಯಿಯ ಮೌಲ್ಯದಂತೆ ಕುಸಿದುಹೋಗುತ್ತಿದೆ. ಶೀಲ, ಚಾರಿತ್ರಗಳು ಸಂಕೇತಮಾತ್ರವಾಗಿ, ಶಿಲಾಪ್ರತಿಮೆಗಳ ಸೌಂದರ್ಯದಂತೆ, ಉಳಿದುಕೊಂಡಿವೆ. ಕಾಲಿನಿಂದ ತಲೆಯ ಕೂದಲಿನವರೆಗೆ ನಾನಾ ಭ್ರಷ್ಟಾಚಾರಗಳ ಕಳಂಕಪಂಕವು ಮೆತ್ತಿಕೊಂಡಿದ್ದರೂ ಮಂತ್ರಿಗಳು ಆಡಳಿತ ಸೂತ್ರಗಳನ್ನು ಹಿಡಿದೇ ಇರುತ್ತಾರೆ. ಮೈಗೆ ಹತ್ತಿರುವುದು ಕೆಸರಲ್ಲ, ಕಸ್ತೂರಿ ಎಂದು ಸಂತೋಷಿಸುತ್ತಾರೆ. 'ಯಥಾ ರಾಜಾ ತಥಾ ಪ್ರಜಾ' ಎಂಬ ಗಾದೆಮಾತ್ರ ಅರ್ಥವನ್ನು ಕಳೆದುಕೊಂಡಿಲ್ಲ. ಮಹಾತ್ಮರ ಚಾರಿತ್ರವನ್ನು ಅರ್ಥಮಾಡಿಕೊಳ್ಳುವುದಿರಲಿ, ಆಚರಣೆಯು ಸಮುದ್ರದಾಚೆಗಿರಲಿ, ಅದನ್ನು ಗೇಲಿಮಾಡುವ ಹಂತವನ್ನು ತಲುಪಿದ್ದೇವೆ.

ಅರಣ್ಯವಾಸದಲ್ಲಿದ್ದಾಗ ಸೀತಾವಿಯೋಗವಾದದ್ದು ದೈವಿಕ. ಈಗಲಾದರೋ ತಾನೇ ತನ್ನ ಕೈಯಿಂದಲೇ ಸೀತಾವಿಯೋಗವನ್ನು ಶ್ರೀರಾಮನು ತಂದುಕೊಂಡನು. ಹಿಂದೆ ಆತನ ಶೋಕವನ್ನು ವರ್ಣಿಸಿ ವರ್ಣಿಸಿ ವಾಲ್ಮೀಕಿ ಮುನಿಗಳ ಶಬ್ದಭಂಡಾರವೇ ಮುಗಿದುಹೋಗಿರಬೇಕು. ಈಗ ತಾನಾಗಿ

ತಂದುಕೊಂಡ ಶ್ರೀರಾಮನ ಶೋಕವನ್ನು ವರ್ಣಿಸಲು ಅವರಿಗೆ ಶಬ್ದಗಳೇ ಉಳಿಯಲಿಲ್ಲ. ಭವಭೂತಿಯೊಬ್ಬನೇ ಅವನ ಶೋಕವನ್ನು ವರ್ಣಿಸಲು ಸಮರ್ಥನಾದನು.

ಸೀತಾದೇವಿಯಂತಹ ಕೋಮಲೆ, ಸುಶೀಲೆ, ಪತಿವ್ರತೆ, ಕಷ್ಟಸಹಿಷ್ಣುವಾದ ಧೀರೆ ಇತಿಹಾಸಪುಟಗಳಲ್ಲಿ ಮಾತ್ರವಲ್ಲ, ಪುರಾಣಗಳಲ್ಲಿಯೂ ದೊರೆಯು ವುದಿಲ್ಲ.

*

# ೨

# ಭರತ

ಶ್ರೀರಾಮನಿಗಿಂತ ಭರತನು ಒಂದು ದಿನದಷ್ಟು ಚಿಕ್ಕವನೆನ್ನಬಹುದು. ಪುನರ್ವಸು ನಕ್ಷತ್ರವಿದ್ದ ನವಮೀ ತಿಥಿಯ ಮಧ್ಯಾಹ್ನದಲ್ಲಿ ಶ್ರೀರಾಮನ ಜನನ. ಪುಷ್ಯನಕ್ಷತ್ರವಿದ್ದ ದಶಮೀತಿಥಿಯಲ್ಲಿ ಸೂರ್ಯೋದಯಕ್ಕೆ ಪೂರ್ವ ದಲ್ಲಿಯೇ ಭರತನ ಜನನ. ಅವರಿಬ್ಬರಿಗೆ ಪೂರ್ತಿಯಾಗಿ ಇಪ್ಪತ್ತನಾಲ್ಕು ತಾಸುಗಳ ಅಂತರವೂ ಇಲ್ಲ. ಅದೇ ದಶಮಿಯ ಮಧ್ಯಾಹ್ನ ಆಶ್ಲೇಷಾ ನಕ್ಷತ್ರದಲ್ಲಿ ಮೊದಲು ಲಕ್ಷ್ಮಣನೂ ಅನಂತರ ಶತ್ರುಘ್ನನೂ ಜನಿಸಿದ್ದಾರೆ. ಹೀಗೆ ಆ ನಾಲ್ವರಿಗೆ ವಯಸ್ಸಿನಲ್ಲಿ ಕೇವಲ ತಾಸುಗಳಷ್ಟು ಅಂತರವಿದ್ದರೂ 'ನಾವು ಅಣ್ಣತಮ್ಮಂದಿರು' ಎಂಬ ಭಾವನೆ ದೃಢವಾಗಿ ನೆಲೆಸಿ, ಹಾಗೆಯೇ ನಡೆದುಕೊಂಡಿರುವುದು ಗಮನಿಸಬೇಕಾದ ಸಂಗತಿ. ಅವರೆಲ್ಲರೂ ವಿದ್ಯಾವಂತರು, ಶೂರರು, ಪ್ರಜೆಗಳ ಹಿತದಲ್ಲಿ ಆಸಕ್ತರೂ ಗುಣಾಢ್ಯರೂ ಆಗಿದ್ದರು. ಆದರೂ–

**ತೇಷಾಮಪಿ ಮಹಾತೇಜಾ ರಾಮಃ ಸತ್ಯಪರಾಕ್ರಮಃ ।**
**ಇಷ್ಟಃ ಸರ್ವಸ್ಯ ಲೋಕಸ್ಯ ಶಶಾಂಕ ಇವ ನಿರ್ಮಲಃ ॥**

*ಬಾಲ. ೧೮-೨೭*

"ಶ್ರೀರಾಮನು ಅವರಲ್ಲಿ ಮಹಾತೇಜಸ್ವಿಯೂ ಸತ್ಯಸಂಧನೂ ಆಗಿದ್ದನು. ಸಕಲರಿಗೂ ಅವನನ್ನು ಕಂಡರೆ ನಿರ್ಮಲನಾದ ಪೂರ್ಣಚಂದ್ರನನ್ನು ಕಂಡಂತೆ ಹರ್ಷವಾಗುತ್ತಿತ್ತು" ಎಂದು ಕವಿಯು ಶ್ರೀರಾಮನ ಹೆಗ್ಗಳಿಕೆಯ ವರ್ಣನೆ ಯನ್ನು ಮರೆಯುವುದಿಲ್ಲ. ವಯಸ್ಸಿಗಿಂತ ಶ್ರೀರಾಮನ ಗುಣಜ್ಯೇಷ್ಠತೆಯು ಹಿರಿದಾದ್ದರಿಂದ ಆತನು ಜ್ಯೇಷ್ಠನೆಂದು ಎಲ್ಲರ ಗೌರವಕ್ಕೆ ಪಾತ್ರನಾದನು.

**ಪುಷ್ಯೇ ಜಾತಸ್ತು ಭರತೋ ಮೀನಲಗ್ನೇ ಪ್ರಸನ್ನಧೀಃ** ಎಂದು ವಾಲ್ಮೀಕಿ ಮುನಿಗಳು ಭರತನನ್ನು ಹುಟ್ಟುವಾಗಲೇ 'ಪ್ರಸನ್ನಧೀಃ' ಎಂದು ಕರೆದಿದ್ದಾರೆ. ತಿಳಿಯಾದ ನಿರ್ಮಲಬುದ್ಧಿ ಭರತನದು. ಕಶ್ಮಲದ ಲೇಶವೂ ಅದರಲ್ಲಿಲ್ಲ. ಈ ಒಂದೇ ಶಬ್ದವು ಆತನ ಸಮಸ್ತ ಸದ್ಗುಣಗಳನ್ನೂ ಎತ್ತಿ ವಿವರಿಸಬಲ್ಲದು.

ನಾಲ್ವರು ಮಕ್ಕಳಲ್ಲಿ ಅನ್ಯೋನ್ಯ ಪ್ರೀತಿಯು ಸಮವಾಗಿದ್ದರೂ ರಾಮಲಕ್ಷ್ಮಣರು ಒಂದು ಜೋಡಿಯಾಗಿ, ಭರತಶತ್ರುಘ್ನರು ಇನ್ನೊಂದು ಜೋಡಿಯಾಗಿ ಬೆಳೆದ ರಂತೆ. ರಾಮನಿದ್ದಲ್ಲಿ ಲಕ್ಷ್ಮಣನಿದ್ದಾನೆಂದೂ ಭರತನಿದ್ದಲ್ಲಿ ಶತ್ರುಘ್ನನಿದ್ದಾನೆಂದೂ ನಿಶ್ಚಿತ! ದೊಡ್ಡ ಕುಟುಂಬದಲ್ಲಿ ಮಕ್ಕಳು ಹೀಗೆ ಬೇರೆಬೇರೆ ಜೊತೆ ಯಾಗಿರುವುದನ್ನು ನಾವು ಕಾಣಬಹುದು. ಇದಕ್ಕೆ ಯಾವ ಬಾಹ್ಯಕಾರಣವನ್ನೂ ಹೇಳಲಾಗುವುದಿಲ್ಲ. ಕವಿಯು ಎಷ್ಟು ಸೂಕ್ಷ್ಮವೇದಿಯೆಂಬುದಕ್ಕೆ ಇದೊಂದು ನಿದರ್ಶನ. ದೈವಯೋಗದಿಂದ ಈ ನಾಲ್ವರ ಮದುವೆಯೂ ಒಂದೇ ದಿನ ಒಂದೇ ಸ್ಥಳದಲ್ಲಿ ನಡೆಯುತ್ತದೆ. ಆ ಸಮಯದಲ್ಲಿ ಭರತನ ಸೋದರಮಾವ ಯುಧಾಜಿತ್ತು ತನ್ನ ತಂದೆ ಅಶ್ವಪತಿಯ ಅಪೇಕ್ಷೆಯಂತೆ ಭರತನನ್ನು ತನ್ನೂರಿಗೆ ಕರೆದೊಯ್ಯಲು ಅಲ್ಲಿಗೆ ಬಂದು ಸೇರಿದ. ಅವನು ಮೊದಲು ಅಯೋಧ್ಯೆಗೆ ಬಂದು, ಮದುವೆಯ ಸುದ್ದಿಯನ್ನು ಕೇಳಿ ಮಿಥಿಲೆಗೆ ಬಂದಿದ್ದ. ಅವನಿಗೆ ವಿವಾಹದ ಆಹ್ವಾನಪತ್ರವೇನೂ ಹೋಗಿರಲಿಲ್ಲ! ಮದುವೆಗೆ ಬರಬೇಕಾದರೆ ಆಹ್ವಾನವು ಬರಲೇಬೇಕೆಂಬ ಬೀಗರ ಬಿಗುಮಾನವೇನೂ ಆ ಕಾಲದಲ್ಲಿ ಇದ್ದಂತೆ ಕಾಣುವುದಿಲ್ಲ! ಸ್ನೇಹವು ಎಲ್ಲ ಲೋಪದೋಷಗಳನ್ನೂ ಸರಿಪಡಿಸುತ್ತಿತ್ತು.

ಎಲ್ಲರೂ ಹಿಂದಿರುಗಿ ಬಂದ ಮೇಲೆ ಭರತನು ಸೋದರಮಾವನ ಜೊತೆಗೆ ತನ್ನ ತಾಯಿಯ ತವರೂರಿಗೆ ಪ್ರಯಾಣಮಾಡಿದ. ಜೊತೆಗೆ ಶತ್ರುಘ್ನನನ್ನೂ ಕರೆದು ಒಯ್ದನೆಂದು ಹೇಳಬೇಕಾದ್ದೇ ಇಲ್ಲ. ಅವರಿಬ್ಬರ ನೂತನ ಪತ್ನಿಯರೂ ಅವರೊಡನೆ ಹೋಗಿಯೇ ಇರಬೇಕು. ಕವಿಯು ಆ ವಿಚಾರವನ್ನೇ ಹೇಳುವುದಿಲ್ಲ. ವಾಲ್ಮೀಕಿ ಮುನಿಗಳು ಕಥೆ ಹೇಳುವ ರೀತಿ ವಿಚಿತ್ರವಾದದ್ದು. ನಮಗೆ ಮುಖ್ಯವೆನಿಸುವ ಎಷ್ಟೋ ಸಂಗತಿಗಳನ್ನು ಅವರು ಹೇಳುವುದೇ ಇಲ್ಲ. ಲಕ್ಷ್ಮಣನು ಅಣ್ಣನೊಡನೆ ಅರಣ್ಯಕ್ಕೆ ಹೊರಟಾಗ, ಲಕ್ಷ್ಮಣನ ಪತ್ನಿ ಊರ್ಮಿಳೆ ತಾನೂ ಬರುತ್ತೇನೆಂದು ಹಟಹಿಡಿಯಲಿಲ್ಲವೆ? ಅವಳಿಗೆ ಲಕ್ಷ್ಮಣನು ಹೇಳಿದ ಸಮಾಧಾನವೇನು? ಕವಿಯ ಮೌನವು ಅಚ್ಚರಿಗೊಳಿಸುತ್ತದೆ. ಸಾವಿರಾರು ವರ್ಷಗಳ ಹಿಂದಿನ ಈ ಗ್ರಂಥದಲ್ಲಿ ಕೆಲವು ಸರ್ಗಗಳೂ ಕೆಲವು ಶ್ಲೋಕಗಳೂ ಲೇಖಕಪ್ರಮಾದದಿಂದ ಲುಪ್ತವಾಗಿರಲೂಬಹುದು.

ಭರತನು ಮಾಂಡವಿಯನ್ನು ಮದುವೆಯಾಗಿ ಅಯೋಧ್ಯೆಗೆ ಬಂದಮೇಲೆ ಸ್ವಲ್ಪದಿನ ಅಲ್ಲಿ ಇದ್ದಿರಬಹುದು. ಅನಂತರ ಸೋದರಮಾವನೊಡನೆ ಕೇಕಯ ರಾಜಧಾನಿಗೆ ಶತ್ರುಘ್ನನನ್ನು ಕರೆದುಕೊಂಡು ಹೋಗಿದ್ದಾನೆ. ಇತ್ತ ದಶರಥನು

ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲು ನಿಶ್ಚಯಿಸಿದನಷ್ಟೆ. ಇಲ್ಲೊಂದು ಚೋದ್ಯ ಉಂಟು. ಶ್ರೀರಾಮನು ಸೀತಾದೇವಿಯನ್ನು ಮದುವೆಯಾಗಿ ಅರಮನೆಗೆ ಹಿಂದಿರುಗಿ ಬಂದಮೇಲೆ, ಎಷ್ಟು ದಿನಗಳ ತರುವಾಯ ಪಟ್ಟಾಭಿಷೇಕದ ನಿರ್ಣಯವಾಯಿತು? ಸೀತೆಯು ರಾವಣಸಂನ್ಯಾಸಿಗೆ ಉತ್ತರಕೊಡುವಾಗ, ತಾನು ಹನ್ನೆರಡು ವರ್ಷಗಳ ಕಾಲ ಇಕ್ಷ್ವಾಕುರಾಜರ ಅರಮನೆಯಲ್ಲಿ ಮನುಷ್ಯದುರ್ಲಭವಾದ ಸುಖವನ್ನು ಅನುಭವಿಸುತ್ತ ವೈಭವದಲ್ಲಿ ಇದ್ದೆನೆಂದೂ ಹದಿಮೂರನೆಯ ವರ್ಷದಲ್ಲಿ ದಶರಥ ಮಹಾರಾಜನು ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲು ಉದ್ದೇಶಿಸಿದನೆಂದೂ ಹೇಳಿದ್ದಾಳೆ–

ದುಹಿತಾ ಜನಕಸ್ಯಾಹಂ ಮೈಥಿಲಸ್ಯ ಮಹಾತ್ಮನಃ ।
ಸೀತಾನಾಮ್ನಾಸ್ಮಿಭದ್ರಂ ತೇ ರಾಮಸ್ಯ ಮಹಿಷೀ ಪ್ರಿಯಾ ॥
ಉಷಿತ್ವಾ ದ್ವಾದಶ ಸಮಾ ಇಕ್ಷ್ವಾಕೂಣಾಂ ನಿವೇಶನೇ ।
ಭುಂಜಾನಾऽಮಾನುಷಾನ್ ಭೋಗಾನ್ ಸರ್ವಕಾಮಸಮೃದ್ಧಿನೀ ॥
ತತಸ್ತ್ರಯೋದಶೇ ವರ್ಷೇ ರಾಜಾऽಮಂತ್ರಯತ ಪ್ರಭುಃ ।
ಅಭಿಷೇಚಯಿತುಂ ರಾಮಂ ಸಮೇತೋ ರಾಜಮಂತ್ರಿಭಿಃ ॥

*ಅರಣ್ಯ ೪೭–೩, ೪, ೫*

ಹಾಗಾದರೆ ಭರತಶತ್ರುಘ್ನರು ಹನ್ನೆರಡು ವರ್ಷಗಳ ಕಾಲ ತಮ್ಮ ತಂದೆ ತಾಯಿಗಳನ್ನೂ ರಾಮಲಕ್ಷ್ಮಣರನ್ನೂ ಅಗಲಿ ದೂರದಲ್ಲುಳಿದುಬಿಟ್ಟರೆಂದು ಹೇಳಬೇಕಾಗುತ್ತದೆ. ಕೈಕೇಯಿ, ಸುಮಿತ್ರೆಯರು ತಮ್ಮ ಮಕ್ಕಳನ್ನೂ ಹೊಸದಾಗಿ ಬಂದ ಸೊಸೆಯರನ್ನೂ ಅಷ್ಟು ದೀರ್ಘಕಾಲದವರೆಗೆ ಅಗಲಿರಲು ಸಂಮತಿಸುತ್ತಾರೆಯೇ? ಇದು ಅಸಂಭವವೆಂದೇ ನನಗೆ ತೋರುತ್ತದೆ. ಅಶ್ವಪತಿಯು ಭರತನ ಮೇಲಿದ್ದ ವ್ಯಾಮೋಹದಿಂದ ಆಗಾಗ ಭರತನನ್ನು ತನ್ನ ಮನೆಗೆ ಕರೆಸಿಕೊಳ್ಳುತ್ತಿದ್ದನೆಂದೂ, ಹೀಗಿರಲು ಒಂದು ಸಲ ಭರತಶತ್ರುಘ್ನರು ಕೇಕಯ ರಾಜಧಾನಿಗೆ ಹೋಗಿದ್ದಾಗ ದಶರಥನಿಗೆ ಶ್ರೀರಾಮಪಟ್ಟಾಭಿಷೇಕದ ಚಿಂತನೆಯುಂಟಾಯಿತೆಂದೂ ಹೇಳುವುದು ಯುಕ್ತವಾಗಿದೆ. ಕವಿಯ ಆಶಯ ಇಷ್ಟೇ ಎಂದು ತಿಳಿಯುವುದು ಸರಿಯಾಗುತ್ತದೆ. ಅಯೋಧ್ಯಾಕಾಂಡದ ಆದಿಯಲ್ಲಿ 'ಗಚ್ಛತಾ ಮಾತುಲಕುಲಂ' ಎಂದು ಆರಂಭಿಸಿದ ಕವಿಯು, ಶತ್ರುಘ್ನನೊಡನೆ ಭರತನು ಹೋದನೆಂದು ಮಾತ್ರ ತಿಳಿಸಿದ್ದಾನೆ. ಮದುವೆಗೆ ಬಂದಿದ್ದ ಯುಧಾಜಿತನ ವಿಷಯವನ್ನು ತಿಳಿಸಿಲ್ಲ.

ಪದ್ಧತಿಯಂತೆ ಭರತಶತ್ರುಘ್ನರು ಈ ಸಲ ಅಶ್ವಪತಿಯ ನಗರಕ್ಕೆ

ಹೋಗಿದ್ದಾಗ, ತಮ್ಮ ಪತ್ನಿಯರನ್ನು ಜೊತೆಗೆ ಕರೆದುಕೊಂಡು ಹೋಗಿರಲಿಲ್ಲ ವೆಂದು ತಿಳಿದರೆ ತಪ್ಪಾಗುವುದಿಲ್ಲ.

## ಪಟ್ಟಾಭಿಷೇಕದ ಪ್ರಸಂಗ

ಶ್ರೀರಾಮನು ದಶರಥನಿಗೆ ಮಾತ್ರವಲ್ಲ, ಸಕಲ ಪ್ರಜೆಗಳಿಗೂ ಪ್ರಿಯನಾಗಿದ್ದನು. ಅವನು ರಾಜನಾಗಲು ತನಗಿಂತ ಹೆಚ್ಚಿನ ಅರ್ಹತೆ ಇದೆಯೆಂದು ದಶರಥನು ತಿಳಿದಿದ್ದನು. **ಮತ್ತಃ ಪ್ರಿಯತರೋ ಲೋಕೇ** = ನನಗಿಂತ ರಾಮನು ಲೋಕದಲ್ಲಿ ಅಧಿಕ ಪ್ರೀತಿಪಾತ್ರನಾಗಿದ್ದಾನೆ. **ಮತ್ತಶ್ಚಗುಣವತ್ತರಃ** = ನನಗಿಂತ ಅಧಿಕಗುಣಶಾಲಿ" ಇದು ದಶರಥನ ನಂಬಿಕೆ. 'ನಾನು ವೃದ್ಧನಾದೆ. ನನ್ನ ಕಣ್ಣೆದುರಿಗೆ ರಾಮನು ಯುವರಾಜನಾಗಲಿ' ಎಂಬ ಆಲೋಚನೆ ಅವನಿಗೆ ಬಂದದ್ದು ಸಹಜ. ಕೆಲವು ಉತ್ಪಾತಗಳು ಕಂಡುಬಂದದ್ದರಿಂದ ತನಗೆ ಆಕಸ್ಮಿಕವಾಗಿ ಯಾವುದೋ ಕೇಡು ಸಂಭವಿಸಬಹುದೆಂದು ಅವನಿಗೆ ಭಯವಾಯಿತು. "ರಾಜ್ಯಭಾರವನ್ನು ವಹಿಸಿಕೊಳ್ಳಲು ಶ್ರೀರಾಮನಿಗೂ ಅರ್ಹವಾದ ಕಾಲವಾಗಿದೆ. ನನಗೂ ವಯಸ್ಸಾಯಿತು. ಉತ್ಪಾತಗಳು ಬೇರೆ ಕಾಣಿಸಿಕೊಳ್ಳುತ್ತವೆ" ಎಂದು ಆಲೋಚಿಸಿ ಶ್ರೀರಾಮನ ಪಟ್ಟಾಭಿಷೇಕಕ್ಕೆ ತ್ವರೆಮಾಡಿದ. **ಪ್ರಾಪ್ತಕಾಲೇ ಸಧರ್ಮಾತ್ಮಾ ಭಕ್ತ್ಯಾ ತ್ವರಿತವಾನ್ ನೃಪಃ** ಮಂತ್ರಿಗಳೊಡನೆ ಸಮಾಲೋಚಿಸಿ ಪ್ರಜೆಗಳ ಒಪ್ಪುಗೆಯನ್ನು ಪಡೆದುಕೊಂಡ. ಶ್ರೀರಾಮನನ್ನು ಸಭೆಗೆ ಕರೆಸಿ, ಅವನಿಗೆ ಯುವರಾಜ್ಯಾಭಿಷೇಕದ ವಿಷಯವನ್ನು ತಿಳಿಸಿ, ಒಂದೆರಡು ಹಿತೋಪದೇಶಗಳನ್ನು ನೀಡುತ್ತಾನೆ. ಅನಂತರ ತನ್ನ ಭವನಕ್ಕೆ ತೆರಳಿ ದಶರಥನು ಮತ್ತೊಮ್ಮೆ ಮಗನನ್ನು ಕರೆಸಿಕೊಂಡು, ಪಟ್ಟಾಭಿಷೇಕದ ಉದ್ದೇಶವನ್ನೂ ವಿವರಿಸಿ ಹೇಳುತ್ತಾನೆ. ಆ ಸಮಯದಲ್ಲಿ ದಶರಥನು ಈ ಮಾತುಗಳನ್ನು ಹೇಳಿದ್ದಾನೆ–

**ವಿಪ್ರೋಷಿತಶ್ಚ ಭರತೋ ಯಾವದೇವ ಪುರಾದಿತಃ ।**
**ತಾವದೇವಾಭಿಷೇಕಸ್ತೇ ಪ್ರಾಪ್ತಕಾಲೋ ಮತೋ ಮಮ ॥**
**ಕಾಮಂ ಖಲು ಸತಾಂ ವೃತ್ತೇ ಭ್ರಾತಾ ತೇ ಭರತಃ ಸ್ಥಿತಃ ।**
**ಜ್ಯೇಷ್ಠಾನುವರ್ತೀ ಧರ್ಮಾತ್ಮಾ ಸಾನುಕ್ರೋಶೋ ಜಿತೇಂದ್ರಿಯಃ ॥**
**ಕಿಂತು ಚಿತ್ತಂ ಮನುಷ್ಯಾಣಾಮನಿತ್ಯಮಿತಿ ಮೇ ಮತಿಃ ।**
**ಸತಾಂ ಚ ಧರ್ಮನಿತ್ಯಾನಾಂ ಕೃತಶೋಭಿ ಚ ರಾಘವ ॥**

*–ಅಯೋಧ್ಯಾ. ೪–೨೫, ೨೬, ೨೭.*

"ರಾಮ, ಭರತನು ಈ ನಗರದಿಂದ ಪರಸ್ಥಳಕ್ಕೆ ಹೋಗಿರುವಾಗಲೇ ನಿನಗೆ ಪಟ್ಟಾಭಿಷೇಕಮಾಡುವುದಕ್ಕೆ ಸರಿಯಾದ ಸಮಯವೆಂದು ನನ್ನ ಅಭಿಪ್ರಾಯ. ನಿನ್ನ ತಮ್ಮನಾದ ಭರತನು ಸನ್ಮಾರ್ಗದಲ್ಲಿ ನಡೆಯತಕ್ಕವನೆಂಬುದೇನೋ ನಿಶ್ಚಿತವೇ ಹೌದು. ಅಣ್ಣನಾದ ನಿನ್ನನ್ನು ಅನುವರ್ತಿಸತಕ್ಕವನೂ, ಧರ್ಮಾತ್ಮನೂ, ಮೃದುಸ್ವಭಾವದವನೂ ಆಗಿದ್ದಾನೆ. ಇಂದ್ರಿಯ ಚಾಪಲ್ಯಕ್ಕೆ ಒಳಗಾಗತಕ್ಕವನೂ ಅಲ್ಲ. ಆದರೂ ಜನರ ಮನಸ್ಸು ಒಂದೇ ರೀತಿಯಾಗಿರುವುದಿಲ್ಲವೆಂದು ನನಗೆ ಅನ್ನಿಸುತ್ತದೆ. ಯಾವುದಾದರೊಂದು ನಡೆದುಹೋಗಿಬಿಟ್ಟರೆ, ಧರ್ಮನಿಷ್ಠರಾದ ಅಂತಹ ಸಜ್ಜನರ ಮನಸ್ಸು 'ಆಗಿಹೋಯಿತು; ಸರಿ' ಎಂದು ಒಪ್ಪಿಕೊಂಡು ಬಿಡುತ್ತದೆ"

ಈ ಮಾತುಗಳನ್ನು ದಶರಥನು ಹೇಳಲು ಕಾರಣವೇನು? ಭರತನು ಶ್ರೀರಾಮನ ಪಟ್ಟಾಭಿಷೇಕಕ್ಕೆ ಅಡ್ಡಿಯುಂಟುಮಾಡಬಹುದೆಂಬ ಶಂಕೆ ಇಲ್ಲಿ ಸ್ಪಷ್ಟವಾಗಿ ತೋರುತ್ತದೆ. ಈ ಶಂಕೆಗೆ ನಿಮಿತ್ತವೇನಿರಬಹುದು? ರಾಮಾಯಣ ಪ್ರವಚನಕಾರರು ಹೇಳುವುದೇನೆಂದರೆ: ದಶರಥನು ಕೈಕೇಯಿಯನ್ನು ಮದುವೆಯಾಗುವಾಗ, ಅವಳಲ್ಲಿ ಜನಿಸುವ ಪುತ್ರನಿಗೆ ರಾಜ್ಯವನ್ನಿತ್ತು ಪಟ್ಟಗಟ್ಟುವೆನೆಂದು ಅವಳ ತಂದೆ ಅಶ್ವಪತಿಗೆ ಮಾತುಕೊಟ್ಟಿದ್ದ. ಇದು ಭರತನಿಗೆ ತಿಳಿದಿರಬೇಕು. ಆದ್ದರಿಂದ ಭರತನು ಆ ಸಮಯದಲ್ಲಿ ತನಗೆ ಕೋಸಲ ರಾಜ್ಯವು ದೊರೆಯಬೇಕೆಂದು ಶ್ರೀರಾಮನ ಪಟ್ಟಾಭಿಷೇಕಕ್ಕೆ ಅಡ್ಡಿಮಾಡಬಹುದೆಂದು ದಶರಥನಿಗೆ ಶಂಕೆಯುಂಟಾಗಿದೆ. ಮುಂದೆ ಭರತನು ಶ್ರೀರಾಮನನ್ನು ಅಯೋಧ್ಯೆಗೆ ಕರೆದೊಯ್ಯಬೇಕೆಂದು ಅರಣ್ಯಕ್ಕೆ ಬಂದಾಗ ಶ್ರೀರಾಮನ ಬಾಯಿಯಿಂದಲೇ ಈ ವಿಷಯ ಬಂದಿದೆ.

ಪುರಾ ಭ್ರಾತಃ ಪಿತಾ ನಃ ಸ ಮಾತರಂ ತೇ ಸಮುದ್ವಹನ್ ।
ಮಾತಾಮಹೇ ಸಮಾಶ್ರೌಷೀತ್ ರಾಜ್ಯಶುಲ್ಕಮನುತ್ತಮಮ್ ॥

*ಅಯೋಧ್ಯಾ. ೧೦೭-೩*

ಇದನ್ನು ಎಲ್ಲ ಪ್ರವಚನಕಾರರೂ ಹೇಳುತ್ತಾರೆ. ಇದು ದಶರಥನ ಶಂಕೆಗೆ ನಿಮಿತ್ತವೆನ್ನುವುದು ಯುಕ್ತವೇನೋ ಹೌದು. ಆದರೆ ನನಗೆ ತೋರುವುದು ಇನ್ನೊಂದು ವಿಷಯ. ಅದು ಎಷ್ಟು ಸರಿಯಾದೀತೆಂಬುದನ್ನು ವಿದ್ವಾಂಸರು ಪರಿಶೀಲಿಸಬೇಕು.

ಒಂದು ಸಮಾಧಾನ ಏನೆಂದರೆ, ದಶರಥನು ಸತ್ಯಸಂಧನೆಂಬುದು

ನಿರ್ವಿವಾದ. ಅವನು ಮಹರ್ಷಿಕಲ್ಪ, ರಾಜರ್ಷಿ, ಧರ್ಮಾತ್ಮ, ಸತ್ಯಸಂಧ – ಎಂದು ವಾಲ್ಮೀಕಿಗಳು ಆರಂಭದಿಂದಲೇ ವರ್ಣಿಸುತ್ತಾ ಬಂದಿದ್ದಾರೆ. ದಶರಥನು ಇಚ್ಛಾನುಸಾರವಾಗಿ ಸತ್ಯದಿಂದ ನುಣುಚಿಕೊಳ್ಳತಕ್ಕವನಾಗಿದ್ದರೆ, ಕೈಕೇಯಿ ಕೇಳಿದ ವರಗಳನ್ನು ಸಲ್ಲಿಸುತ್ತಿರಲಿಲ್ಲ. ಒಂದು ವೇಳೆ ಪಟ್ಟಾಭಿಷೇಕವನ್ನು ಭರತನಿಗೆ ಮಾಡಲು ಒಪ್ಪಿಕೊಂಡರೂ ಶ್ರೀರಾಮನನ್ನು ಕಾಡಿಗೆ ಕಳಿಸಲು ಎಂದಿಗೂ ಸಂಮತಿಸುತ್ತಿರಲಿಲ್ಲ. "ಕೈಕೇಯಿ, ನೀನು ಕೇಳಿದ ಮೊದಲನೆಯ ವರವನ್ನು ಸಲ್ಲಿಸುತ್ತೇನೆ. ಶ್ರೀರಾಮನ ವನವಾಸವೆಂಬ ಎರಡನೆಯದನ್ನು ಮಾತ್ರ ಸಲ್ಲಿಸಲಾರೆ. ರಾಮನು ಯಾವ ತಪ್ಪು ಮಾಡಿದ್ದಾನೆಂದು ಅವನನ್ನು ದೇಶಭ್ರಷ್ಟನನ್ನಾಗಿ ಮಾಡಬೇಕು? ನಿರಪರಾಧಿಯನ್ನು ದಂಡಿಸುವುದು ಧರ್ಮ ವಿರುದ್ಧವಾದ ಪಾಪಕೃತ್ಯ. ಇದು ನನ್ನಿಂದಾಗದು. ಬೇರೆ ಯಾವ ವರವನ್ನಾದರೂ ಕೇಳಿಕೊ" ಎಂದು ನಿರ್ದಾಕ್ಷಿಣ್ಯವಾಗಿ ತಿಳಿಸಿಬಿಡುತ್ತಿದ್ದ. ಎರಡನೆಯ ವರವನ್ನು ಹಿಂತೆಗೆದುಕೊಳ್ಳಬೇಕೆಂದು ಅವನು ಕೈಕೇಯಿಯನ್ನು ಬೇಡಿಕೊಂಡು ಅವಳ ಕಾಲಿಗೆಬಿದ್ದು ನಮಸ್ಕರಿಸುವವರೆಗೂ ಹೋಗಿದ್ದಾನೆ. ದಂಡಧಾರಿಯಾದ ಒಬ್ಬ ಚಕ್ರವರ್ತಿ, ಸತ್ಯದಿಂದ ನುಣುಚಿಕೊಳ್ಳತಕ್ಕವನಾದರೆ, ಹೆಂಡತಿಯ ಕಾಲಿಗೆಬಿದ್ದು ಬೇಡಿಕೊಳ್ಳುವಷ್ಟು ಕೆಳಮಟ್ಟಕ್ಕೆ ಎಂದಿಗೂ ಇಳಿಯಲಾರ.

ದಶರಥನಿಗೆ ಕೌಸಲ್ಯೆ, ಸುಮಿತ್ರೆಯರಿಬ್ಬರಲ್ಲಿಯೂ ಸಂತತಿಯಾಗಲಿಲ್ಲ. ಆಗ ಕೈಕೇಯಿಯನ್ನು ಮದುವೆಯಾಗಲು ಬಯಸಿ ಅಶ್ವಪತಿಯ ಬಳಿಗೆ ಹೋಗಿದ್ದಾನೆ. ಅಶ್ವಪತಿಯು ಸಹಜವಾಗಿ "ದಶರಥ ಮಹಾರಾಜ ನಿನಗೆ ಈಗಾಗಲೇ ಪತ್ನಿಯರಿದ್ದಾರೆ. ನಿನಗೂ ವಯಸ್ಸಾಗುತ್ತ ಬಂದಿದೆ. ಹೀಗಿರುವಾಗ ನನ್ನ ಮಗಳನ್ನು ನಿನಗೆ ಕೊಟ್ಟು ಮದುವೆಮಾಡಲು ನನಗೆ ಮನಸ್ಸಿಲ್ಲ" ಎಂದು ಹೇಳಿರಬೇಕು. ತಂದೆಯಾದವನು ಮಗಳ ಹಿತಕ್ಕಾಗಿ ಈ ರೀತಿ ಹೇಳುವುದು ಲೋಕಸ್ವಭಾವವೇ ಸರಿ. ಆಗ ದಶರಥನು "ಅಶ್ವಪತಿ, ನನಗೆ ಇಬ್ಬರು ಪತ್ನಿಯರಲ್ಲಿಯೂ ಸಂತತಿಯಾಗಲಿಲ್ಲ. ಮಹತ್ತರವಾದ ನನ್ನ ರಾಜ್ಯ ಅನಾಥವಾಗಿ ಹೋಗುವ ಸಂನಿವೇಶವು ಬಂದದ್ದರಿಂದ ನಿನ್ನ ಮಗಳನ್ನು ವಿವಾಹವಾಗಲು ಬಯಸುತ್ತಿದ್ದೇನೆ. ಅವಳಲ್ಲೊಬ್ಬ ಪುತ್ರನು ಜನಿಸಿದರೆ, ಅವನು ನನ್ನ ಉತ್ತರಾಧಿಕಾರಿಯಾಗಿ ಮಹಾರಾಜನಾಗುತ್ತಾನೆ. ಈ ವಿಷಯವನ್ನು ಆಲೋಚಿಸಿ ನೋಡು." ಎಂದು ಹೇಳಿರಬೇಕು. ಇದೂ ಸಹಜವಾದ ನುಡಿಯೇ. ಇದನ್ನೆಲ್ಲ ಪರಿಶೀಲಿಸಿ ಅಶ್ವಪತಿಯು ಕೈಕೇಯಿಯನ್ನು ಮದುವೆ ಮಾಡಿಕೊಡಲು ಒಪ್ಪಿರಬೇಕು. ದಶರಥನಾಡಿದ ನುಡಿ ಲೋಕಾಭಿರಾಮವಾದ

ವಾಸ್ತವದ ಸಂಗತಿ. ಅದೇನೂ ಪ್ರತಿಜ್ಞೆಯಲ್ಲ, ಶಪಥವಲ್ಲ. ಅವನಿಗೆ ಮಗನೊಬ್ಬನು ಆಗಲೇ ಇದ್ದಿದ್ದರೆ ಪ್ರತಿಜ್ಞೆಯಾಗುತ್ತಿತ್ತು. ಆದರೆ ದೈವಯೋಗದಿಂದ ಆ ಮೂವರು ಪತ್ನಿಯರೂ ಗಂಡು ಮಕ್ಕಳನ್ನು ಹಡೆದರು. ದಶರಥನಾಡಿದ ಈ ಪ್ರರೋಚನೆಯ ಮಾತನ್ನೇ ಭರತನ ಸಮಾಧಾನಕ್ಕಾಗಿ ಶ್ರೀರಾಮನು ನುಡಿದಿದ್ದಾನೆ. ಅದರಿಂದ ಭರತನಿಗೆ ಸಮಾಧಾನವಾಗದೆಂದೇ ಅನಂತರ ಕೈಕೇಯಿಗೆ ಕೊಟ್ಟಿದ್ದ ಎರಡು ವರಗಳ ವಿಷಯವನ್ನು ತಿಳಿಸಿದ್ದಾನೆ. ದಶರಥನು ಅಶ್ವಪತಿಗೆ ಹೇಳಿದ್ದು ಪ್ರತಿಜ್ಞೆಯಾಗಿದ್ದರೆ ಕೈಕೇಯಿಗೆ ತಿಳಿದಿರಬೇಕಾಗಿತ್ತು. ಮಂಥರೆಗಾದರೂ ಗೊತ್ತಿರಬೇಕಾಗಿತ್ತು. ಅವರಿಬ್ಬರಿಗೂ ಅದು ಗೊತ್ತಿರಲಿಲ್ಲ. ಗೊತ್ತಿದ್ದರೆ ವರವನ್ನು ನೆನಪಿಸಿಕೊಳ್ಳ ಬೇಕಾದ್ದಿರಲಿಲ್ಲ. ಸುಮಂತ್ರನು ಯಾವಾಗಲೂ ದಶರಥನೊಡನೆ ಇರುತ್ತ ಅವನ ಆಪ್ತಸಚಿವನಾದ್ದರಿಂದ ಅವನೊಬ್ಬನಿಗೆ ತಿಳಿದಿರಬೇಕು. ರಥದಲ್ಲಿ ಶ್ರೀರಾಮನನ್ನೆ ಅರಣ್ಯಕ್ಕೆ ಕಳಿಸುವಾಗ ಅವನು ಶ್ರೀರಾಮನಿಗೆ ತಿಳಿಸಿದನೆಂದು ಕಾಣುತ್ತದೆ. ಅದು ದಶರಥನ ಪ್ರತಿಜ್ಞೆಯೇ ಆಗಿದ್ದು ಶ್ರೀರಾಮನಿಗೆ ಮೊದಲೇ ಗೊತ್ತಿದ್ದರೆ, ತಾನು ಪಟ್ಟಾಭಿಷಿಕ್ತನಾಗಲು ಎಂದಿಗೂ ಒಪ್ಪುತ್ತಿರಲಿಲ್ಲ. ಅವನು ಎಷ್ಟು ನಿಃಸ್ಪೃಹನೂ ಪರಿಶುದ್ಧಚಿತ್ತನೂ ಆಗಿದ್ದನೆಂಬುದು ರಾಮಾಯಣಾಭ್ಯಾಸಿಗಳಿಗೆ ತಿಳಿದ ಸಂಗತಿ.

## ಶಂಕೆಗೆ ನಿಮಿತ್ತ

ಹಾಗಾದರೆ ದಶರಥನು ಭರತನ ವಿಷಯದಲ್ಲಿ ಶಂಕೆಯನ್ನು ವ್ಯಕ್ತಪಡಿಸಿದ್ದಕ್ಕೆ ಕಾರಣವೇನು? ಪಿತ್ರಾರ್ಜಿತವಾದ ಆಸ್ತಿಯಲ್ಲಿ ಎಲ್ಲ ಮಕ್ಕಳಿಗೂ ಅಧಿಕಾರ ಉಂಟು. ಇದು ಧರ್ಮಶಾಸ್ತ್ರಕ್ಕೆ ಸಂಮತವೂ ಹೌದು. ಭರತನು ಶ್ರೀರಾಮನಿಗೆ ವೈಮಾತ್ರ – ಬೇರೆ ತಾಯಿಯ ಮಗ. ಸೋದರರು ಎಷ್ಟು ಸ್ನೇಹದಲ್ಲಿದ್ದರೂ ದಾಯಾದಮಾತ್ಸರ್ಯ ಹುಟ್ಟಬಹುದು. ಅಶ್ವಪತಿ, ಯುಧಾಜಿತರು ಶ್ರೀರಾಮನ ಪಟ್ಟಾಭಿಷೇಕವನ್ನು ಆಕ್ಷೇಪಿಸಿ, ಭರತನಿಗೆ ರಾಜ್ಯದ ಒಂದು ಪಾಲನ್ನು ಕೇಳಬಹುದು. ಕೈಕೇಯಿಯಲ್ಲಿ ತನಗೆ ವಿಶೇಷ ವ್ಯಾಮೋಹವಿರುವುದನ್ನು ಅವರು ಗಮನಿಸಿಯೇ ಇರುತ್ತಾರೆ – ಎಂಬುದು ದಶರಥನ ಶಂಕೆಗೆ ಕಾರಣ. ಲಕ್ಷ್ಮಣನು ರಾಮಭಕ್ತನಾದ್ದರಿಂದ ಅವನ ವಿಷಯದಲ್ಲಿ ದಶರಥನಿಗೆ ಸಂದೇಹವಿಲ್ಲ. ಲಕ್ಷ್ಮಣನು ಶ್ರೀರಾಮನ ಪಕ್ಷದಲ್ಲಿರು ವಾಗ ಶತ್ರುಘ್ನನು ಅಗಣ್ಯ. ಇಷ್ಟಾಗಿ ಅವನೂ ದೂರದಲ್ಲಿದ್ದಾನೆ. ಮಂಥರೆ ಕೈಕೇಯಿಗೆ ಹೇಳಿದ ಈ ಮಾತನ್ನು ಗಮನಿಸಬೇಕು–

ಭರತಾದೇವ ರಾಮಸ್ಯರಾಜ್ಯಸಾಧಾರಣಾದ್‌ಭಯಂ

*ಅಯೋಧ್ಯಾ. ೮–೫.*

'ರಾಜ್ಯಸಾಧಾರಣಾತ್' = ಭರತನಿಗೆ ರಾಜ್ಯದಲ್ಲಿ ಸಮಾನಾಧಿಕಾರವಿರುವುದರಿಂದ.

ಈ ಕಾರಣಗಳಿಂದ ದಶರಥನು ಭರತನ ವಿಷಯದಲ್ಲಿ ತನ್ನ ಮನಸ್ಸಿನಲ್ಲಿ ಶಂಕೆಯನ್ನಿಟ್ಟುಕೊಂಡಿರಬೇಕು. ಲೋಕಾಭಿರಾಮವಾಗಿ ಅಶ್ವಪತಿಗೆ ಹೇಳಿದ ವಿಷಯವೂ ಈಗ ಸ್ಮರಣೆಗೆ ಬಂದು ಶಂಕೆಯನ್ನು ಹೆಚ್ಚಿಸಿರಬಹುದು. ಅದು ಮುಖ್ಯಕಾರಣವಲ್ಲ. ಅದೇ ಕಾರಣವಾಗಿದ್ದರೆ, ಅನಂತರ ಅಶ್ವಪತಿಯೂ ಯುಧಾಜಿತನೂ ಆಕ್ಷೇಪವನ್ನೆತ್ತಿದರೆ ದಶರಥನ ಉತ್ತರವಾದರೂ ಏನಿದ್ದೀತು? ಹಿರಿಯನಿಗೆ ಪಟ್ಟಾಭಿಷೇಕವೆನ್ನುವುದು ಒಂದು ಪದ್ಧತಿಯೇ ಹೊರತು ನಿಯಮವಲ್ಲ. ಜನಕರಾಜನ ತಮ್ಮ ಕುಶಧ್ವಜನು ಸಾಂಕಶ್ಯದಲ್ಲಿ ಪಟ್ಟಾಭಿಷಿಕ್ತನಾಗಿದ್ದ. ಶ್ರೀರಾಮನೇ ತನ್ನ ಮಕ್ಕಳಾದ ಕುಶಲವರಿಗೂ ಭರತಾದಿಗಳ ಪುತ್ರರಿಗೂ ತನ್ನ ಸಮ್ರಾಜ್ಯವನ್ನು ಹರಿದು ಹಂಚಿಕೊಟ್ಟು ಪಟ್ಟಾಭಿಷೇಕ ಮಾಡಿಸಿದ್ದಾನೆ.

ನಾನು ಊಹಿಸಿದ ಈ ಕಾರಣವು ಅಂಗೀಕಾರ್ಯವಾದರೆ, ದಶರಥನು ಭರತನನ್ನು ವಂಚಿಸಿದನೆಂಬ ಆಪಾದನೆ ತಪ್ಪುತ್ತದೆ. ಮಂಥರೆ ಕೈಕೇಯಿಗೆ ವರವನ್ನು ಕೇಳಿಕೊಳ್ಳುವಂತೆ ಹೇಳಿದ್ದಕ್ಕೆ ಉಪಪತ್ತಿಯೂ ದೊರೆಯುತ್ತದೆ. ದಶರಥನು ಕೈಕೇಯೀಪುತ್ರನಿಗೆ ರಾಜ್ಯವನ್ನು ಕೊಡುತ್ತೇನೆಂದು ಮಾತು ಕೊಟ್ಟಿರುವಾಗ, ಶ್ರೀರಾಮನಾದರೂ ತನ್ನ ಪಟ್ಟಾಭಿಷೇಕಕ್ಕೆ ಹೇಗೆ ಸಂಮತಿಸಿದ? –ಎಂಬ ಆಕ್ಷೇಪಣೆಗೆ ಅವಕಾಶವೂ ಇರುವುದಿಲ್ಲ.

## ಭರತನ ಗುಣಸ್ವಭಾವಗಳು

ಲಕ್ಷ್ಮಣನಂತೆ ಭರತನು ಶ್ರೀರಾಮನ ಜೊತೆಗೆ ಹೆಚ್ಚು ಕಾಣಿಸಿಕೊಳ್ಳದಿದ್ದರೂ ಅವನಿಗೆ ಅಣ್ಣನಲ್ಲಿದ್ದ ಪ್ರೇಮ, ವಾತ್ಸಲ್ಯ, ಭಕ್ತಿ, ಗೌರವಗಳು ಅಸಾಧಾರಣವಾದವು. ತಾನಾಗಿ ಪ್ರಾಪ್ತವಾದ ಸಾಮ್ರಾಜ್ಯವನ್ನು ಹಟಹಿಡಿದು ಅಣ್ಣನಿಗೇ ಒಪ್ಪಿಸಿದಮೇಲೆ ತಾನು ಧನ್ಯನಾದೆನೆಂದು ಆನಂದಿಸಿದ ಇನ್ನೊಬ್ಬ ವ್ಯಕ್ತಿ ಜಗತ್ತಿನ ಇತಿಹಾಸ ಪುರಾಣಗಳಲ್ಲಿ ದೊರಕಲಾರ. ಜಿನಸೇನಾಚಾರ್ಯರ ಆದಿಪುರಾಣದಲ್ಲಿ ಭರತಚಕ್ರವರ್ತಿಗೆ ತಮ್ಮನಾದ ಬಾಹುಬಲಿ ತನ್ನ ರಾಜ್ಯವನ್ನು ಬಿಟ್ಟುಕೊಟ್ಟನೆಂಬ ವರ್ಣನೆ ಇದೆ. ಅದು ತನ್ನ ಪ್ರತಿಷ್ಠೆಗಾಗಿ

ಭರತನೊಡನೆ ಯುದ್ಧಮಾಡಿದ ಮೇಲೆ. ಭರತನು ಬ್ರಹ್ಮಾಸ್ತ್ರಸದೃಶವಾದ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗಿಸುತ್ತಾನೆ. ಅದು ಏನೂ ಮಾಡಲಾರದೆ ಸುಮ್ಮನಾಗುತ್ತದೆ. ಆಗ ಬಾಹುಬಲಿ ವೈರಾಗ್ಯದಿಂದ ರಾಜ್ಯವನ್ನು ಅಣ್ಣನಿಗೆ ಅರ್ಪಿಸಿ ತಪಸ್ಸಿಗೆ ತೆರಳುತ್ತಾನೆ. ಭ್ರಾತೃವಾತ್ಸಲ್ಯದಿಂದ ಅರ್ಪಿಸಲಿಲ್ಲ. ದಾಯಾದಮಾತ್ಸರ್ಯದಿಂದ ಕೌರವಪಾಂಡವರಿಗೆ ಮಹಾಭಾರತ ಯುದ್ಧವೇ ನಡೆದುಹೋಯಿತು. ರಾಮಾಯಣದಲ್ಲಿಯೇ ವಾಲಿಸುಗ್ರೀವರಿಗೂ ರಾವಣವಿಭೀಷಣರಿಗೂ ದ್ವೇಷವು ಹೇಗೆ ಪುಟಿದೆದ್ದಿತೆಂಬುದನ್ನು ನಾವು ಕಂಡಿದ್ದೇವೆ. ಲಕ್ಷ್ಮಣನು ಶ್ರೀರಾಮನಲ್ಲಿಟ್ಟಿದ್ದ ಪ್ರೀತಿವಾತ್ಸಲ್ಯಗೌರವಬುದ್ಧಿಗಿಂತ ಭರತನದು ಯಾವ ರೀತಿಯಲ್ಲಿಯೂ ಕಡಿಮೆಯದ್ದಲ್ಲ. ಲಕ್ಷ್ಮಣನಿಗೊದಗಿದ ಸೇವಾವಕಾಶವೂ ಪರಾಕ್ರಮಪ್ರದರ್ಶನದ ಸಂದರ್ಭವೂ ಭರತನಿಗೆ ಒದಗಲಿಲ್ಲ. ದಶರಥನು ಕೈಕೇಯಿಯೊಡನೆ ಸಂಚನ್ನು ನಡೆಸಿದ್ದಾನೆಂದು ಲಕ್ಷ್ಮಣನು ತಂದೆಯನ್ನು ದೂರಿದ್ದುಂಟು. ಭರತನು ಯಾವ ದೋಷವನ್ನೂ ತಂದೆಯಲ್ಲಿ ಕಾಣದೆ, ಸರ್ವಾನರ್ಥಗಳಿಗೂ ತನ್ನ ತಾಯಿಯೇ ಹೊಣೆಯೆಂದು ಕೈಕೇಯಿ ಯನ್ನು ಕ್ರೂರವಾಕ್ಯಗಳಿಂದ ನಿಂದಿಸಿದ್ದಾನೆ. ಸೋದರಮಾವನ ಮನೆಯಿಂದ ಅಯೋಧ್ಯೆಗೆ ಬಂದಮೇಲೆ, ಅಲ್ಲಿಯ ಘಟನೆ ಸಿಡಿಲುಹೊಡೆದಂತೆ ಎರಗಿದಾಗ, ಭರತನ ವಿಚಾರಶಕ್ತಿಯ ತೂಕ ತಪ್ಪಿಹೋಗುತ್ತದೆ. ಉದ್ವಿಗ್ನನಾಗಿ, ದಿಗ್ಭ್ರಾಂತನಾಗಿ, ತನ್ನ ಪ್ರಜ್ಞಾಶಕ್ತಿಯನ್ನೇ ಕಳೆದುಕೊಂಡಂತೆ ವರ್ತಿಸುತ್ತಾನೆ. ಪರೋಕ್ಷವಾಗಿಯಾದರೂ ತಾನೇ ಈ ಸರ್ವಾನರ್ಥಗಳಿಗೆ ನಿಮಿತ್ತನಾದೆನೆಂದು ಹಲುಬುತ್ತಾನೆ. ತನ್ನ ವಂಶದ ಕೀರ್ತಿಯೇ ಕುಸಿದುಹೋಯಿತೆಂದು ದುಃಖಿಸು ತ್ತಾನೆ. ಈ ಪ್ರಸಂಗಗಳನ್ನು ವರ್ಣಿಸುವಾಗ ಮಹಾಕವಿಯ ಅಪಾರವಾದ ಕೌಶಲವು ವ್ಯಕ್ತವಾಗುತ್ತದೆ.

## ತಾಯಿಯ ಸಂದರ್ಶನ

ಶತ್ರುಘ್ನನೊಡನೆ ತ್ವರೆಯಿಂದ ಅಯೋಧ್ಯೆಗೆ ಹಿಂದಿರುಗಿದ ಭರತನಿಗೆ ನಗರವು ಹಾಳುಬಿದ್ದಂತೆ ಕಾಣಿಸಿತು. ಯಾವ ಪೌರನ ಮುಖದಲ್ಲಿಯೂ ಗೆಲುವಿರಲಿಲ್ಲ. ಯಾರೂ ಮುಖವೆತ್ತಿ ಈತನನ್ನು ನೋಡಲಿಲ್ಲ. ಇದೇನಿರ ಬಹುದೆಂದು ಕಳವಳಿಸುತ್ತ ಅರಮನೆಯನ್ನು ಪ್ರವೇಶಿಸಿ ತಂದೆಯನ್ನು ಮೊದಲು ನೋಡಬೇಕೆಂದು ದಶರಥನಿರುತ್ತಿದ್ದ ಸ್ಥಳಕ್ಕೆ ಧಾವಿಸುತ್ತಾನೆ. ಅದು ಶೂನ್ಯವಾಗಿತ್ತು. ಯಾರೂ ಇವನೊಡನೆ ಮಾತನಾಡಲು ಸಿದ್ಧರಿಲ್ಲ. ಒಡನೆಯೇ

ತಾಯಿಯಾದ ಕೈಕೇಯಿಯ ಅಂತಃಪುರಕ್ಕೆ ಧಾವಿಸುತ್ತಾನೆ. ಅವಳು ಹರ್ಷದಿಂದ ಮಗನನ್ನು ಆಲಿಂಗಿಸಿಕೊಂಡು ತನ್ನ ತಂದೆಯ ಯೋಗಕ್ಷೇಮಗಳನ್ನು ಕೇಳುತ್ತಾಳೆ. ಭರತನು ಸಂಕ್ಷೇಪವಾಗಿ ಎರಡು ಮಾತುಗಳಿಂದ ಉತ್ತರಹೇಳಿ ದಶರಥ ನೆಲ್ಲಿದ್ದಾನೆಂದು ವಿಚಾರಿಸುತ್ತಾನೆ. ಆಗ ನಡೆದ ಸಂಭಾಷಣೆ ನಾಟಕೀಯವಾಗಿದೆ.

**ಭರತ:** ಅಮ್ಮ, ಮಹಾರಾಜನು ಎಲ್ಲಿದ್ದಾನೆ? ಮೊದಲು ತಂದೆಯ ಪಾದಗಳಿಗೆ ವಂದಿಸಬೇಕಾಗಿದೆ. ಅರಮನೆಯಲ್ಲಿ ಪರಿವಾರದವರು ಯಾರೂ ಸಂತೋಷದಿಂದ ಇರುವಂತೆ ಕಾಣುವುದಿಲ್ಲ.

**ಕೈಕೇಯಿ:** ಭರತ, ಸಮಸ್ತ ಪ್ರಾಣಿಗಳಿಗೂ ಯಾವುದು ಕಡೆಯ ಗತಿಯೋ ಅದನ್ನು ನಿನ್ನ ತಂದೆಯಾದ ಮಹಾರಾಜನು ಪಡೆದುಕೊಂಡನು!

ಭರತನು 'ಹಾ ಹತೋಽಸ್ಮಿ' ಎಂದು ಕೂಗುತ್ತ ನೆಲದಮೇಲೆ ಕುಸಿದುಹೋದನು. ತಂದೆಯು ಮೃತನಾದನೆಂದು ಶೋಕದಿಂದ ವಿಹ್ವಲನಾದನು. ಮುಖವನ್ನು ಬಟ್ಟೆಯಿಂದ ಮುಚ್ಚಿಕೊಂಡು ಮಗುವಿನಂತೆ ಅತ್ತನು. ಕೈಕೇಯಿಯು 'ರಾಜಪುತ್ರ, ನಿನ್ನಂತಹ ಧೀರರು ಹೀಗೆ ಶೋಕಿಸಬಾರದು. ಮೇಲೇಳು' ಎಂದು ಕೈಹಿಡಿದು ಎತ್ತಿದಳು.

**ಭರತ:** "ಅಮ್ಮ, ನಮ್ಮ ತಂದೆಯು ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲು ಉದ್ಯೋಗಿಸಿರಬಹುದು, ಅಥವಾ ಒಂದು ಯಾಗವನ್ನು ಮಾಡಲು ಸಂಕಲ್ಪಿಸಿರಬಹುದು. ಆದ್ದರಿಂದ ನನಗೆ ಹೇಳಿಕಳಿಸಿದ್ದಾನೆ" ಎಂದು ನಾನು ಭಾವಿಸಿದ್ದೆ. ಶ್ರೀರಾಮನೇ ಪುಣ್ಯಶಾಲಿ. ಪಿತೃಸಂಸ್ಕಾರವನ್ನು ಮಾಡುವ ಭಾಗ್ಯ ಅವನಿಗೆ ದೊರಕಿತು! ಇನ್ನು ಮೇಲೆ ಆತನೇ ನನ್ನ ತಂದೆ. ಶ್ರೀರಾಮನ ದಾಸ ನಾನು. ಆತನ ಪಾದಗಳನ್ನು ಹಿಡಿದು ನಮಸ್ಕರಿಸುವೆನು. ಅಮ್ಮ, ನಮ್ಮ ತಂದೆ ಪ್ರಾಣಬಿಡುವಾಗ ಏನು ಹೇಳಿದ? ಅವನ ಅಂತ್ಯಸಂದೇಶವನ್ನು ಕೇಳಲು ಬಯಸುತ್ತೇನೆ.

**ಕೈಕೇಯಿ:**

**ರಾಮೇತಿ ರಾಜಾ ವಿಲಪನ್ ಹಾ ಸೀತೇ ಲಕ್ಷ್ಮಣೇತಿ ಚ ।**
**ಸ ಮಹಾತ್ಮಾ ಪರಂ ಲೋಕಂ ಗತೋ ಗತಿಮತಾಂ ವರಃ ॥**

'ಮಹಾತ್ಮನಾದ ಮಹಾರಾಜನು ರಾಮ! ಸೀತೇ! ಲಕ್ಷ್ಮಣ! – ಎಂದು ಹೇಳುತ್ತ ಪರಲೋಕವನ್ನೈದಿದನು. ಸದ್ಗತಿಯನ್ನು ಪಡೆದವರಲ್ಲಿ ಅವನು

ಶ್ರೇಷ್ಠನಾದವನು'. ಅಲ್ಲದೆ 'ಸೀತಾಲಕ್ಷ್ಮಣರೊಡನೆ ಪುನರಾಗಮಿಸುವ ರಾಮನನ್ನು ಯಾರು ನೋಡುವರೋ ಅವರೇ ಧನ್ಯರು' ಎಂದು ನೀನ್ನ ತಂದೆ ಹೇಳಿದನು.

ಈ ಮಾತನ್ನು ಕೇಳಿ ಭರತನು ಮತ್ತಷ್ಟು ದುಃಖಿತನಾದ. ಅವನು ವಿಷಾದದಿಂದ ಕೇಳುತ್ತಾನೆ.

**ಭರತ:** ಹಾಗೆಂದರೇನು? ಸೀತಾಲಕ್ಷ್ಮಣರೊಡನೆ ಧರ್ಮಾತ್ಮನಾದ ಶ್ರೀರಾಮನು ಎಲ್ಲಿಗೆ ಹೋಗಿದ್ದಾನೆ?

**ಕೈಕೇಯಿ:** ಮಗನೆ, ಆತನು ನಾರುಬಟ್ಟೆಯನ್ನುಟ್ಟು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯಕ್ಕೆ ಹೊರಟುಹೋದ.

**ಭರತ:** (ಅತ್ಯಂತ ವಿಷಣ್ಣನಾಗಿ) ಅದೇಕೆ? ಶ್ರೀರಾಮನು ದೇಶಭ್ರಷ್ಟನಾದನೆ? ಮಾಡಬಾರದ ಯಾವ ಪಾಪ ಕೃತ್ಯವನ್ನು ಅವನು ಮಾಡಿದನೆಂದು ಅವನು ದೇಶಭ್ರಷ್ಟನಾದ?

**ಕೈಕೇಯಿ:** ಭರತ, ಕೇಳು. ರಾಮನು ಯಾವ ಪಾಪಕೃತ್ಯವನ್ನು ಮಾಡತಕ್ಕವನೂ ಅಲ್ಲ. ನಾನು ನಿನಗೋಸ್ಕರ ರಾಜ್ಯವನ್ನು ಕೇಳಿದೆ. ನಿನಗೆ ಪಟ್ಟಾಭಿಷೇಕ ಮಾಡಬೇಕೆಂದೂ ರಾಮನನ್ನು ಹದಿನಾಲ್ಕು ವರ್ಷ ಕಾಡಿಗೆ ಕಳಿಸಬೇಕೆಂದೂ ಮಹಾರಾಜನನ್ನು ಒತ್ತಾಯಿಸಿ ವರವನ್ನು ಕೇಳಿದೆ. ತಾನು ಕೊಟ್ಟ ಮಾತಿನಂತೆ ನಿನ್ನ ತಂದೆ ನಡೆದುಕೊಂಡಿದ್ದಾನೆ. ರಾಮನೊಡನೆ ಸೀತಾಲಕ್ಷ್ಮಣರೂ ಕಾಡಿಗೆ ಹೋದರು. ತನ್ನ ಪ್ರೀತಿಯ ಪುತ್ರನ ವಿಯೋಗದಿಂದ ಮಹಾರಾಜನು ಪ್ರಾಣವನ್ನು ತ್ಯಜಿಸಿದ. ನಿನಗೋಸ್ಕರ ಇದೆಲ್ಲವನ್ನು ನಾನು ಮಾಡಿದ್ದೇನೆ. ಎದ್ದೇಳು. ಅಳಬೇಡ. ನಿನ್ನ ತಂದೆಯ ಉತ್ತರಕ್ರಿಯೆಯನ್ನು ಮಾಡಿ ಧೈರ್ಯದಿಂದ ಪಟ್ಟಾಭಿಷಿಕ್ತನಾಗು!

## ಕೈಕೇಯಿಯ ಹೊಣೆ

ಭರತನಿಗೆ ಈ ಆಘಾತಗಳನ್ನು ತಡೆದುಕೊಳ್ಳಲಾಗಲಿಲ್ಲ. ಅವನ ಕೋಮಲ ಚಿತ್ತಕ್ಕೆ ಒಂದರ ಮೇಲೊಂದರಂತೆ ಬಲವಾದ ಹೊಡೆತ ಬಿದ್ದಿತು. ಕಗ್ಗತ್ತಲೆಯಂತಿದ್ದ ಆ ಸಮಸ್ಯೆಯ ಬೇರು ತನ್ನನ್ನೇ ಸುತ್ತಿಕೊಂಡಿದೆಯೆಂಬ ಅರಿವು ಮೂಡಿದಾಗ ಅವನ ಶೋಕರೋಷಗಳಿಗೆ ಪಾರವೇ ಉಳಿಯಲಿಲ್ಲ.

ಅದುವರೆಗೆ ಯಾವ ಕಷ್ಟಕ್ಕೂ ಒಳಗಾಗದೆ, ಯಾವ ಬಿಕ್ಕಟ್ಟನ್ನೂ ಎದುರಿಸದೆ ಸುಖದಿಂದ ಬೆಳೆದಿದ್ದ ಆ ರಾಜಕುಮಾರನ ಅಂತಃಕರಣವು ಕ್ಷುಬ್ಧವಾಗಿ ತಲ್ಲಣಗೊಂಡಿತು.

ಕೈಕೇಯಿಯನ್ನುದ್ದೇಶಿಸಿ ಅವನ ಬಾಯಿಂದ ಹೊರಟ ಈ ಮಾತುಗಳನ್ನು ಕೇಳಿ–

**ಕಿಂ ನು ಕಾರ್ಯಂ ಹತಸ್ಯೇಹ ಮಮರಾಜ್ಯೇನ ಶೋಚತಃ ।**
**ವಿಹೀನಸ್ಯಾಥ ಪಿತ್ರಾ ಚ ಭ್ರಾತ್ರಾ ಪಿತೃಸಮೇನ ಚ ॥**

ಶೋಕಸಂತಪ್ತನಾಗಿ ಹಾಳಾಗಿಹೋದ ನನಗೆ ಈ ರಾಜ್ಯದಿಂದ ಏನಾಗಬೇಕು? ತಂದೆಯನ್ನು ಕಳೆದುಕೊಂಡು, ತಂದೆಗೆ ಸಮನಾದ ಅಣ್ಣನಿಂದ ವಿಮುಕ್ತನಾದ ನನಗೆ ರಾಜ್ಯ ಬೇಕೆ?

**ದುಃಖೇ ಮೇ ದುಃಖಮಕರೋಃ ವ್ರಣೇಕ್ಷಾರಮಿವಾದಧಾಃ ।**
**ರಾಜಾನಂ ಪ್ರೇತಭಾವಸ್ಥಂ ಕೃತ್ವಾ ರಾಮಂ ಚ ತಾಪಸಮ್ ॥**

ಮಹಾರಾಜನನ್ನು ನೀನು ಸಾಯಿಸಿದೆ. ಶ್ರೀರಾಮನನ್ನು ತಾಪಸನನ್ನಾಗಿಸಿ ಕಾಡಿಗೆ ಕಳಿಸಿದೆ. ನನಗೆ ದುಃಖದ ಮೇಲೆ ದುಃಖವನ್ನು ತಂದೊಡ್ಡಿದೆಯಲ್ಲ. ಗಾಯದ ಮೇಲೆ ಉಪ್ಪನ್ನು ಸುರಿದಂತೆ ಮಾಡಿದ್ದೀಯೆ!

**ಕುಲಸ್ಯ ತ್ವಮಭಾವಾಯ ಕಾಲರಾತ್ರಿರಿವಾಗತಾ ।**
**ಅಂಗಾರಮುಪಗೂಹ್ಯ ತ್ವಾಂ ಪಿತಾ ಮೇ ನಾವಬುದ್ಧವಾನ್ ॥**

ಈ ವಂಶವನ್ನು ನಿರ್ಮೂಲ ಮಾಡುವುದಕ್ಕಾಗಿ ಬಂದು ಸೇರಿದ್ದೀಯೆ. ಕಾಳರಾತ್ರಿಯಂತೆ ಬಂದಿದ್ದೀಯೆ. ನಿನ್ನನ್ನು ಮದುವೆಯಾದ ನನ್ನ ತಂದೆಗೆ ಬೆಂಕಿಯ ಕೆಂಡವನ್ನು ಅಪ್ಪಿಕೊಂಡಿದ್ದೇನೆಂದು ಗೊತ್ತಾಗದೆ ಹೋಯಿತು!

**ಮೃತ್ಯುಮಾಪಾದಿತೋ ರಾಜಾ ತ್ವಯಾ ಮೇ ಪಾಪದರ್ಶಿನಿ ।**
**ಸುಖಂ ಪರಿಹೃತಂ ಮೋಹಾತ್ ಕುಲೇಽಸ್ಮಿನ್ ಕುಲಪಾಂಸನಿ ॥**

ಎಲೆ ಪಾಪಿಷ್ಠೆ । ನನ್ನ ತಂದೆಯನ್ನು ಕೊಂದವಳು ನೀನು. ಈ ವಂಶದಲ್ಲಿ ಸುಖವೆಂಬುದೇ ಇಲ್ಲದಂತೆ ಮಾಡಿದ್ದೀಯ. ಕುಲಘಾತಕಿ ನೀನು!

ನನ್ನ ಅಣ್ಣ ನಿನ್ನನ್ನು ಹಡೆದ ತಾಯಿಯಂತೆ ನೋಡಿಕೊಳ್ಳುತ್ತಿದ್ದ ಧರ್ಮಾತ್ಮ. ದೊಡ್ಡಮ್ಮ ಕೌಸಲ್ಯಾದೇವಿಯೂ ನಿನ್ನನ್ನು ಸೋದರಿಯಂತೆ

ಕಾಣುತ್ತಿದ್ದಳು. ಎಲೈ ಪಾಪಿ, ಅವಳ ಪುತ್ರನನ್ನು ನಾರುಬಟ್ಟೆಯುಡಿಸಿ ಕಾಡಿಗೆ ಅಟ್ಟಿದೆಯಲ್ಲ, ನಿನಗೆ ವ್ಯಥೆಯೇ ಆಗುವುದಿಲ್ಲವೇ? ಈ ರಾಜ್ಯವನ್ನಾಳುವ ಸಾಮರ್ಥ್ಯ ನನಗಿದೆಯೆ? ಒಂದುವೇಳೆ ಹೇಗೋ ಈ ಮಹಾಕಾರ್ಯವನ್ನು ನಿರ್ವಹಿಸಿಯೇನು. ಆದರೆ, ಕೈಕೇಯಿ, ನಿನ್ನ ಬಯಕೆಯನ್ನೆಂದಿಗೂ ನಾನು ನಡೆಸತಕ್ಕವನಲ್ಲ. ನಾನು ರಾಜನಾಗುವುದಿಲ್ಲ!

ಮಾತೃರೂಪೇ ಮಮಾಮಿತ್ರೇ ನೃಶಂಸೇ ರಾಜ್ಯಕಾಮುಕೇ ।
ನ ತೇಽಹಮಭಿಭಾಷ್ಯೋಽಸ್ಮಿ ದುರ್ವೃತ್ತೇ ಪತಿಘಾತಿನಿ ॥

ರಾಜ್ಯಕ್ಕಾಗಿ ಹಂಬಲಿಸಿದ ಕ್ರೂರಾತ್ಮಳೇ! ತಾಯಿಯ ರೂಪದಲ್ಲಿರುವ ನನ್ನ ವೈರಿ ನೀನು! ದುಷ್ಟೆ, ಪತಿಘಾತಿನಿ, ನನ್ನೊಡನೆ ನೀನು ಮಾತಾಡಕೂಡದು!

ಶ್ರೀರಾಮನು ನಿನ್ನನ್ನು ತಾಯಿಯಂತೆ ಕಾಣದೆ ಹೋಗಿದ್ದರೆ, ನಿನ್ನನ್ನು ಈ ರಾಜ್ಯದಿಂದ ಓಡಿಸಿಬಿಡುತ್ತಿದ್ದೆ. ನೀನೇ ಕಾಡಿಗೆ ಹೋಗಿಬಿಡು. ಬೆಂಕಿಯಲ್ಲಾದರೂ ಬೀಳು. ನೇಣು ಹಾಕಿಕೊಂಡಾದರೂ ಸಾಯಿ!"

*ಅಯೋಧ್ಯಾ. ಸರ್ಗ-೭೪, ೭೫*

## ಪಶ್ಚಾತ್ತಾಪ

ಕೈಕೇಯಿಯ ಮುಖ ಕಪ್ಪಿಟ್ಟಿತು. ತನ್ನ ಪ್ರಯತ್ನವೆಲ್ಲವೂ ವ್ಯರ್ಥವಾಯಿತಲ್ಲದೆ ಅನರ್ಥವನ್ನೂ ತಂದಿತೆಂದು ದೀನವದನಳಾದಳು. ಅಷ್ಟುಹೊತ್ತಿಗೆ ಅಮಾತ್ಯರು ಅಲ್ಲಿಗೆ ಬಂದು ಸೇರಿದರು. ಭರತನು ಅವರನ್ನು ನೋಡಿ "ನನಗೆ ರಾಜ್ಯಬೇಕಿಲ್ಲ. ಪಟ್ಟಾಭಿಷೇಕದ ವಿಷಯವೇನೂ ನನಗೆ ಗೊತ್ತಿಲ್ಲ. ನಾನು ಶತ್ರುಘ್ನನೊಡನೆ ದೂರದೇಶದಲ್ಲಿದ್ದವನು. ಶ್ರೀರಾಮನೂ ಸೀತಾಲಕ್ಷ್ಮಣರೂ ಕಾಡಿಗೆ ಹೋದರೆಂಬುದೂ ನನಗೆ ತಿಳಿಯದ ವಿಷಯ" ಎಂದನು. ಅವನ ಕೂಗಾಟ, ರೇಗಾಟ, ರೋದನ ಧ್ವನಿಗಳು ಅರಮನೆಯಲ್ಲಿ ಪ್ರತಿಧ್ವನಿಸಿದವು. ಈ ಗಲಾಟೆಯು ಕೌಸಲ್ಯೆಗೆ ತಿಳಿಯಿತು. ಭರತನು ಬಂದಿರಬೇಕೆಂದು ಊಹಿಸಿ ಅವಳು ಸುಮಿತ್ರೆಯೊಡನೆ ಆತನನ್ನು ನೋಡಲು ಹೊರಟಳು. ಭರತನೂ ಕೌಸಲ್ಯೆಯನ್ನು ಕಾಣಲು ಹೊರಟಿದ್ದ. ದಾರಿಯಲ್ಲಿ ಉಭಯರ ಭೇಟಿಯಾಯಿತು. ಕೌಸಲ್ಯೆ ಭರತನನ್ನು ನೋಡಿ "ರಾಜ್ಯಕಾಮನಾದ ನಿನಗೆ ರಾಜ್ಯವೇನೋ ನಿಷ್ಕಂಟಕವಾಗಿ ದೊರೆಯಿತು. ಆದರೆ ನಿನ್ನ ತಾಯಿ ನನ್ನ ಮಗನನ್ನು ಕಾಡಿಗೇಕೆ ಕಳಿಸಬೇಕಾಗಿತ್ತು?" ಎಂದಳು. ಅದನ್ನು

ಕೇಳಿ ಭರತನು ಶೋಕಾರ್ತನಾಗಿ ಕೌಸಲ್ಯೆಯ ಪಾದಗಳ ಮೇಲೆ ಬಿದ್ದು ಮೂರ್ಛೆ ಹೋಗುತ್ತಾನೆ. ಅನಂತರ ಎಚ್ಚೆತ್ತಮೇಲೆ "ನನಗೆ ಯಾವ ವಿಷಯವೂ ತಿಳಿಯದು. ನಾನು ರಾಜ್ಯವನ್ನು ಬಯಸಿದ್ದೇ ಆಗಿದ್ದರೆ, ನನಗೆ ಇಂಥ ದುರ್ಗತಿ ಒದಗಲಿ" ಎಂದು ಆಣೆಗಳಮೇಲೆ ಆಣೆಗಳಿಡುತ್ತಾನೆ. ಆಗ ಭರತನ ನಿರ್ಮಲಾಂತಃಕರಣವು ಕೌಸಲ್ಯೆಗೆ ಗೋಚರವಾಗಿ ಅವನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಅಳುತ್ತಾಳೆ.

ಭರತನು ಶತ್ರುಘ್ನನೊಡನೆ ತಂದೆಯ ಊರ್ಧ್ವಸಂಸ್ಕಾರವನ್ನು ನೆರವೇರಿಸಿದ್ದಾಯಿತು. ಇಲ್ಲೊಂದು ವಿಶೇಷವನ್ನು ಕಾಣಬಹುದು. ಶ್ರೀರಾಮನಿಗೆ ವನವಾಸವು ಪ್ರಾಪ್ತವಾಯಿತೆಂದು ಭರತನು ಪರಮದುಃಖಿತನಾದರೂ, ದಶರಥನನ್ನು ಯಾವ ಸಮಯದಲ್ಲಿಯೂ ದೂಷಿಸುವುದಿಲ್ಲ. ಎಲ್ಲ ತಪ್ಪೂ ತನ್ನ ತಾಯಿ ಕೈಕೇಯಿಯದೆಂದೇ ಅವನ ನಿಶ್ಚಯ. ಲಕ್ಷ್ಮಣನಾದರೋ ತಂದೆಯ ಮೇಲೆ ಕೋಪಗೊಂಡಿದ್ದ. ದಶರಥ–ಕೈಕೇಯಿ ಇಬ್ಬರೂ ಸೇರಿ ಸಂಚುಮಾಡಿದ್ದಾರೆಂದು ಅವನು ಶಂಕಿಸಿದ್ದ. ತಂದೆಯನ್ನು ಬಂಧಿಸಿ ಜೈಲಿಗೆ ಹಾಕುತ್ತೇನೆಂದು ಸಹ ಅಬ್ಬರಿಸಿದ್ದ. ಶತ್ರುಘ್ನನೂ ಲಕ್ಷ್ಮಣನ ಪ್ರತಿಬಿಂಬವೇ. "ಲಕ್ಷ್ಮಣನೇಕೆ ಸುಮ್ಮಗಿದ್ದ? ತಂದೆಯನ್ನು ನಿಗ್ರಹಿಸಿ ಈ ಅನರ್ಥವನ್ನು ತಡೆಯಬಹುದಾಗಿತ್ತಲ್ಲಾ?" ಎಂದು ಹೇಳಿದ್ದಾನೆ. ಚಾಡಿ ಹೇಳಿದಳೆಂದು ಕುಬ್ಜೆಯನ್ನು ಕೊಲ್ಲುವವರೆಗೆ ಸಹ ಅವನು ಹೋಗಿದ್ದ. ಭರತನೇ ಅವನನ್ನು ತಡೆದನು.

## ಕರ್ತವ್ಯನಿಶ್ಚಯ

ಮುಂದಿನ ವ್ಯವಸ್ಥೆ ಹೇಗೆ? ಶ್ರೀರಾಮನನ್ನು ಅರಣ್ಯದಿಂದ ಕರೆತಂದು ಅವನಿಗೇ ಪಟ್ಟಾಭಿಷೇಕ ಮಾಡಬೇಕೆಂದು ಭರತನ ನಿಶ್ಚಯ. ಪರೋಕ್ಷವಾಗಿ ಈ ವಿಪತ್ತಿಗೆ ತಾನು ಕಾರಣನಾದ್ದರಿಂದ, ತಾನೇ ಹದಿನಾಲ್ಕು ವರ್ಷ ವನವಾಸ ಮಾಡುತ್ತೇನೆಂದು ಅವನ ಆಗ್ರಹ. ಅವನ ಧರ್ಮನಿಷ್ಠೆಯನ್ನು ಹೃದಯಮಾರ್ದವವನ್ನೂ ಭ್ರಾತೃವಾತ್ಸಲ್ಯವನ್ನೂ ಕಂಡು ನಾವು ಬೆರಗಾಗಿ ಹೋಗುತ್ತೇವೆ. "ಭರತ, ನೀನು ಪಟ್ಟಾಭಿಷಿಕ್ತನಾಗು" ಎಂದು ವಸಿಷ್ಠರು ಹೇಳಿದಾಗ, "ಇಂತಹ ಮಾತನ್ನು ನೀವು ಆಡಬಹುದೆ?" ಎಂದು ಕುಲಪುರೋಹಿತರನ್ನೇ ಆಕ್ಷೇಪಿಸುತ್ತಾನೆ. "ಜಗರ್ಹೇ ಚ ಪುರೋಹಿತಮ್." ಅವನ ದೃಢವಾದ ನಿಲುವು ಇದು–

**ಕಥಂ ದಶರಥಾಜ್ಜಾತೋ ಭವೇದ್ರಾಜ್ಯಾಪಹಾರಕಃ ॥**

ದಶರಥನಿಗೆ ಮಗನಾಗಿ ಹುಟ್ಟಿದವನು ರಾಜ್ಯಾಪಹಾರಿಯು ಹೇಗಾದಾನು?

**ಇಕ್ಷ್ವಾಕೂಣಾಮಹಂ ಲೋಕೇ ಭವೇಯಂ ಕುಲಪಾಂಸನಃ ॥**

ಇಕ್ಷ್ವಾಕುವಂಶಕ್ಕೆ ಈ ಲೋಕದಲ್ಲಿ ನಾನು ಕುಲಗೇಡಿಯಾಗಿ ಬಿಟ್ಟೇನು."

ಭರತನಿಗೆ ತನ್ನ ತಂದೆಯಲ್ಲಿಯೂ ತನ್ನ ವಂಶದಲ್ಲಿಯೂ ಇದ್ದ ಶ್ರದ್ಧಾಗೌರವಗಳು ಅನುಕರಣೀಯವಾದವು.

ಶ್ರೀರಾಮನು ಅರಣ್ಯದಿಂದ ಈಗಲೇ ಬಂದು ತನ್ನ ಕಣ್ಣೆದುರಿಗೆ ಪಟ್ಟಾಭಿಷಿಕ್ತನಾಗಬೇಕೆಂದು ಭರತನ ಹಠ. ಅವನನ್ನು ವೈಭವದಿಂದ ಅಯೋಧ್ಯೆಗೆ ಕರೆತರಬೇಕೆಂದು ಸೇನಾಸಮೇತನಾಗಿ ಪಟ್ಟದ ಆನೆಯನ್ನು ಜೊತೆಗೂಡಿಸಿ ಪರಿವಾರದೊಡನೆ ಅರಣ್ಯಕ್ಕೆ ಹೊರಟುಬಿಡುತ್ತಾನೆ. ಸುಮಂತ್ರ, ವಸಿಷ್ಠಾದಿಗಳೂ ಜೊತೆಗೆ ಬರುತ್ತಾರೆ. ಕೌಸಲ್ಯೆ, ಸುಮಿತ್ರೆಯರೂ ಹೊರಟರು. ಕೈಕೇಯಿಯೂ ಬಂದಳು. ಅವಳು ತಾನು ಮಾಡಿದ ತಪ್ಪನ್ನು ಅರಿತುಕೊಂಡು ತೀವ್ರವಾದ ಪಶ್ಚಾತ್ತಾಪಕ್ಕೆ ಗುರಿಯಾಗಿರಬೇಕು. ತನ್ನ ನಿಲುವು ತಪ್ಪೆಂದೂ ಶ್ರೀರಾಮನು ಪಟ್ಟಾಭಿಷಿಕ್ತನಾಗುವುದು ತನಗೆ ಪೂರ್ತಿ ಸಂಮತವಾಗಿದೆಯೆಂದೂ ರುಜುವಾತು ಮಾಡುವುದಕ್ಕಾಗಿ ಅವಳೂ ಅರಣ್ಯಕ್ಕೆ ಹೊರಟಿರಬೇಕು.

ಗಂಗಾತೀರದಲ್ಲಿ ಭರತನಿಗೆ ಗುಹನ ಭೇಟಿಯಾಗುತ್ತದೆ. ಶ್ರೀರಾಮನು ಯಾವ ಮಾರ್ಗದಲ್ಲಿ ಹೋದನೆಂದು ವಿಚಾರಿಸುತ್ತಾನೆ. ಭರತನ ಸೇನಾಬಲವನ್ನು ಕಂಡು ಗುಹನಿಗೆ ಸಂದೇಹ. ದುರ್ಭಾವನೆಯಿಂದ ಭರತನು ಬಂದಿರಬಹುದೆ? ಅವನು ನೇರವಾಗಿ ಕೇಳಿಯೇ ಬಿಡುತ್ತಾನೆ–

**ಕಚ್ಚಿನ್ನ ದುಷ್ಟೋ ವ್ರಜಸಿ ರಾಮಸ್ಯಾಕ್ಲಿಷ್ಟಕರ್ಮಣಃ ।**
**ಇಯಂ ತೇ ಮಹತೀ ಸೇನಾ ಶಂಕಾಂ ಜನಯತೀವ ಮೇ ॥**

*ಅಯೋಧ್ಯಾ ೮೩-೭*

ಭರತನ ಉತ್ತರದಿಂದ ಅವನಿಗೆ ಸಮಾಧಾನವಾಗುತ್ತದೆ. ಈ ಸಮಯದಲ್ಲಿ ವಾಲ್ಮೀಕಿ ಮುನಿಗಳು ಭರತನನ್ನು 'ಆಕಾಶ ಇವ ನಿರ್ಮಲಃ' ಎಂದಿದ್ದಾರೆ. ಆಕಾಶವು ಯಾವಾಗಲೂ ಶುಭ್ರವಾಗಿಯೇ ಇರುತ್ತದೆ. ಅದಕ್ಕೆ ಕೊಳೆ ಅಂಟಿಕೊಳ್ಳುವ ಪ್ರಸಂಗವೇ ಇಲ್ಲ. ಧೂಳಿಯಾಗಲಿ ಮೋಡವಾಗಲಿ ಹೊಗೆಯಾಗಲಿ ಗಾಳಿಗೆ ಸಂಬಂಧಿಸಿದ್ದು. ಆಕಾಶವು ಮಲಿನವಾಗಿದೆಯೆಂಬುದು

ಆರೋಪಿತ, ವಸ್ತುಸ್ಥಿತಿಯಲ್ಲ–ನೈರ್ಮಲ್ಯಕ್ಕೆ ಆಕಾಶಕ್ಕಿಂತ ಉತ್ತಮವಾದ ಇನ್ನೊಂದು ಉಪಮಾನವೇ ಸಿಗದು. ಭರತನ ವಿಷಯದಲ್ಲಿ ಇದ್ದ ಶಂಕೆಯೂ ಆರೋಪಿತ.

ಶ್ರೀರಾಮನು ಸೀತಾಲಕ್ಷ್ಮಣರೊಡನೆ ಗಂಗಾತೀರದಲ್ಲಿ ಒಂದು ರಾತ್ರಿ ತಂಗಿದ್ದನು. ಆಗ ನಡೆದ ವೃತ್ತಾಂತವೆಲ್ಲವನ್ನೂ ಭರತನು ಗುಹನನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಶ್ರೀರಾಮನೂ ಸೀತೆಯೂ ನೆಲದ ಮೇಲೆ ಮಲಗಿದ್ದ ಸ್ಥಳವನ್ನು ನೋಡಲು ಹೋಗುತ್ತಾನೆ. ಆ ಸ್ಥಳವನ್ನು ನೋಡಿದಾಗ ಭರತನ ದುಃಖವು ಉಮ್ಮಳಿಸುತ್ತದೆ. ಆಗ ಅವನು ಮಾಡಿದ ಪ್ರತಿಜ್ಞೆ ಇದು–

**ಅದ್ಯ ಪ್ರಭೃತಿ ಭೂಮೌ ತು ಶಯಿಷ್ಯೇऽಹಂ ತೃಣೇಷು ವಾ ।**
**ಫಲಮೂಲಾಶನೋ ನಿತ್ಯಂ ಜಟಾಚೀರಾಣಿ ಧಾರಯನ್ ॥**

ಅಯೋಧ್ಯಾ ೮೮–೨೬

"ಇಂದಿನಿಂದ ನಾನು ಬರಿಯ ನೆಲದಮೇಲೆ ಅಥವಾ ಹುಲ್ಲನ್ನು ಹಾಸಿ ಮಲಗುತ್ತೇನೆ. ಜಟೆಯನ್ನು ಧರಿಸಿ ನಾರುಬಟ್ಟೆಯನ್ನುಟ್ಟು ಕಂದಮೂಲಫಲ ಗಳನ್ನು ಮಾತ್ರ ತಿಂದುಕೊಂಡಿರುತ್ತೇನೆ." ಭರತನ ಭಾವುಕತೆಗೆ ಮೇರೆಯೇ ಇಲ್ಲ.

## ಭರದ್ವಾಜ ದರ್ಶನ

ಗುಹನಿಂದ ಶ್ರೀರಾಮನು ಹೋದ ದಾರಿಯನ್ನು ತಿಳಿದು ಭರತನು ಸೇನಾಸಮೇತನಾಗಿ ಭರದ್ವಾಜಾಶ್ರಮದ ಕಡೆಗೆ ಹೋಗುತ್ತಾನೆ. ಆಶ್ರಮಕ್ಕೆ ದೂರದಲ್ಲಿ ಸೇನೆಯನ್ನು ನಿಲ್ಲಿಸಿ ಮಿತ ಪರಿವಾರದೊಡನೆ ಋಷಿಗಳನ್ನು ಸಂದರ್ಶಿಸಿದಾಗ ಭರದ್ವಾಜರು "ಭರತ, ನೀನೀಗ ಇಲ್ಲಿಗೆ ಬಂದದ್ದೇಕೆ? ರಾಮನನ್ನು ಹುಡುಕುವ ಉದ್ದೇಶವೇನು? ನನ್ನ ಮನಸ್ಸು ಶುದ್ಧವಾಗಲಿಲ್ಲ" ಎಂದರು. ಋಷಿಗಳೂ ನನ್ನನ್ನು ಶಂಕಿಸುತ್ತಿದ್ದಾರಲ್ಲ – ಎಂದು ಭರತನಿಗೆ ಬಹಳ ದುಃಖವಾಯಿತು. ಅವನು ತೊದಲುತ್ತ–

**ಹತೋऽಸ್ಮಿ ಯದಿ ಮಾಮೇವಂ ಭಗವಾನಪಿ ಮನ್ಯತೇ ।**
**ಮತ್ತೋ ನ ದೋಷಮಾಶಂಕೇ ನೈವಂ ಮಾಮನುಶಾಧಿ ಹಿ ॥**

"ಪೂಜ್ಯರಾದ ತಾವೂ ಈ ರೀತಿಯಾಗಿ ನನ್ನನ್ನು ಭಾವಿಸುವುದಾದರೆ,

ಅಯ್ಯೋ, ನಾನು ಕೆಟ್ಟುಹೋದೆ. ನನ್ನಿಂದ ಯಾವ ಅಪರಾಧವೂ ಘಟಿಸಲಿಲ್ಲ. ಹೀಗೆ ತಾವು ಅಪ್ಪಣೆಮಾಡಬಾರದು'' ಎಂದನು.

ವಿವರಗಳೆಲ್ಲವನ್ನೂ ಕೇಳಿದ ಮೇಲೆ ಭರತನ ಭ್ರಾತೃವಾತ್ಸಲ್ಯವನ್ನು ಕಂಡು ಭರದ್ವಾಜರಿಗೆ ಬಹಳ ಸಂತೋಷವಾಯಿತು. ಭರತನ ಪರಿವಾರದ ವರಿಗೆ ಭರದ್ವಾಜರು ಒಂದು ಔತಣವನ್ನೇ ಏರ್ಪಡಿಸಿದರು.

## ಭ್ರಾತೃದರ್ಶನ

ಚಿತ್ರಕೂಟಪರ್ವತದ ಬಳಿಗೆ ಬಂದದ್ದಾಯಿತು. ಶ್ರೀರಾಮನಿರುವ ಸ್ಥಳವನ್ನು ಹುಡುಕಬೇಕೆಂದು ಸೇನೆಗೆ ಆಜ್ಞಾಪಿಸಿ ತಾನೊಂದು ಮಾರ್ಗವನ್ನು ಹಿಡಿದು ಬೇಗಬೇಗನೆ ಬೆಟ್ಟದ ಕಾಡಿನೊಳಗೆ ಹೋಗುತ್ತಾನೆ. ಜೊತೆಗೆ ಶತ್ರುಘ್ನನೂ ಹೋಗುತ್ತಾನೆ. ಅಣ್ಣನನ್ನು ಕಂಡ ಹೊರತು 'ನ ಮೇ ಶಾಂತಿರ್ಭವಿಷ್ಯತಿ' ಎಂದು ಮತ್ತೆ ಮತ್ತೆ ಹೇಳುತ್ತ ಹೋಗುವಾಗ ದೂರದಲ್ಲಿ ಹೊಗೆ ಕಾಣಿಸುತ್ತದೆ. ಓಹೋ ಇಲ್ಲಿಯೇ ಅವರು ಇರಬೇಕು–ಎಂದು ನಿಶ್ಚಯಿಸಿ ಮುಂದೆ ಹೋದಾಗ ಪರ್ಣಶಾಲೆಯ ಆವರಣದಲ್ಲಿ ಶ್ರೀರಾಮನು ಜಟಾಧಾರಿಯಾಗಿ ನಾರುಬಟ್ಟೆಯುಟ್ಟು ಕುಳಿತಿರುವುದು ಕಾಣಿಸುತ್ತದೆ. ಆ ವೇಷವನ್ನು ನೋಡಿದಾಗ ಭರತನ ಶೋಕಕ್ಕೆ ಪಾರವೇ ಉಳಿಯುವುದಿಲ್ಲ.

'ಧಿಗ್ ಜೀವಿತಂ ನೃಶಂಸಸ್ಯ ಮಮ ಲೋಕವಿಗರ್ಹಿತಮ್ = ಕ್ರೂರಿಯಾದ ನನ್ನ ಲೋಕನಿಂದಿತವಾದ ಬದುಕಿಗೆ ಧಿಕ್ಕಾರ!' ಎಂದು ಹೇಳಿಕೊಂಡು ಶ್ರೀರಾಮನ ಪಾದಗಳಿಗೆ ನಮಸ್ಕರಿಸಬೇಕೆಂದು ಧಾವಿಸುತ್ತಾನೆ. ಕೈಚಾಚಿಕೊಂಡು ಅಳುತ್ತಾ ಬಂದು ಪಾದಗಳನ್ನು ಮುಟ್ಟುವುದರೊಳಗೆ ಬಿದ್ದು ಹೋಗುತ್ತಾನೆ.

**ಪಾದಾವಪ್ರಾಪ್ಯ ರಾಮಸ್ಯ ಪಪಾತ ಭರತೋ ರುದನ್ ॥**

*ಅಯೋಧ್ಯಾ. ೯೯–೩೭*

ಶ್ರೀರಾಮನು ಭರತನನ್ನು ಮೇಲೆತ್ತಿ ಆಲಿಂಗಿಸಿ, ಮೈದಡವಿ, ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಕಣ್ಣೀರು ಸುರಿಸುತ್ತಾ ಮಾತಾಡಿಸುತ್ತಾನೆ. ಎಂತಹ ದೃಶ್ಯವಿದು!

## ತ್ಯಾಗಪ್ರೀತಿಗಳ ಸಂಗಮ

ಈಗ ಇನ್ನೊಂದು ದೃಶ್ಯವನ್ನು ನೋಡೋಣ. ದಶರಥನ ಮರಣ

ವೃತ್ತಾಂತವನ್ನು ಕೇಳಿ ಶ್ರೀರಾಮಲಕ್ಷ್ಮಣರು ಪಿತೃಕಾರ್ಯವನ್ನು ಮುಗಿಸಿದರು. ರಾತ್ರಿ ಕಳೆಯಿತು. ಮಾರನೆಯ ದಿನ ಪ್ರಾತಃಕೃತ್ಯವನ್ನು ಮುಗಿಸಿ ಎಲ್ಲರೂ ಪರ್ಣಶಾಲೆಯ ಎದುರಿಗೆ ಬಂದು ಕುಳಿತರು. ವಸಿಷ್ಠಾದಿ ಋಷಿಗಳೂ ಮಂತ್ರಿಗಳೂ ಸೇರಿದ್ದಾರೆ. ಪೌರಜನಪದರೂ ಬಂದಿದ್ದಾರೆ. ಕೌಸಲ್ಯೆ ಸುಮಿತ್ರೆ ಕೈಕೇಯಿಯರೂ ಇದ್ದಾರೆ. ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ಆಮೇಲೆ ಭರತನು ಆರಂಭಿಸಿದ–

ಸಾಂತ್ವಿತಾ ಮಾಮಿಕಾ ಮಾತಾ ದತ್ತಂ ರಾಜ್ಯಮಿದಂ ಮಮ ।
ತದ್ದದಾಮಿ ತವೈವಾಹಂ ಭುಂಕ್ಷ್ವ ರಾಜ್ಯಮಕಂಟಕಮ್ ॥

"ಅಣ್ಣಾ, ನನ್ನ ತಾಯಿಯನ್ನು ಸಂತೈಸಿದ್ದಾಯಿತು. ನನಗೆ ಕೊಟ್ಟ ರಾಜ್ಯವನ್ನು ನಿನಗೇ ಅರ್ಪಿಸುತ್ತೇನೆ. ಯಾವ ಆತಂಕವೂ ಇಲ್ಲದೆ ರಾಜ್ಯವಾಳು" ಎಂದನು. 'ಸಾಂತ್ವಿತಾ ಮಾಮಿಕಾ ಮಾತಾ' ಎಂಬುದು ಇಲ್ಲಿ ಮುಖ್ಯವಾದದ್ದು. ಸಂತೈಸುವುದಕ್ಕೆ ಅವಳಿಗಾಗಿದ್ದ ಕಷ್ಟವೇನು? ಯಾರು ಸಂತೈಸಿದವರು? "ತಾನು ಮಾಡಿದ ಘೋರಕೃತ್ಯದ ಪರಿಣಾಮವೇನೆಂಬುದು ಈಗ ಅವಳಿಗೆ ಅರ್ಥವಾಗಿದೆ. ತಾನು ವಿಧವೆಯಾಗಿ ಉಳಿದವರನ್ನೂ ವಿಧವೆಯರನ್ನಾಗಿ ಮಾಡಿದಳು. ತನ್ನ ಆಸೆಯೂ ಫಲಿಸಲಿಲ್ಲ. ಭರತನು ರಾಜ್ಯವನ್ನು ನಿರಾಕರಿಸಿದ. ಎಲ್ಲರೂ ತನ್ನನ್ನು ಬಯ್ಯುತ್ತಿದ್ದಾರೆ. ಮಾಡಬಾರದ ಮಂಗಾಟವನ್ನು ಮಾಡಿದೆನೆಂದು ಪಶ್ಚಾತ್ತಾಪದಿಂದ ಕುಸಿದು ಹೋಗಿದ್ದಾಳೆ. ಅವಳ ರಾಗದ್ವೇಷ ಕೋಪತಾಪಗಳೆಲ್ಲವೂ ಪಶ್ಚಾತ್ತಾಪದಿಂದ ಸುಟ್ಟುಹೋಗಿವೆ. ಇದಕ್ಕೆ ಸಾಕ್ಷಿಯಾಗಿ ಕೈಕೇಯಿ ಸ್ವತಃ ಇಲ್ಲಿಗೆ ಬಂದಿದ್ದಾಳೆ. ನೀನು ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಬೇಕೆಂದು ಅವಳ ಹಾರೈಕೆಯಾಗಿದೆ. ಸ್ವತಃ ಮಾತಾಡಲು ನಾಲಿಗೆಯಿಲ್ಲದೆ ತೆಪ್ಪಗಿದ್ದಾಳೆ" ಎಂದು ಅಭಿಪ್ರಾಯ. "ಅವಳ ಇಚ್ಛೆಯಂತೆ ರಾಜ್ಯವು ನನಗೆ ಸಂದಿತು. ತಂದೆ ಕೊಟ್ಟ ಮಾತೂ ನಡೆಯಿತು. ನನಗೆ ಸೇರಿದ ರಾಜ್ಯವನ್ನು ನಿನಗೆ ಕೊಡುತ್ತಿದ್ದೇನೆ. ಇದಕ್ಕೆ ಯಾರು ಅಡ್ಡಿಪಡಿಸಿಯಾರು?" ಎಂಬುದು "ತದ್ದದಾಮಿ ಪುನಸ್ತುಭ್ಯಂ" ಎಂಬುದರ ಅಭಿಪ್ರಾಯ.

ಶ್ರೀರಾಮನನ್ನು ಅಯೋಧ್ಯೆಗೆ ಹಿಂದಿರುಗಿಸಲು ಭರತನು ಇನ್ನಿಲ್ಲದ ಪ್ರಯತ್ನ ಮಾಡುತ್ತಾನೆ. ನಯವಿನಯಗಳಿಂದ ಬೇಡಿಕೊಳ್ಳುತ್ತಾನೆ. ವಾಕ್ಚಾತುರ್ಯವನ್ನು ಮೆರೆಸಿ ಯುಕ್ತಿಯಿಂದ ಅಣ್ಣನನ್ನೊಪ್ಪಿಸಲು ಹೆಣಗುತ್ತಾನೆ. "'ರಾಜ್ಯವನ್ನು ನಿರ್ವಹಿಸುವ ಸಾಮರ್ಥ್ಯ ನನಗಿಲ್ಲ. ನೀನೊಬ್ಬನೇ ಸಮರ್ಥ.

ನೀನು ರಾಜ್ಯವನ್ನು ವಹಿಸಿಕೊಳ್ಳದಿದ್ದರೆ ರಾಜ್ಯವು ಅಪಾಯಕ್ಕೀಡಾಗುತ್ತದೆ. ನೀನೇ ರಾಜನಾಗಬೇಕೆಂದು ನಮ್ಮ ತಂದೆ ಹೃದಯಪೂರ್ವಕನಾಗಿ ಹಾರೈಸಿದ್ದನು. ನಿನಗಾಗಿ ಪ್ರಾಣವನ್ನೇ ಅರ್ಪಿಸಿದ್ದಾನೆ. ಅವನ ಇಚ್ಛೆಯನ್ನು ನಡೆಸುವುದು ನಿನ್ನ ಕರ್ತವ್ಯ" – ಎಂದು ನೀತಿಯನ್ನು ಹೇಳುತ್ತಾನೆ. ಶ್ರೀರಾಮನದು ಒಂದೇ ನಿಶ್ಚಯ: "ತಂದೆಯ ಮಾತಿನಂತೆ, ತಾಯಿಯ (ಕೈಕೇಯಿಯ) ಮಾತಿನಂತೆ ನಾನು ಅರಣ್ಯಕ್ಕೆ ಬಂದಿದ್ದೇನೆ. ಹದಿನಾಲ್ಕುವರ್ಷ ಕಾಡಿನಲ್ಲಿರುತ್ತೇನೆಂದು ಮಾತುಕೊಟ್ಟಿದ್ದೇನೆ. ನನ್ನ ಪ್ರತಿಜ್ಞೆಯನ್ನು ನಡೆಸಬೇಕು. ಅಲ್ಲದೆ ನಮ್ಮ ತಂದೆಯು ಕೈಕೇಯಿಗೆ ಅವಳು ಕೇಳುವ ವರವನ್ನು ಸಲ್ಲಿಸುತ್ತೇನೆಂದು ಪ್ರತಿಜ್ಞೆಮಾಡಿದ್ದಾನೆ. ನಮ್ಮ ತಂದೆ ಸತ್ಯಸಂಧನೆಂಬ ಕೀರ್ತಿಯನ್ನುಳಿಸುವುದು ನನ್ನ ಕರ್ತವ್ಯವೂ ಹೌದು. ನಿನ್ನ ಕರ್ತವ್ಯವೂ ಹೌದು. ಆದ್ದರಿಂದ ನಾನೀಗ ಕಾಡಿನಿಂದ ಅಯೋಧ್ಯೆಗೆ ಹಿಂದಿರುಗುವುದು ಎಂದಿಗೂ ಆಗದು. **ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾಭವಿಷ್ಯತಿ** = ನನ್ನ ತಂದೆಯೆದುರು ಏನು ಪ್ರತಿಜ್ಞೆಮಾಡಿದ್ದೇನೋ ಅದು ಎಂದಿಗೂ ಸುಳ್ಳಾಗದು.

## ಭರತನ ಸತ್ಯಾಗ್ರಹ

ಈಗ ಭರತನೇನು ಮಾಡಬೇಕು? ಅವನ ಮನಸ್ಸಿಗೆ ಪರಮದುಃಖವಾಯಿತು. ಇನ್ನೊಂದು ದಾರಿ ಅವನಿಗೆ ಹೊಳೆಯಿತು. ಶ್ರೀರಾಮನೆದುರಿಗೆ ದರ್ಭೆಗಳನ್ನು ಹರಡಿ "ನನ್ನ ಪ್ರಾರ್ಥನೆಯನ್ನು ಮನ್ನಿಸಿ ಅಣ್ಣನು ಸಂಪ್ರಸನ್ನನಾಗುವವರೆಗೆ ನಿರಾಹಾರನಾಗಿ ಇಲ್ಲಿ ಮಲಗುತ್ತಿದ್ದೇನೆ" ಎಂದು ನುಡಿದು ಮಲಗಿಬಿಟ್ಟನು. ಸುತ್ತಲೂ ಇದ್ದ ಪೌರರನ್ನು ನೋಡಿ "ನೀವೇಕೆ ಶ್ರೀರಾಮನಿಗೆ ರಾಜನಾಗಬೇಕೆಂದು ಹೇಳುವುದಿಲ್ಲ?" ಎಂದು ಕೇಳಿದನು. ಅವರು "ಶ್ರೀರಾಮನನ್ನು ನಾವು ಬಲ್ಲೆವು. ಅವನು ಹೇಳುವುದೂ ಸರಿಯಾಗಿಯೇ ಇದೆ. ಅವನಿಗೆ ನಾವು ಏನು ಹೇಳೋಣ?" ಎಂದರು. ಆಗ ಶ್ರೀರಾಮನಿಗೆ ಇನ್ನೂ ಬಲಬಂದಿತು. "ಅಪ್ಪಾ–ಭರತ, ಇವರು ಹೇಳುವುದನ್ನು ಕೇಳಿದೆಯಾ? ನಾನು ಯಾವ ತಪ್ಪುಮಾಡಿದೆನೆಂದು ಉಪವಾಸ ಸತ್ಯಾಗ್ರಹವನ್ನಾರಂಭಿಸಿದ್ದೀಯೆ? ಏಳು ಏಳು! ಈ ಸತ್ಯಾಗ್ರಹ ಕ್ಷತ್ರಿಯರಿಗೆ ಉಚಿತವಾದ್ದಲ್ಲ. ಬ್ರಾಹ್ಮಣರು ಮಾತ್ರ ಹೀಗೆ ಮಾಡುವುದುಂಟು! ಎದ್ದು ಆಚಮನಮಾಡಿ ನನ್ನನ್ನು ಸ್ಪರ್ಶಿಸು" ಎಂದನು. ದುಡುಕಿ ಯಾರಾದರೂ ಶಪಥಮಾಡಿದರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಪದ್ಧತಿ ಹೀಗಿತ್ತೆಂದು ತೋರುತ್ತದೆ.

ನಿರ್ವಾಹವಿಲ್ಲದೆ ಭರತನು ಎದ್ದು ಅಣ್ಣನು ಹೇಳಿದಂತೆ ಮಾಡುತ್ತಾನೆ.

"ಅಣ್ಣ, ತಂದೆಯ ಮಾತಿನಂತೆ ವನವಾಸಕ್ಕೆ ಬಂದಿದ್ದೀಯಲ್ಲವೆ? ಆತನ ಮಾತನ್ನು ನಡೆಸಬೇಕಲ್ಲವೆ? ನಿನಗೆ ಬದಲಾಗಿ ನಾನೇ ಹದಿನಾಲ್ಕು ವರ್ಷ ಕಾಡಿನಲ್ಲಿರುತ್ತೇನೆ!" ಎನ್ನುತ್ತಾನೆ. ಶ್ರೀರಾಮನಿಗೆ ಆಶ್ಚರ್ಯವಾಗುತ್ತದೆ. "ಭರತ, ಇನ್ನೊಬ್ಬರಿಂದ ವನವಾಸ ಮಾಡಿಸುವುದು ಜುಗುಪ್ಸಿತವಾದ ಕಾರ್ಯ. ನೆವಹೂಡಿ ಇನ್ನೊಬ್ಬರಿಂದ ಧರ್ಮಕಾರ್ಯವನ್ನು ಮಾಡಿಸಬಾರದು. ತಂದೆಯ ಆಜ್ಞೆಯನ್ನು ಉಲ್ಲಂಘಿಸುವುದು ನನಗೂ ಸರಿಯಲ್ಲ, ನಿನಗೂ ಸರಿಯಲ್ಲ. ನೀನು ಕೇಳುವುದರಲ್ಲಿ ಒಂದು ವಿಷಯಕ್ಕೆ ಸಂಮತಿಸುತ್ತೇನೆ. ಹದಿನಾಲ್ಕು ವರ್ಷ ವನವಾಸಮಾಡಿ ಬಂದು ಅಯೋಧ್ಯೆಯಲ್ಲಿ ರಾಜ್ಯವನ್ನು ವಹಿಸಿ ಕೊಳ್ಳುತ್ತೇನೆ" ಎಂದುಬಿಡುತ್ತಾನೆ. ಅಭೂತಪೂರ್ವವಾಗಿ ನಡೆದ ಈ ಅಣ್ಣತಮ್ಮಂದಿರ ತ್ಯಾಗಬುದ್ಧಿಯನ್ನು ವಾತ್ಸಲ್ಯವನ್ನು ನೋಡಿ ಋಷಿಗಳೂ ಪೌರಜನರೂ ರೋಮಾಂಚಿತರಾಗಿಬಿಡುತ್ತಾರೆ. ಋಷಿಗಳು ಭರತನನ್ನು ನೋಡಿ "ಭರತ, ನೀನು ಮಹಾಪ್ರಾಜ್ಞ, ಧರ್ಮಶೀಲ. ನಿನ್ನ ಕೀರ್ತಿಯು ಶಾಶ್ವತವಾಗಿ ಉಳಿಯುವುದು. ಶ್ರೀರಾಮನ ಮಾತಿನಂತೆ ವರ್ತಿಸು" ಎನ್ನುತ್ತಾರೆ.

## ಪಾದುಕಾಗ್ರಹಣ

ಋಷಿಗಳ ಮಾತನ್ನು ಕೇಳಿದಾಗ ಭರತನ ಚೈತನ್ಯವೇ ಉಡುಗಿ ಹೋಗುತ್ತದೆ. ಮುಂದೇನು ಮಾಡಬೇಕೆಂದು ದಿಙ್ಮೂಢನಾಗುತ್ತಾನೆ. ಎಷ್ಟಾದರೂ ಅವನು ಧೀಮಂತ; ಮಹಾಪ್ರಾಜ್ಞ. ಹೀಗೆ ಆಲೋಚಿಸುತ್ತಾನೆ. "ನಾನು ಕಾಡಿನಲ್ಲೇ ಉಳಿದರೆ ರಾಜ್ಯವು ಅನಾಯಕವಾಗುತ್ತದೆ. ನನ್ನ ಎರಡು ಪ್ರಾರ್ಥನೆಗಳಲ್ಲಿ ಒಂದನ್ನು ಅಣ್ಣನು ಕಾಲಾಂತರದಲ್ಲಾದರೂ ನಡೆಸುತ್ತೇನೆಂದು ಮಾತುಕೊಟ್ಟಿದ್ದಾನೆ. ಅಲ್ಲಿಯವರೆಗೆ ಅಣ್ಣನ ಹೆಸರಿನಲ್ಲಿ ರಾಜ್ಯಭಾರವನ್ನು ನಾನು ನಡೆಸಬೇಕಾದದ್ದು ಅನಿವಾರ್ಯವಾಯಿತು. ರಾಜ್ಯದ ಕರ್ತವ್ಯವನ್ನು ನಡೆಸುತ್ತೇನೆ. ವನವಾಸದ ಈ ಕಷ್ಟವನ್ನು ಅನುಭವಿಸುತ್ತೇನೆ" ಎಂದು ಮನಸ್ಸಿನಲ್ಲಿ ಗುಣಿಸಿಕೊಂಡು, ಶ್ರೀರಾಮನನ್ನು ಕರೆದೊಯ್ಯುವುದಕ್ಕಾಗಿ ತಂದಿದ್ದ ಎರಡು ಪಾದುಕೆಗಳನ್ನು ಆತನ ಮುಂದಿಟ್ಟು "ಅಣ್ಣ, ಈ ಪಾದುಕೆಗಳ ಮೇಲೆ ನಿಂತು ಇವನ್ನು ನನಗೆ ಅನುಗ್ರಹಿಸು" ಎಂದು ಬೇಡಿಕೊಳ್ಳುತ್ತಾನೆ. ಆತನ ಆಶಯ ಶ್ರೀರಾಮನಿಗೆ ತಿಳಿದುಹೋಯಿತು. ಹಾಗೆಯೇ ಮಾಡುತ್ತಾನೆ. ಭರತನು "ಅಣ್ಣ, ಈ ಪಾದುಕೆಗಳು ರಾಜ್ಯವನ್ನು ಪಾಲಿಸುತ್ತವೆ. ನಾನು ಇವುಗಳ ಭೃತ್ಯನಾಗಿ ನಡೆದುಕೊಳ್ಳುತ್ತೇನೆ. ಹದಿನಾಲ್ಕು ವರ್ಷಗಳವರೆಗೆ ನಾನು

ಜಟಾಧಾರಿಯಾಗಿ ಫಲಮೂಲಗಳನ್ನು ತಿನ್ನುತ್ತ ನಿನಗಾಗಿ ಕಾದಿರುತ್ತೇನೆ. ನಗರದಲ್ಲಿಯೂ ನಾನು ವಾಸಮಾಡುವುದಿಲ್ಲ. ಹದಿನಾಲ್ಕು ವರ್ಷಗಳ ಮೇಲೆ ನಿನ್ನನ್ನು ನಾನು ಕಾಣದೇಹೋದರೆ ಬೆಂಕಿಯಲ್ಲಿ ಬಿದ್ದು ಪ್ರಾಣಬಿಡುತ್ತೇನೆ'' ಎನ್ನುತ್ತಾನೆ. ಶ್ರೀರಾಮನು ಭರತನನ್ನು ಅಪ್ಪಿಕೊಂಡು ನಾನು ಮತ್ತೆ ಬರುತ್ತೇನೆಂದು ತಿಳಿಸಿ "ಭರತ, ಒಂದು ಮಾತನ್ನು ಹೇಳಬೇಕಾದ್ದಿದೆ. ತಾಯಿಯಾದ ಕೈಕೇಯಿಯ ಯೋಗಕ್ಷೇಮಗಳನ್ನು ಸರಿಯಾಗಿ ನೋಡಿಕೊ. ಅವಳ ಮೇಲೆ ಎಂದಿಗೂ ಮುನಿದುಕೊಳ್ಳಬೇಡ. ಕೆಟ್ಟದಾಗಿ ಅವಳನ್ನು ಕಾಣಬೇಡ. ನನ್ನ ಆಣೆ, ಸೀತೆಯ ಆಣೆ!'' ಎನ್ನುತ್ತಾನೆ. ಆಮೇಲೆ ಶ್ರೀರಾಮನು ಗುರುಹಿರಿಯರಿಗೂ ತಾಯಂದಿರಿಗೂ ನಮಸ್ಕರಿಸಿ ಕಣ್ಣೀರು ತುಂಬಿಕೊಂಡು ಪರ್ಣಶಾಲೆಯೊಳಗೆ ಹೋಗಿಬಿಡುತ್ತಾನೆ.

## ಪಾದುಕಾಭಿಷೇಕ

ಭರತನು ಶ್ರೀರಾಮನ ಪಾದುಕೆಗಳನ್ನು ತಲೆಯ ಮೇಲಿಟ್ಟುಕೊಂಡು ಹಿಂದಿರುಗಿದನು. ಅಯೋಧ್ಯೆಗೆ ಬಂದು ನಂದಿಗ್ರಾಮಕ್ಕೆ ತೆರಳಿದನು. ವಸಿಷ್ಠಾದಿ ಮುನಿಗಳನ್ನುದ್ದೇಶಿಸಿ "ಅಣ್ಣನು ಈ ಪಾದುಕೆಗಳನ್ನು ಅನುಗ್ರಹಿಸಿದ್ದಾನೆ. ಸುವರ್ಣಭೂಷಿತವಾದ ಈ ಪಾದುಕೆಗಳು ರಾಜ್ಯಭಾರವನ್ನು ನಿರ್ವಹಿಸ ಬಲ್ಲವು. ಶ್ರೀರಾಮನು ವಿಶ್ವಾಸದಿಂದ ನ್ಯಾಸವಾಗಿ ಇವನ್ನು ನನ್ನ ಬಳಿ ಇತ್ತಿದ್ದಾನೆ. ಅವನು ಬಂದಮೇಲೆ ಇವನ್ನು ಆತನ ಪಾದಗಳಿಗೆ ತೊಡಿಸಿ ಧನ್ಯನಾಗುತ್ತೇನೆ. ನಾನು ಜಟಾಧಾರಿಯಾಗಿ ಕಂದಫಲಗಳನ್ನು ತಿನ್ನುತ್ತ ಆತನ ಪ್ರತೀಕ್ಷೆಯಲ್ಲಿರುತ್ತೇನೆ'' ಎಂದು ನುಡಿದು ಛತ್ರಚಾಮರಗಳನ್ನು ಹಿಡಿಸಿ ಪಾದುಕೆಗಳಿಗೆ ಅಭಿಷೇಕಮಾಡುತ್ತಾನೆ.

ಪಾದುಕೆಗಳು ಶ್ರೀರಾಮನ ಪ್ರತೀಕ. ಭರತನು ಭೃತ್ಯನಂತೆ ಕಾರ್ಯನಿರ್ವಾಹಕ.

**ಯದಾ ಹಿ ಯತ್ ಕಾರ್ಯಮುಪೈತಿ ಕಿಂಚಿತ್**
**ಉಪಾಯನಂ ಚೋಪಹೃತಂ ಮಹಾರ್ಹಮ್ ।**
**ಸ ಪಾದುಕಾಭ್ಯಾಂ ಪ್ರಥಮಂ ನಿವೇದ್ಯ**
**ಚಕಾರ ಪಶ್ಚಾದ್ ಭರತೋ ಯಥಾವತ್ ॥**

ಯಾವುದಾದರೂ ವಿಶೇಷವಾದ ರಾಜಕಾರ್ಯವು ಪ್ರಾಪ್ತವಾದರೆ, ಭರತನು

ಅದನ್ನೂ ಪಾದುಕೆಗಳಿಗೆ ಅರಿಕೆಮಾಡುತ್ತಿದ್ದ. ಬೆಲೆಬಾಳುವ ಕಪ್ಪಕಾಣಿಕೆ ಬಂದರೆ ಅದನ್ನು ಪಾದುಕೆಗಳೆದುರಿಗಿಟ್ಟು ನಿವೇದಿಸುತ್ತಿದ್ದ. ಹೀಗೆ ಭರತನು ರಾಜ್ಯಭಾರವನ್ನು ನಡೆಸಿದ.

## ಪ್ರೀತಿಯು ಪ್ರೀತಿಯನ್ನು ಗಳಿಸುತ್ತದೆ

ದಂಡಕಾರಣ್ಯದಲ್ಲಿದ್ದಾಗ ಒಂದು ದಿನ ನಸುಕಿನಲ್ಲಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಸ್ನಾನಕ್ಕಾಗಿ ಗೋದಾವರೀ ನದಿಗೆ ಹೋಗುತ್ತಿದ್ದಾನೆ. ಲಕ್ಷ್ಮಣನು "ಅಣ್ಣ, ಭರತನೂ ಈ ಸಮಯದಲ್ಲಿ ತಣ್ಣೀರಿನಲ್ಲಿ ಸ್ನಾನಮಾಡಲು ಸರಯೂ ನದಿಗೆ ಹೋಗುತ್ತಿರಬಹುದು! ಎಷ್ಟು ಸಾಧುಸ್ವಭಾವದವನು! ಅವನು ಅಷ್ಟು ಗುಣಶಾಲಿ. ತಂದೆ ದಶರಥಮಹಾರಾಜನು ಧರ್ಮಾತ್ಮ. ನಡುವೆ ಕೈಕೇಯಿಯು ಹೀಗೆ ಕ್ರೂರ ಸ್ವಭಾವದವಳು ಹೇಗಾಗಿರಬಹುದು!" ಎನ್ನುತ್ತಾನೆ. ಅದಕ್ಕೆ ಶ್ರೀರಾಮನು ಹೇಳುತ್ತಾನೆ–"ಲಕ್ಷ್ಮಣ, ಕೈಕೇಯಿಯೂ ನಮಗೆ ತಾಯಿ. ಅವಳನ್ನು ನಿಂದಿಸಬೇಡ. ಮಾತಾಡಬೇಕೆಂದರೆ–

**ತಾಮೇವೇಕ್ಷ್ವಾಕುನಾಥಸ್ಯ ಭರತಸ್ಯ ಕಥಾಂ ಕುರು ॥**

ಇಕ್ಷ್ವಾಕುಕುಲವರ್ಧನನಾದ ಭರತನ ವಿಷಯವನ್ನೇ ಹೇಳುತ್ತಿರು. ಅವನ ವಿನಯ, ನಡತೆ, ಆಹ್ಲಾದಕರವಾದ ನುಡಿ–ಇವೇ ನನ್ನ ಸ್ಮರಣೆಗೆ ಬರುತ್ತವೆ. ಯಾವಾಗ ಮತ್ತೆ ಭರತನನ್ನು ಕಂಡೇನೋ ಎನ್ನಿಸಿದೆ".

ಒಂದು ಸಲ ಸುಗ್ರೀವನೊಡನೆ ಮಾತಾಡುವ ಸಂದರ್ಭದಲ್ಲಿ ಶ್ರೀರಾಮನು ಹೇಳುವ ಮಾತಿದು–

**ನ ಸರ್ವೇ ಭ್ರಾತರಸ್ತಾತ ಭವಂತಿ ಭರತೋಪಮಾಃ ॥**

"ಅಯ್ಯಾ ಸುಗ್ರೀವ, ಎಲ್ಲ ಸಹೋದರರೂ ಭರತನ ಹಾಗೆ ಇರುವುದಿಲ್ಲ!"

## ಭರತದರ್ಶನ ಮೊದಲು

ರಾವಣನ ಸಂಹಾರವಾಗಿ ವಿಭೀಷಣನಿಗೆ ಪಟ್ಟಾಭಿಷೇಕವಾಯಿತು. ವಿಭೀಷಣನು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತ "ಶ್ರೀರಾಮ, ಈಗ ಅಭ್ಯಂಜನ ಸ್ನಾನಮಾಡು. ದಿವ್ಯವಸ್ತ್ರಾಭರಣಗಳು ಸಿದ್ಧವಾಗಿವೆ. ಸ್ನಾನಮಾಡಿಸ ತಕ್ಕವರು ಸಜ್ಜಾಗಿದ್ದಾರೆ. ಇಷ್ಟನ್ನಾದರೂ ಸ್ವೀಕರಿಸಿ ನನ್ನನ್ನು ಅನುಗ್ರಹಿಸು"

ಎನ್ನುತ್ತಾನೆ. ಅದಕ್ಕೆ ಶ್ರೀರಾಮನು ಹೇಳಿದ್ದೇನು? "ವಿಭೀಷಣ, ಸುಗ್ರೀವನೇ ಮೊದಲಾದ ಕಪಿನಾಯಕರು ಅದನ್ನೆಲ್ಲ ಸ್ವೀಕರಿಸಲಿ. ನನಗೆ ಬೇಕಾಗಿಲ್ಲ. ನಾನು ಮೊದಲು ಭರತನನ್ನು ಕಾಣಬೇಕು." ಆ ಧರ್ಮಾತ್ಮನು ನನಗಾಗಿ ತೊಳಲುತ್ತಿದ್ದಾನೆ.

**ನ ಮೇ ಸ್ನಾನಂ ಬಹುಮತಂ ವಸ್ತ್ರಾಣ್ಯಾಭರಣಾನಿ ಚ ।**
**ತಂ ವಿನಾ ಕೈಕಯೀಪುತ್ರಂ ಭರತಂ ಧರ್ಮವತ್ಸಲಮ್ ॥**

ಆದ್ದರಿಂದ,

**ಇತ ಏವ ಪಥಾ ಕ್ಷಿಪ್ರಂ ಪ್ರತಿಗಚ್ಛಾಮಿ ತಾಂ ಪುರೀಂ ॥**

ಈಗಲೇ ತ್ವರೆಯಿಂದ ನಾನು ಅಯೋಧ್ಯೆಗೆ ಹೊರಟುಬಿಡುತ್ತೇನೆ"

ಆಗ ವಿಭೀಷಣನು "ಅದಕ್ಕಾಗಿ ಅವಸರ ಪಡಬೇಕಾಗಿಲ್ಲ. ಪುಷ್ಪಕವಿಮಾನವಿದೆ. ಶೀಘ್ರವಾಗಿ ಹೋಗಬಹುದು. ನನ್ನ ಆತಿಥ್ಯವನ್ನು ಸ್ವೀಕರಿಸು" ಎನ್ನುತ್ತಾನೆ. ಶ್ರೀರಾಮನು "ಓ! ಹಾಗಿದ್ದರೆ ವಿಮಾನವನ್ನು ತರಿಸು. ಈಗಲೇ ಹೊರಡುತ್ತೇನೆ. ನನಗೆ ಯಾವ ಆತಿಥ್ಯವೂ ಬೇಡ" ಎಂದುಬಿಡುತ್ತಾನೆ.

## ಪ್ರಿಯಾಖ್ಯಾನ

ಶ್ರೀರಾಮನ ಆದೇಶದಂತೆ ಹನುಮಂತನು ಆತನ ಆಗಮನವನ್ನು ಭರತನಿಗೆ ತಿಳಿಸುವುದಕ್ಕಾಗಿ ನಂದಿಗ್ರಾಮಕ್ಕೆ ಬಂದ. ಹನುಮಂತನು ಮನುಷ್ಯ ವೇಷದಲ್ಲಿ ಬಂದಿದ್ದ. ಭರತನು ಜಟಾಧಾರಿಯಾಗಿ ಕೃಶನಾಗಿ ತಪಸ್ವಿಯಂತೆ ಕಾಣುತ್ತಿದ್ದ. ಆದರೆ ಬ್ರಹ್ಮರ್ಷಿಯೋ ಎಂಬಂತೆ ತೇಜಸ್ವಿಯಾಗಿದ್ದ. ಶ್ರೀರಾಮನು ಬರುತ್ತಿದ್ದಾನೆಂಬ ವಾರ್ತೆಯನ್ನು ಕೇಳಿದೊಡನೆ ಭರತನು ಪರಮಾನಂದದಲ್ಲಿ ಮುಳುಗಿಹೋದ. ಆನಂದಾತಿರೇಕದಿಂದ ಪ್ರಜ್ಞೆಯೇ ತಪ್ಪಿದಂತಾಯಿತು.

**ಪಪಾತ ಸಹಸಾ ಹೃಷ್ಟೋ ಹರ್ಷಾನ್ಮೋಹಂ ಜಗಾಮ ಹ ॥**

ಅನಂತರ ಸುಧಾರಿಸಿಕೊಂಡು ಹನುಮಂತನನ್ನು ನೋಡಿ "ಸೌಮ್ಯ, ನೀನು ಯಾರು? ಇಷ್ಟು ಆನಂದದ ಸುದ್ದಿಯನ್ನು ತಂದಿದ್ದೀಯೆ. ನಿನಗೆ ಒಂದು ಲಕ್ಷ ಗೋವುಗಳನ್ನೂ ನೂರು ಗ್ರಾಮಗಳನ್ನೂ ಕೊಡುತ್ತೇನೆ. ಸುಂದರಿಯರಾದ ಹದಿನಾರು ಮಂದಿ ಹುಡುಗಿಯರನ್ನು ಕೊಟ್ಟು ನಿನಗೆ

ಮದುವೆ ಮಾಡಿಸುತ್ತೇನೆ! **ಸಕುಂಡಲಾಃ ಶುಭಾಚಾರಾ ಭಾರ್ಯಾಃ ಕನ್ಯಾಶ್ಚ ಷೋಡಶ** ಎಂದು ಹೇಳಿದ. ಭರತನಿಗಾದ ಆನಂದಾತಿರೇಕದ ಪ್ರತಿಧ್ವನಿ ಇದು.

## ಉಪಸಂಹಾರ

ಭರತನ ತ್ಯಾಗ, ಭ್ರಾತೃವಾತ್ಸಲ್ಯಗಳು ಲೋಕೋತ್ತರವಾದವು. ಅವುಗಳಿಗೆ ಅರ್ಹವಾದ ಧೀರೋದಾತ್ತ ಗುಣಚಾರಿತ್ರಗಳೂ ಶ್ರೀರಾಮನಲ್ಲಿದ್ದವು. ಇದಕ್ಕೆ ಸದೃಶವಾದ ಇನ್ನೊಂದು ಚರಿತೆ ಜಗತ್ತಿನ ಸಾಹಿತ್ಯದಲ್ಲಿ ಇರಲಿಕ್ಕಿಲ್ಲ. ನಮ್ಮ ಇತಿಹಾಸಪುರಾಣಗಳಲ್ಲಂತೂ ಇಲ್ಲ. ಭ್ರಾತೃವಾತ್ಸಲ್ಯಕ್ಕೂ ಗಂಡಹೆಂಡಿರ ಪ್ರೇಮಕ್ಕೂ ದೊಡ್ಡ ಅಂತರವಿದೆ. ಗಂಡಹೆಂಡಿರ ಪ್ರೇಮವು ಹೃದಯದಲ್ಲಿ ಗೂಢವಾಗಿ ನೆಲೆಸಿರುವ ಸ್ವಾರ್ಥಸುಖದಿಂದ ಪ್ರಚೋದಿತವಾದದ್ದು. ಭ್ರಾತೃವಾತ್ಸಲ್ಯದಲ್ಲಾದರೋ ಸ್ವಾರ್ಥದ ಲವಲೇಶವೂ ಇಲ್ಲ. ಸ್ವಾರ್ಥವನ್ನು ತುಳಿದು ಭ್ರಾತೃವಾತ್ಸಲ್ಯ ಬೆಳೆಯುತ್ತದೆ.

ಡಾ॥ ಡಿ. ವಿ. ಜಿ. ಯವರ ಸೂಕ್ತಿಯನ್ನಿಲ್ಲಿ ಸ್ಮರಿಸಬಹುದು.

**ಅರಸಡವಿಗೈದಿದೊಡಮ್, ಅವನಿತ್ತ ಪಾದುಕೆಗ**
**ಳೊರೆಯದೊಡಮೇನನುಂ, ತಾಂ ವರದಿಂತೊರೆದು ।**
**ದೊರೆತನದ ಭಾರವನು ಹೊತ್ತು ದೊರೆಯಾಗದಾ**
**ಭರತನವೊಲಿರು ನೀನು-ಮಂಕುತಿಮ್ಮ ॥**
**ಕಡುಯೋಗಿ ಭರತನಲ? - ಮಂಕುತಿಮ್ಮ ॥**

★

# ೩

# ಹನುಮಂತ

'ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಮ್'

ಒಂದು ಪ್ರಾಚೀನ ಶ್ಲೋಕದಲ್ಲಿ ವಾಯುಸುತನಾದ ಹನುಮಂತನನ್ನು 'ರಾಮಾಯಣ ಮಹಾಮಾಲೆಯಲ್ಲಿರುವ ಒಂದು ರತ್ನ'ವೆಂದು ಹೊಗಳಿದ್ದಾರೆ. ಇದೊಂದು ಉಜ್ವಲವಾಗಿ ಬೆಳಗುವ ರತ್ನ. ಹನುಮಂತನು ಎಸಗಿದ ಕಾರ್ಯಗಳು ಅಸಾಧಾರಣವಾದವು. ಅವನು ಎಷ್ಟು ಪರಾಕ್ರಮಿಯೋ ಅಷ್ಟೇ ಸಾಹಸಿಕ. ಅವನ ಸಾಹಸದಂತೆ ಬುದ್ಧಿಶಕ್ತಿ. ಬುದ್ಧಿಶಕ್ತಿಗೆ ಅನುಗುಣವಾದ ವಾಕ್‌ಶಕ್ತಿ. ಹನುಮಂತನ ಕಾರ್ಯನಿಷ್ಠೆ, ಶ್ರದ್ಧೆಗಳು ಕಲಿಯಬೇಕಾದ ಮಹಾ ಗುಣಗಳು. ಶ್ರೀರಾಮನ ವಿಷಯದಲ್ಲಿ ಅವನಿಗೆ ಅನನ್ಯವಾದ ಭಕ್ತಿ ಇತ್ತು. ಸ್ವಾರ್ಥಲೇಶವೂ ಇಲ್ಲದ ಕರ್ಮನಿಷ್ಠೆ ಅವನದು. ಆತನೊಬ್ಬ ನಿಷ್ಕಾಮಕರ್ಮ ಯೋಗಿ–ಎಂದರೆ ಅತಿಶಯೋಕ್ತಿಯಲ್ಲ.

ರಾಮಲಕ್ಷ್ಮಣರು ಸೀತಾನ್ವೇಷಣೆಯಲ್ಲಿ ತೊಡಗಿ ಪಂಪಾತೀರಕ್ಕೆ ಬಂದಾಗ ನಮಗೆ ಹನುಮಂತನ ಪ್ರಥಮ ಪರಿಚಯವಾಗುತ್ತದೆ. ರಾಮಲಕ್ಷ್ಮಣರನ್ನು ವಾಲಿಯು ಕಳಿಸಿರಬೇಕೆಂದು ಸುಗ್ರೀವನು ಭೀತನಾಗಿದ್ದ. ಆತನಿಗೆ ಸಮಾಧಾನ ಹೇಳಿ ಇವರಿಬ್ಬರು ಯಾರೆಂಬುದನ್ನು ಸ್ವತಃ ತಿಳಿಯುವುದಕ್ಕಾಗಿ ಹನುಮಂತನು ವೇಷವನ್ನು ಮರೆಸಿಕೊಂಡು ಅವರಿಬ್ಬರ ಬಳಿಗೆ ಬರುತ್ತಾನೆ. **ಭಿಕ್ಷುರೂಪಂ ತತೋ ಭೇಜೇ ಶಠಬುದ್ಧಿತಯಾ ಕಪಿಃ** ಎಂದು ವಾಲ್ಮೀಕಿಮುನಿಗಳು ಹೇಳುತ್ತಾರೆ. ಭಿಕ್ಷುವೆಂದರೆ ಸಂನ್ಯಾಸಿ. ಬಹುಶಃ ಬ್ರಹ್ಮಚಾರಿಯೆಂದು ಅಭಿಪ್ರಾಯವಿರಬೇಕು. ಏಕೆಂದರೆ ಆ ವೇಷದಲ್ಲಿ ಬಂದ ಹನುಮಂತನು ರಾಮಲಕ್ಷ್ಮಣರಿಗೆ ವಿನಯದಿಂದ ನಮಸ್ಕರಿಸುತ್ತಾನೆ. **ವಿನೀತವದುಪಾಗಮ್ಯ ರಾಘವೌ ಪ್ರಣಿಪತ್ಯ ಚ.** ಅಲ್ಲದೆ **'ಸಂಪೂಜ್ಯ ವಿಧಿವದ್ವೀರೌ'** ಈ ಮಾತುಗಳು ಸಂನ್ಯಾಸಿಗೆ ಅನ್ವಯಿಸತಕ್ಕದಲ್ಲ. ಹತ್ತಿರಕ್ಕೆ ಬಂದು ರಾಮಲಕ್ಷ್ಮಣರನ್ನು ವೀಕ್ಷಿಸಿದಾಗ, ಅವರಿಬ್ಬರ ರೂಪಲಾವಣ್ಯ, ಮೈಕಟ್ಟು, ನಿಲವು, ಅಂಗಸೌಷ್ಠವ, ತೇಜಸ್ಸುಗಳನ್ನು ನೋಡಿ ಹನುಮಂತನು ಮುಗ್ಧನಾಗಿಬಿಡುತ್ತಾನೆ. ಹನ್ನೆರಡು ಶ್ಲೋಕಗಳಲ್ಲಿ ಅವರಿಬ್ಬರನ್ನು ಹನುಮಂತನು ವರ್ಣಿಸಿದ ಪ್ರಕಾರವೇ ಇದೆ. 'ನೀವು ಯಾರು?' ಎಂದು ಕೇಳಿದಾಗ ಅವರು

ಸುಮ್ಮನೆ ಇವನನ್ನು ನೋಡುತ್ತಿದ್ದರು. ಅವರ ಇಂಗಿತವನ್ನು ಗ್ರಹಿಸಿ ಹನುಮಂತನೇ ತಾನು ಯಾರೆಂಬುದನ್ನು ಮೊದಲು ಹೇಳುತ್ತಾನೆ. ರಾಮಲಕ್ಷ್ಮಣರ ದಿವ್ಯಾಕೃತಿಯನ್ನು ನೋಡಿದಮೇಲೆ 'ಇವರು ವಾಲಿಯ ಕಾರ್ಯಕ್ಕಾಗಿ ಬಂದವರಲ್ಲ' ಎಂದು ಅವನಿಗೆ ನಿಶ್ಚಯವಾಯಿತು. 'ಶಠಬುದ್ಧಿ'ಯನ್ನು ತ್ಯಜಿಸಿ ತಾನು ಸುಗ್ರೀವಸಚಿವನೆಂದು ತಿಳಿಸಿಬಿಡುತ್ತಾನೆ. ಆತನ ಮಾತಿನ ಶೈಲಿಯಿಂದ ಶ್ರೀರಾಮನು ಆಕರ್ಷಿತನಾಗುತ್ತಾನೆ. ಎಷ್ಟು ಸೊಗಸಾಗಿ ಮಾತಾಡುತ್ತಾನೆ ಇವನು! ತಮ್ಮನ ಕಡೆಗೆ ತಿರುಗಿ "ಲಕ್ಷ್ಮಣ, ಇವನೊಡನೆ ಮಾತನಾಡು.

**ನಾನೃಗ್ವೇದವಿನೀತಸ್ಯ ನಾಯಜುರ್ವೇದ ಧಾರಿಣಃ ।**
**ನಾ ಸಾಮವೇದವಿದುಷಃ ಶಕ್ಯಮೇವಂ ಪ್ರಭಾಷಿತುಮ್ ॥**

ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಅಭ್ಯಾಸಮಾಡದವನಿಗೆ ಈ ರೀತಿಯಲ್ಲಿ ಮಾತನಾಡಲು ಶಕ್ಯವಿಲ್ಲ". ಇಷ್ಟು ಮಾತಾಡಿದರೂ ಇವನ ಬಾಯಿಯಿಂದ ಒಂದು ಅಪಶಬ್ದವೂ ಬರಲಿಲ್ಲ. ಈತನು ವ್ಯಾಕರಣಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಮಾಡಿರಬೇಕು.

**ನೂನಂ ವ್ಯಾಕರಣಂ ಕೃತ್ಸ್ನಮನೇನ ಬಹುಧಾ ಶ್ರುತಂ ।**
**ಬಹು ವ್ಯಾಹರತಾನೇನ ನ ಕಿಂಚಿದಪಶಬ್ದಿತಮ್ ॥**

*ಕಿಷ್ಕಿ ೩-೨೯*

ಇಂತಹ ವಾಗ್ಮಿಯು ಯಾವಾತನ ಸಚಿವನಾಗಿರುತ್ತಾನೋ ಆತನ ಸಕಲ ಕಾರ್ಯಗಳೂ ತಡೆಯಿಲ್ಲದೆ ಸಿದ್ಧಿಸುತ್ತವೆ" ಎಂದು ಪ್ರಶಂಸೆಮಾಡಿದನು. ಹೀಗೆ ಮೊದಲನೆಯ ಭೇಟಿಯಲ್ಲಿಯೇ ಹನುಮಂತನು ಶ್ರೀರಾಮನ ಮೆಚ್ಚುಗೆಯನ್ನು ಗಳಿಸಿದ್ದಾನೆ.

ಆ ಕಾಲದಲ್ಲಿ ವೇದವೇದಾಂಗಗಳು ವಿದ್ಯಾಸ್ಥಾನಗಳೆನಿಸಿದ್ದವು. ಅವುಗಳಲ್ಲಿ ನಿಷ್ಣಾತನಾದವನು ನಿಜವಾದ ವಿದ್ವಾಂಸ. ಹನುಮಂತನಾಡಿದ ಮಾತುಗಳಲ್ಲಿ ವೇದಾಧ್ಯಯನದ ವಿಶಿಷ್ಟ ಸಂಕೇತಗಳೇನೂ ಇಲ್ಲ. ಅಲ್ಪಪ್ರಾಣ, ಶ-ಷ-ಸ ಮುಂತಾದ ಅಕ್ಷರಗಳ ಸ್ಫುಟವಾದ ಉಚ್ಚಾರಣೆ ವೇದಾಧ್ಯಯನದಿಂದ ಲಭ್ಯ. ಹನುಮಂತನು ವಿದ್ವಾಂಸನೆಂದಿಷ್ಟೇ ಅಭಿಪ್ರಾಯದಿಂದ ಶ್ರೀರಾಮನು ಈ ಮಾತುಗಳನ್ನಾಡಿರಬೇಕು.

ಹನುಮಂತನು ಯಾವ ಭಾಷೆಯಲ್ಲಿ ಮಾತಾಡಿದ? ಸಂಸ್ಕೃತದಲ್ಲಿಯೇ

ಮಾತಾಡಿರಬೇಕೆಂದು ನನ್ನ ಊಹೆ. ಕನ್ನಡ ಭಾಷೆಗೆ ವ್ಯಾಕರಣದೋಷ ಇಲ್ಲವಷ್ಟೆ! ಕಪಿಗಳಿಗೆ ಮಾತಾಡಲು ಬರುತ್ತಿತ್ತೆ? ಇಂತಹ ಅನೇಕ ಪ್ರಶ್ನೆಗಳನ್ನು ರಾಮಾಯಣದಲ್ಲಿ ಎತ್ತಬಹುದು. ಇದು ಕಾವ್ಯಪ್ರಪಂಚ. ಕಾವ್ಯದಲ್ಲಿ ಮರವು ಮಾತಾಡುತ್ತದೆ. ನದಿಯು ನಗುತ್ತದೆ. ಕಲ್ಲು ಅಳುತ್ತದೆ. '**ಅಪಿ ಗ್ರಾವಾ ರೋದಿತಿ**'. ಶ್ರೀರಾಮನಿಗೂ ಸುಗ್ರೀವನಿಗೂ ಸಖ್ಯವನ್ನೇರ್ಪಡಿಸಿ ಮುಂದಿನ ಕಥಾಘಟ್ಟಕ್ಕೆ ತಳಹದಿಯನ್ನು ಹನುಮಂತನು ಹಾಕಿದನು.

ವಾಕ್ ಎನ್ನುವುದು ದೇವದತ್ತವಾದ ಒಂದು ವರ. ಮನುಷ್ಯನಿಗೆ ಮಾತ್ರ ಇರುವ ಒಂದು ವಿಶಿಷ್ಟವಾದ ಶಕ್ತಿ ಇದು. ಇದನ್ನು ಹೇಗೆ ಬೆಳೆಸಿಕೊಳ್ಳಬೇಕು, ಹೇಗೆ ಬಳಸಬೇಕು – ಎಂಬುದು ಮಾತ್ರ ನಮಗೆ ಗೊತ್ತಿಲ್ಲ. ಶಬ್ದವನ್ನು ಮಹಾದೇವನೆಂದು ವೇದವು ಹೊಗಳಿದೆ. '**ಮಹಾದೇವೋ ಮರ್ತ್ಯಾಗ್ ಆವಿವೇಶ**'. '**ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು**' ಎಂದು ಗಾದೆ ಇದೆ. ಅತಿಸುಲಭವಾಗಿ ದೊರೆತಿದ್ದರಿಂದ ಮನುಷ್ಯನಿಗೆ ಭಾಷಾಶುದ್ಧಿಯಲ್ಲಿ ಅನಾದರ.

ಮುಂದೆ ಶ್ರೀರಾಮನ ಧೀರೋದಾತ್ತ ಗುಣಗಳಿಗೆ, ಅವನ ಶೌರ್ಯ ಪರಾಕ್ರಮಗಳಿಗೆ, ಅವನ ಧರ್ಮನಿಷ್ಠೆಗೆ ಹನುಮಂತನು ಸಂಪೂರ್ಣವಾಗಿ ವಶನಾಗಿಬಿಡುತ್ತಾನೆ. '**ದಾಸೋಽಹಂ ಕೋಸಲೇಂದ್ರಸ್ಯ**' ಎಂದು ತಾನೇ ತನ್ನನ್ನು ಘೋಷಿಸಿಕೊಳ್ಳುತ್ತಾನೆ. ಅವನು ಗುಣಕ್ರೀತನಾದ ದಾಸ. ಶ್ರೀರಾಮನಿಗೆ ನಿಷ್ಠಾವಂತನಾದ ಭಕ್ತ.

ಸುಗ್ರೀವನು ಸೀತಾನ್ವೇಷಣೆಗಾಗಿ ಅಂಗದ, ಹನುಮಂತ– ಮೊದಲಾದವರನ್ನು ದಕ್ಷಿಣದಿಕ್ಕಿಗೆ ಕಳಿಸಿದನಷ್ಟೆ. ಆಗ ಹನುಮಂತನನ್ನು ಕುರಿತು ಸುಗ್ರೀವನು–

**ತ್ವಯ್ಯೇವ ಹನುಮನ್ನಸ್ತಿ ಬಲಂ ಬುದ್ಧಿಃ ಪರಾಕ್ರಮಃ ।**
**ದೇಶಕಾಲಾನುವೃತ್ತಿಶ್ಚ ನಯಶ್ಚ ನಯಪಂಡಿತ ॥**

*ಕಿಷ್ಕಿ ೪೪–೭*

ಎಂದು ಹೇಳಿದನು. "ಹನುಮಂತ, ಬಲಬುದ್ಧಿಪರಾಕ್ರಮಗಳೂ ದೇಶಕಾಲಗಳನ್ನು ಗಮನಿಸಿ ಹೇಗೆ ನಡೆದುಕೊಳ್ಳಬೇಕೆಂಬ ವಿವೇಕವೂ ನಿನ್ನಲ್ಲಿ ಮಾತ್ರ ನೆಲೆಸಿವೆ. ನೀನು ನೀತಿಶಾಸ್ತ್ರಜ್ಞ. ರಾಜನೀತಿಯನ್ನು ಬಲ್ಲವನು"

ಹನುಮಂತನ ಅರ್ಹತೆಯೇನೆಂಬುದರ ಅರಿವು ಈಗಾಗಲೇ ಶ್ರೀರಾಮನಿಗೆ ತಕ್ಕಮಟ್ಟಿಗೆ ಆಗಿತ್ತು. ಸುಗ್ರೀವನು ಆತನಲ್ಲಿ ವಿಶಿಷ್ಟವಾದ ಆದರ ವಿಶ್ವಾಸಗಳನ್ನು ಪ್ರಕಟಿಸಿದಾಗ, ಬಹುಶಃ ಕಾರ್ಯವನ್ನು ಸಾಧಿಸಬಲ್ಲವನು ಈತನೇ ಎಂಬ ನಂಬಿಕೆ ರಾಘವನಿಗಾಯಿತು. ಆದ್ದರಿಂದ ರಾಮನಾಮಾಂಕಿತವಾದ ಉಂಗುರ ವನ್ನು ಹನುಮಂತನ ಕೈಗೆ ಕೊಟ್ಟನು. ಅನಂತರ ದಕ್ಷಿಣದಿಕ್ಕನ್ನೆಲ್ಲ ಹುಡುಕುತ್ತ ಅಂಗದಾದಿಗಳು ದಕ್ಷಿಣಸಮುದ್ರತೀರವನ್ನು ಸೇರಿದರು. ದೈವವಶದಿಂದ ಸಂಪಾತಿಯು ಕಾಣಿಸಿಕೊಂಡನು. ಸೀತೆಯು ಲಂಕೆಯಲ್ಲಿದ್ದಾಳೆಂದು ತಿಳಿಸಿದನು. ಮುಂದಿನ ಕಾರ್ಯೋಪಾಯವಾವುದು? ಸಮುದ್ರವು ಶತಯೋಜನ ವಿಸ್ತೀರ್ಣ ವಾಗಿದೆ. ಅದನ್ನು ಯಾರು ದಾಟಬಲ್ಲರು? ಯುವರಾಜನಾದ ಅಂಗದನು ವಾನರರನ್ನುದ್ದೇಶಿಸಿ ನಿಮ್ಮ ಬಲಪರಾಕ್ರಮಗಳೆಷ್ಟು? ಮಹಾಸಾಗರವನ್ನು ಲಂಘಿಸತಕ್ಕ ಸಾಮರ್ಥ್ಯ ಯಾರಿಗಿದೆ? ಎಂದು ಕೇಳಿದನು. ಒಬ್ಬನು ಹತ್ತು ಯೋಜನದೂರ ನೆಗೆಯಬಲ್ಲೆನೆಂದರೆ, ಇನ್ನೊಬ್ಬನು ಇಪ್ಪತ್ತು ಯೋಜನದೂರ ಹಾರಬಲ್ಲೆನೆಂದನು. ಹೀಗೆ ಎಂಬತ್ತು ಯೋಜನದವರೆಗೆ ಬಂದಿತು. ಅಂಗದನು ಜಾಂಬವಂತನ ಮುಖವನ್ನು ನೋಡಿದ. ಆತನು–

**ಪೂರ್ವಮಸ್ಮಾಕಮಪ್ಯಾಸೀತ್ ಕಶ್ಚಿದ್ಗತಿ ಪರಾಕ್ರಮಃ ।**
**ತೇ ವಯಂ ವಯಸಃ ಪಾರಮನುಪ್ರಾಪ್ತಾಃ ಸ್ಮ ಸಾಂಪ್ರತಮ್ ॥**

ಎಂದನು. "ಹಿಂದೆ ನಮಗೆ ಒಂದಾನೊಂದು ನೆಗೆಯುವ ಸಾಮರ್ಥ್ಯವಿತ್ತು. ಏನುಮಾಡೋಣ? ಈಗ ಮುಪ್ಪು ಬಂದುಬಿಟ್ಟಿದೆ!" ಎಂದನು. "ಆದರೂ ತೊಂಬತ್ತು ಯೋಜನ ದೂರ ಹಾರಬಲ್ಲೆನೆಂದು ವಿಶ್ವಾಸವಿದೆ!" ಎಂದು ತಿಳಿಸಿದನು. ಅಂಗದನು "ನನಗೇನೋ ಈ ಸಮುದ್ರವನ್ನು ದಾಟಬಲ್ಲೆನೆಂದು ವಿಶ್ವಾಸವಿದೆ. ಆದರೆ ವಾಪಸು ಬರುವ ಸಾಮರ್ಥ್ಯ ಇರುತ್ತದೆಯೋ ಇಲ್ಲವೋ!" ಎಂದು ಸಂದೇಹವನ್ನು ವ್ಯಕ್ತಪಡಿಸಿದನು. ಜಾಂಬವಂತನು "ಅಯ್ಯಾ ಅಂಗದ, ನಿನ್ನ ಶಕ್ತಿಯನ್ನು ನಾನು ಬಲ್ಲೆ. ನೀನು ಈ ಮಹಾಸಾಗರವನ್ನು ದಾಟಿಹೋಗಿ ಬರಬಲ್ಲೆ. ಆದರೆ ಯುವರಾಜನಾದ ನಿನ್ನನ್ನು ಕಳಿಸುವುದು ಯುಕ್ತವಲ್ಲ" ಎಂದು ಅಂಗದನನ್ನು ತಡೆದುಬಿಟ್ಟನು. ಮುಂದೆ ಗತಿ ಏನು? ಅಂಗದನು "ಜಾಂಬವಂತರೆ, ಹಾಗಾದರೆ ಇಲ್ಲಿ ಉಪವಾಸವಿದ್ದು ಸಾಯುವುದೇ ನಮಗೆ ಗತಿ. ಕಾರ್ಯವನ್ನು ಸಾಧಿಸದೆ ಸುಗ್ರೀವನ ಬಳಿಗೆ ಹಿಂತಿರುಗಲು ಸಾಧ್ಯವಿಲ್ಲ" ಎಂದನು.

ಆಗ ಜಾಂಬವಂತನು "ಯುವರಾಜ, ಚಿಂತಿಸಬೇಡ. ಈ ಮಹಾಕಾರ್ಯವನ್ನು ಸಾಧಿಸತಕ್ಕವನಿದ್ದಾನೆ. ಇದೋ ಅವನನ್ನು ತೋರಿಸಿಕೊಡುತ್ತೇನೆ" – ಎಂದು ಹೇಳಿ, ದೂರದಲ್ಲಿ ಸುಮ್ಮನೆ ಕುಳಿತಿದ್ದ ಹನುಮಂತನನ್ನು ಕರೆದನು. "ಏನಪ್ಪಾ ಹನುಮಂತ, ಸುಮ್ಮನೆ ಕುಳಿತುಬಿಟ್ಟಿದ್ದೀಯಲ್ಲ! ನಿನ್ನ ಪರಾಕ್ರಮವೇನೆಂಬುದು ನಿನಗೆ ಗೊತ್ತಿಲ್ಲವೆ? ನಿನ್ನ ಶಕ್ತಿಸಾಮರ್ಥ್ಯಗಳು ಅದ್ಭುತವಾದವು. ಈ ಕಪಿಸೇನೆಯು ದಿಕ್ಕುತೋರದೆ ತೊಳಲುತ್ತಿರುವಾಗ ಏನೂ ಗೊತ್ತಿಲ್ಲದವನಂತೆ ಕುಳಿತಿದ್ದೀಯೆ. ನೀನು ಈ ಸಾಗರವನ್ನು ಸುಲಭವಾಗಿ ಲಂಘಿಸಬಲ್ಲೆ" ಎಂದು ಹೇಳಿದನು. ಆಗ ಹನುಮಂತನು ಮುಂದೆಬಂದು "ಹೌದು, ಈ ಸಮುದ್ರವನ್ನು ಲೀಲೆಯಿಂದ ಲಂಘಿಸಬಲ್ಲೆ. ನಿಮ್ಮ ಅನುಜ್ಞೆಯಾದರೆ, ಇದೋ ಹೊರಟೆ" ಎನ್ನುತ್ತಾನೆ. ಈ ಪ್ರಸಂಗವು ಹನುಮಂತನ ವಿನಯಗುಣವನ್ನು ಸಾರುತ್ತದೆ. ಉತ್ತರಕಾಂಡದಲ್ಲಿ ಒಂದು ಕಥೆ ಇದೆ. ಹನುಮಂತನು ಬಾಲಕನಾಗಿದ್ದಾಗ ಋಷಿಗಳ ಆಶ್ರಮಕ್ಕೆ ಹೋಗಿ ಮಂಗಚೇಷ್ಟೆ ಮಾಡುತ್ತಿದ್ದನಂತೆ. ಇವನ ಕಾಟವನ್ನು ತಡೆಯಲಾರದೆ "ಎಲೋ, ನಿನ್ನ ಶಕ್ತಿಸಾಮರ್ಥ್ಯಗಳು ನಿನಗೆ ಮರೆತುಹೋಗಲಿ! ಯಾರಾದರೂ ಅವನ್ನು ನೆನಪಿಸಿದಾಗ ಅವು ಪ್ರಕಾಶಕ್ಕೆ ಬರಲಿ!" ಎಂದು ಶಪಿಸಿದರಂತೆ. ಮುಂದೆ ಈತನು ಸುಗ್ರೀವನ ಆಪ್ತಸಚಿವನಾದ. ವಾಲಿಗೆ ಹೆದರಿ ಸುಗ್ರೀವನು ದೇಶವಿದೇಶಗಳಲ್ಲಿ ಅಲೆಯುತ್ತಿದ್ದಾಗ ಹನುಮಂತನು ಅವನ ಜೊತೆಗೆ ಅಲೆಯುತ್ತಲೇ ಇದ್ದ. ವಾಲಿಯನ್ನು ನಿಗ್ರಹಿಸುವ ಶಕ್ತಿಸಂಪತ್ತು ಹನುಮಂತನಿಗಿದ್ದರೂ ಋಷಿಗಳ ಶಾಪದಿಂದ ಅದು ಅವನ ಸ್ಮರಣೆಗೆ ಬರಲಿಲ್ಲ. ಈ ಶಾಪದ ಪ್ರಭಾವದಿಂದಾದ ಮರೆವು ಇನ್ನೂ ಅನೇಕ ಕಡೆ ಕಾಣಸುತ್ತದೆಯೆಂದು ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳು ಹೇಳಿ ಕೆಲವು ನಿದರ್ಶನಗಳನ್ನು ಕೊಟ್ಟಿದ್ದಾರೆ.

ಹನುಮಂತನ ಸಮುದ್ರಲಂಘನ ಒಂದು ಸುಂದರವಾದ ಕಾವ್ಯಖಂಡ. ಜಾಂಬವಂತನು ಹನುಮಂತನ ಸಾಮರ್ಥ್ಯವನ್ನು ವರ್ಣಿಸುತ್ತಿದ್ದಂತೆ ಉತ್ಸಾಹಗೊಂಡ ಹನುಮಂತನ ರೂಪವು ಲಂಘನಕ್ಕೆ ಸಿದ್ಧವಾಗಿ ಬೆಳೆಯತೊಡಗಿತು. ಒಮ್ಮೆ ಬಾಲವನ್ನು ನೆಲಕ್ಕೆ ಅಪ್ಪಳಿಸಿ 'ವ್ಯವರ್ಧತ ಮಹಾಬಲಃ'. ಕಪಿಗಳ ಹರ್ಷಕ್ಕೆ ಎಣೆಯಿಲ್ಲವಾಯಿತು. "ವೈನತೇಯನ ಸಾಮರ್ಥ್ಯ ನನಗಿದೆ. ಮಾರುತನ ವೇಗ ನನ್ನಲ್ಲಿ ತುಂಬಿದೆ. ನೂರು ಯೋಜನಗಳಿರಲಿ, ಹತ್ತುಸಾವಿರ ಯೋಜನಗಳ ದೂರ ಹಾರಬಲ್ಲೆ! ಸೀತಾದೇವಿಯನ್ನು ಕಂಡೇ ಬರುತ್ತೇನೆ; ವಾನರಮಿತ್ರರೆ ಆನಂದಿಸಿರಿ!" ಎಂದು ಹೇಳುತ್ತಾ ಉಬ್ಬಿ ಮಹೇಂದ್ರಪರ್ವತವನ್ನು ಏರುತ್ತಾನೆ.

ಬೆಟ್ಟವನ್ನೊಮ್ಮೆ ಒದೆಯುತ್ತಾನೆ. ಮಹೇಂದ್ರಪರ್ವತವು ಸೀಳಿ ಬಿರುಕುಗಳಿಂದ ನೀರು ಚಿಮ್ಮಿತೆಂದು ಕವಿಯು ವರ್ಣಿಸಿದ್ದಾನೆ. ಬೆಟ್ಟದಲ್ಲಿದ್ದ ಮೃಗಪಕ್ಷಿಗಳು ಹೆದರಿ ತತ್ತರಿಸಿಹೋದವು. ವಿಹಾರಕ್ಕಾಗಿ ಬಂದಿದ್ದ ಗಂಧರ್ವಾದಿಗಳು ಭೀತಿಯಿಂದ ಆಕಾಶಕ್ಕೆ ಹಾರಿದರಂತೆ. ಹನುಮಂತನು ಕೈಕಾಲುಗಳನ್ನು ನೆಲಕ್ಕೆ ಊರಿ, ಬಾಲವನ್ನು ತಿರುಗಿಸುತ್ತ, ದೂರದೆಡೆಗೆ ಕಣ್ಣುಹಾಯಿಸುತ್ತ ಹಾರಲು ಸಜ್ಜಾಗುವುದು ತುಂಬ ಮನೋಹರವಾಗಿದೆ. ಅನಂತರ ಅವನು ಸಾಗರದ ಮೇಲೆ ಹಾರುವುದು, ನಡುವೆ ನಡೆದ ಘಟನೆಗಳು ಕವಿಯ ಕಲ್ಪನಾಶಕ್ತಿಗೆ ಒರೆಹಚ್ಚಿದಂತಿವೆ. ಇಷ್ಟು ಮನೋಹರವಾಗಿ, ಇಷ್ಟು ವಿಸ್ತಾರವಾಗಿ ಇನ್ನೊಬ್ಬ ಕವಿ ವರ್ಣಿಸಲಾರ.

## ರಾವಣನ ಅಂತಃಪುರದಲ್ಲಿ

ಆಂಜನೇಯನು ಸೀತಾದೇವಿಯನ್ನು ಅನ್ವೇಷಿಸುತ್ತ ರಾವಣನ ಅಂತಃಪುರಕ್ಕೆ ಬರುತ್ತಾನೆ. ರಾತ್ರಿಯ ಸಮಯ. ಹನುಮಂತನು ಕಾಮರೂಪಿಯಾದ್ದರಿಂದ ತನ್ನ ಆಕೃತಿಯನ್ನು ಚಿಕ್ಕದಾಗಿ ಮಾಡಿಕೊಂಡಿರುತ್ತಾನೆ. ಅಂತಃಪುರದ ವಿಲಾಸಿನಿಯರು ತಿಂದು ಕುಡಿದು ಹಾಡಿ ಕುಣಿದು ದಣಿದು ನಿದ್ರಿಸುತ್ತಿದ್ದಾರೆ. ಅವರು ಮಲಗಿರುವ ಭಂಗಿಯೇನು? ಅವರ ಸೌಂದರ್ಯವೇನು! ಅಂತಃಪುರದ ವೈಭವವೇನು! ಅದೆಲ್ಲವೂ ನಮ್ಮ ಕಣ್ಣಿಗೆ ಕಟ್ಟಿದಂತೆ ಕಾಣುತ್ತದೆ. ವಾಲ್ಮೀಕಿ ಮುನಿಗಳು ಆ ಪ್ರಕಾರದ ಶೃಂಗಾರವೈಭವ ದೃಶ್ಯವನ್ನು ಎಲ್ಲಿ ಕಂಡಿದ್ದರೊ! ರವಿ ಕಾಣದ್ದನ್ನು ಕವಿಯು ಕಾಣುತ್ತಾನೆ.

ಹನುಮಂತನಿಗೆ ರೋಮಾಂಚಕರವಾದ ಒಂದು ದೃಶ್ಯ ಕಾಣಿಸಿತು. ಒಂದು ವೇದಿಕೆಯ ಮೇಲೆ ವಿಸ್ತಾರವಾದ ಮಂಚ. ಸ್ವಚ್ಛವಾದ ಬಿಳಿಯ ಮೇಲುಹಾಸಿಗೆಯನ್ನು ಶಯ್ಯೆಗೆ ಹೊದಿಸಲಾಗಿತ್ತು. ಅದರಲ್ಲಿ ಸಾಕ್ಷಾತ್ ರಾವಣನು ಮಲಗಿ ನಿದ್ರಿಸುತ್ತಿದ್ದನು. ಕರಿಯ ಠೊಣಪನಾದ ರಾವಣನು, ಗಂಗಾಪ್ರವಾಹದ ಅಂಚಿನಲ್ಲಿ ಮಲಗಿದ್ದ ಸಲಗದಂತೆ ಕಾಣಿಸಿದನು. ನಿದ್ರಿಸುವಾಗ ಸರ್ಪದಂತೆ ಬುಸುಗುಟ್ಟುತ್ತಿದ್ದನು. ರಾವಣನ ದೇಹವು ಉದ್ದಿನ ರಾಶಿಯನ್ನು ಪೇರಿಸಿದಂತಿತ್ತು!

**ಮಾಷರಾಶಿಪ್ರತೀಕಾಶಂ ನಿಃಶ್ವಸಂತಂ ಭುಜಂಗವತ್ ।**
**ಗಾಂಗೇ ಮಹತಿ ತೋಯಾಂತೇ ಪ್ರಸುಪ್ತಮಿವ ಕುಂಜರಮ್ ॥**

*ಸುಂ. ೧೦-೨೮*

ಸಮೀಪದಲ್ಲಿ ಮಂಡೋದರಿ ಮಲಗಿದ್ದಳು. ಕನಕವರ್ಣಾಂಗಿಯಾದ ಆ ಸುಂದರಿಯನ್ನು ಕಂಡು ಅವಳೇ ಸೀತೆಯೆಂದು ಹನುಮಂತನಿಗೆ ಭ್ರಮೆಯಾಯಿತು. ಅವನ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಅವನು–

**ಆಸ್ಫೋಟಯಾಮಾಸ ಚುಚುಂಬ ಪುಚ್ಛಂ**
**ನನಂದ ಚಿಕ್ರೀಡ ಜಗೌ ಜಗಾಮ ।**
**ಸ್ತಂಭಾವರೋಹನ್ನಿಪಪಾತ ಭೂಮೌ**
**ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಮ್ ॥**

–ಸುಂ. ೧೦-೫೪

"ತನ್ನ ಬಾಲವನ್ನು ನೆಲಕ್ಕೆ ಬಡಿದನು. ಬಾಲಕ್ಕೆ ಮುತ್ತುಕೊಟ್ಟನು! ಸಂತೋಷದಿಂದ ಹಿಗ್ಗುತ್ತ ಕುಣಿದಾಡಿದನು. ಹಹ್ಹಹ್ಹ ಎಂದು ಹಾಡುತ್ತ ಅಲ್ಲಿಂದಿಲ್ಲಿಗೆ ತಿರುಗಾಡಿದನು. ಕಂಭಗಳನ್ನು ಹತ್ತಿ ಧುಮುಕಿದನು. ಹೀಗೆ ತನ್ನ ಕಪಿತ್ವವನ್ನು ತೋರಿಸಿಬಿಟ್ಟನು!"

ಇದೆಲ್ಲ ಒಂದು ನಿಮಿಷದ ಚೇಷ್ಟೆ. ಪತಿವ್ರತೆಯಾದ ಸೀತಾಮಾತೆ ಈ ರೀತಿ ರಾವಣನ ಅಂತಃಪುರದಲ್ಲಿ – ಅದೂ ರಾವಣನ ಬಳಿಯಲ್ಲಿ–ನಿದ್ರಿಸುತ್ತಾಳೆಂದರೇನು? ಅಯ್ಯೋ, ನನ್ನ ಅವಿವೇಕವೇ–ಎಂದು ಪಶ್ಚಾತ್ತಾಪಪಟ್ಟು ಅವಳು ಸೀತೆಯಲ್ಲವೆಂದು ನಿರ್ಧರಿಸಿಕೊಳ್ಳುತ್ತಾನೆ.

## ಹನುಮಂತನ ವ್ಯಥೆ

ಹೀಗೆ ಅಂತಃಪುರದ ಸ್ತ್ರೀಯರನ್ನೆಲ್ಲ ನೋಡುತ್ತ ಹೋದ ಹನುಮಂತನ ಮನಸ್ಸಿನಲ್ಲೊಂದು ಚಿಂತೆ ಹುಟ್ಟಿತು. "ಈ ಹೆಂಗಸರು ಪರಸ್ತ್ರೀಯರು. ಅಸ್ತವ್ಯಸ್ತವಾಗಿ ಮಲಗಿದ್ದ ಇವರನ್ನು ದೃಷ್ಟಿಸಿ ನೋಡುತ್ತ ಬಂದೆನಲ್ಲ, ಇದು ಪಾಪಕೃತ್ಯ. ಧರ್ಮಲೋಪವಾಯಿತು. ಏನು ಮಾಡಲಿ?" ಎಂಬುದು ಅವನ ಚಿಂತೆ. ಆಮೇಲೆ ತನ್ನಲ್ಲಿಯೇ ಸಮಾಧಾನಮಾಡಿಕೊಳ್ಳುತ್ತಾನೆ. "ಈ ರಾವಣನ ಮಡದಿಯರನ್ನೇನೋ ಹೀಗೆ ನೋಡಿದೆನು. ಆದರೆ ನನಗೆ ಯಾವ ಚಿತ್ತವಿಕಾರವೂ ಉಂಟಾಗಲಿಲ್ಲ. ಪುಣ್ಯಪಾಪಗಳಿಗೆ ಮನಸ್ಸು ಕಾರಣ. ನನ್ನ ಮನಸ್ಸು ಕದಲದೆ ನಿಶ್ಚಲವಾಗಿದೆ. ಆದ್ದರಿಂದ ಪಾಪವೇನೂ ಇಲ್ಲ. ಸೀತಾದೇವಿಯನ್ನು ಹುಡುಕುವುದಕ್ಕಾಗಿ ಬಂದದ್ದರಿಂದ, ಹೀಗೆ ನೋಡುತ್ತ ತಿರುಗಬೇಕಾಯಿತು. ಸ್ತ್ರೀಯನ್ನು ಸ್ತ್ರೀಯರ ಮಧ್ಯದಲ್ಲಲ್ಲವೆ ಹುಡುಕಬೇಕು!

ಜಿಂಕೆಗಳ ಗುಂಪಿನಲ್ಲಿ ಸೀತೆಯನ್ನು ಹುಡುಕಲೆ?" ಎಂದು ಆತನಿಗೆ ಸಮಾಧಾನ. ಧರ್ಮಸೂಕ್ಷ್ಮತೆಯನ್ನು ಮಹಾಕವಿ ಹೇಗೆ ಚಿತ್ರಿಸಿದ್ದಾನೆಂಬುದನ್ನು ನೋಡಿ.

## ಸೀತಾದರ್ಶನ

ಲಂಕಾನಗರದಲ್ಲೆಲ್ಲಿಯೂ ಸೀತೆಯ ದರ್ಶನವಾಗಲಿಲ್ಲವಾದ್ದರಿಂದ ವಿಷಣ್ಣನಾದ ಹನುಮಂತನು ಕಡೆಯ ಪ್ರಯತ್ನವೆಂದುಕೊಂಡು ಅಶೋಕವನಕ್ಕೆ ಬಂದನು. ಅಲ್ಲಿ ಸೀತಾದರ್ಶನವಾಯಿತು. ಆಕೆಯ ದರ್ಶನದಿಂದ ಹನುಮಂತನಿಗಾದ ಸಂತೋಷ, ಅವಳ ಪರಿಸ್ಥಿತಿಯನ್ನು ನೋಡಿ ಉಂಟಾದ ದುಃಖ –ಇವನ್ನು ಕವಿಯು ಬಹು ಸಮರ್ಥವಾಗಿ ಚಿತ್ರಿಸಿದ್ದಾನೆ. ಆ ಸಮಯದಲ್ಲಿಯೇ ರಾವಣನು ಅಲ್ಲಿಗೆ ಆಗಮಿಸಿದ. ರಾವಣನು ದೇವಿಯನ್ನು ಒಲಿಸಿಕೊಳ್ಳಲು ಆಡುವ ಮಾತುಗಳು, ದೇವಿಯು ಆತನಿಗೆ ಹೇಳುವ ಧಿಕ್ಕಾರದ ಮಾತುಗಳು –ಇವೆಲ್ಲವೂ ಹನುಮಂತನೆದುರಿಗೇ ನಡೆದವು. ಹನುಮಂತನು ಮರದಲ್ಲಿ ಅಡಗಿ ಕುಳಿತು ಈ ಸಂಭಾಷಣೆಗಳೆಲ್ಲವನ್ನೂ ಆಲಿಸಿದ. ದೇವಿಯ ಶೀಲ ಚಾರಿತ್ರಗಳೆಷ್ಟು ಪರಿಶುದ್ಧವಾದವೆಂಬುದು ಅವನ ಮನಸ್ಸಿನಲ್ಲಿ ನೆಟ್ಟು ಹೋದುವು. ಆಂಜನೇಯನನ್ನು ಸಾಕ್ಷಿಯಾಗಿಟ್ಟು ಈ ಸಂಭಾಷಣೆಗಳನ್ನು ತಂದು ದೇವಿಯ ಪರಿಶುದ್ಧತೆಯನ್ನು ವರ್ಣಿಸಿರುವುದು ಕವಿಕೌಶಲವೇ ಸರಿ.

ಜಾನಕಿಯ ಪ್ರತ್ಯುತ್ತರಗಳಿಂದ ರಾವಣನಿಗೆ ಮುಖಭಂಗವಾಯಿತು. ಅವಳನ್ನು ಇನ್ನೂ ಹೆದರಿಸಿ ಗಟ್ಟಿಯಾಗಿ ನಗುತ್ತಾ ಹೊರಟುಹೋದನು. ಕಾವಲಿದ್ದ ರಾಕ್ಷಸಿಯರು ಜಾನಕಿಯನ್ನು ಮತ್ತಷ್ಟು ಭೀತಿಗೊಳಿಸಿ ಮಲಗಿ ನಿದ್ರಿಸಿದರು. ಜಾನಕಿಯು ನಾನಾ ಚಿಂತೆಗಳಿಂದ ನೊಂದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಮರದ ಕೊಂಬೆಯನ್ನು ಹಿಡಿದು ನಿಂತಳು. ಈ ಸಂದಿಗ್ಧ ಸ್ಥಿತಿಯಲ್ಲಿ ಹನುಮಂತನ ಬುದ್ಧಿಶಕ್ತಿ ಪ್ರಕಾಶಕ್ಕೆ ಬರುತ್ತದೆ.

## ಬುದ್ಧಿಮತಾಂ ವರಿಷ್ಠಃ

ಸಂತೈಸುವುದಾದರೆ ಅವಳೊಡನೆ ಮಾತಾಡಬೇಕು. ತಾನಾದರೋ ಅಪರಿಚಿತ; ವಾನರ. ಇದ್ದಕ್ಕಿದ್ದಂತೆ ಕಾಣಿಸಿಕೊಂಡು 'ನಾನು ರಾಮದೂತ' ಎಂದು ನುಡಿದರೆ ಸೀತೆಯು ನಂಬುವಳೆ? ಇದೊಂದು ರಾವಣನ ಮೋಸ –ಎಂದು ಭಾವಿಸಿ ಭೀತಿಯಿಂದ ನಡುಗಿಹೋದಾಳು. ದೇವಿಯ ಚಿತ್ತವು

ಕ್ಷುಬ್ಧವಾಗಿದೆ, ಉದ್ವಿಗ್ನವಾಗಿದೆ. ಬಿಸಿಯಾದ ಗಾಜಿಗೆ ತಣ್ಣೀರು ಚಿಮುಕಿಸಿದರೆ ಗಾಜು ಒಡೆದು ಹೋದೀತು.

ಮರದ ಮೇಲೆಯೇ ಕುಳಿತು, ದೇವಿಯ ಚಿತ್ತೋದ್ವೇಗವನ್ನು ಕಡಿಮೆ ಮಾಡುವುದಕ್ಕಾಗಿ ಹನುಮಂತನು ಮೆಲ್ಲಗೆ ಶ್ರೀರಾಮನ ಕಥೆಯನ್ನು ಹೇಳಲಾರಂಭಿಸುತ್ತಾನೆ. **ರಾಜಾ ದಶರಥೋ ನಾಮ ರಥಕುಂಜರವಾಜಿಮಾನ್** –ಎಂದು ಆರಂಭಿಸಿ, ಸೀತಾಪಹರಣದ ವೃತ್ತಾಂತವನ್ನು ಹೇಳಿ, ಶ್ರೀರಾಮನಿಗೆ ಸುಗ್ರೀವನೊಡನಾದ ಸಖ್ಯವನ್ನು ತಿಳಿಸಿ, ಸುಗ್ರೀವನ ಆಜ್ಞೆಯಂತೆ ವಾನರನಾದ ತಾನು ಇಲ್ಲಿಗೆ ಬಂದು, ಈಗ ಸೀತೆಯನ್ನು ಕಂಡೆನು!'' ಎಂದು ಸಂಕ್ಷೇಪವಾಗಿ ಹೇಳಿ ಸುಮ್ಮನಿದ್ದುಬಿಡುತ್ತಾನೆ!

ಬಾಯಾರಿಕೆಯಿಂದ ಒಣಗಿಹೋದ ಗಂಟಲಿಗೆ ಒಂದು ಗುಟುಕು ನೀರು ಸೋಕಿದಂತಾಯಿತು. 'ಒಳ್ಳೆಯ ಸುದ್ದಿಯನ್ನು ಕೇಳುತ್ತಿದ್ದೇನಲ್ಲ' ಎಂದು ಸೀತಾದೇವಿಯು ಕುತೂಹಲಾವಿಷ್ಟಳಾದಳು. ಅನಂತರ ಮೆಲ್ಲ ಮೆಲ್ಲನೆ ಮುಂದಿನ ಸಂಭಾಷಣೆ ನಡೆಯುತ್ತದೆ. ಹನುಮಂತನು ಶ್ರೀರಾಮನ ದೂತನೆಂಬುದನ್ನು ಸೀತೆಯು ಥಟ್ಟನೆ ನಂಬಿಬಿಡುವುದಿಲ್ಲ. ಅವಳಲ್ಲಿ ನಂಬಿಕೆಯನ್ನು ಹುಟ್ಟಿಸಬೇಕಾದರೆ ಹನುಮಂತನು ತನ್ನ ಬುದ್ಧಿಶಕ್ತಿಯನ್ನೂ ವಾಗ್ಮಿತೆಯನ್ನೂ ಬಳಸಬೇಕಾಗುತ್ತದೆ. ಶ್ರೀರಾಮನಿತ್ತ ಅಂಗುಲೀಯಕವನ್ನು ನೋಡಿದ ಮೇಲೆ ಅವಳಿಗೆ ಹನುಮಂತನಲ್ಲಿ ವಿಶ್ವಾಸವು ಮೂಡುತ್ತದೆ. ವಾಲ್ಮೀಕಿಮುನಿಗಳ ಮನೋವಿಶ್ಲೇಷಣ ಪ್ರಕಾರವು ಈ ಸಂದರ್ಭದಲ್ಲಿ ಸುಂದರವಾಗಿ ಮೂಡಿದೆ.

ಹನುಮಂತನ ಬುದ್ಧಿಶಕ್ತಿಯನ್ನೂ ಮಾತುಗಾರಿಕೆಯನ್ನೂ ನೈಪುಣ್ಯವನ್ನೂ ಎತ್ತಿತೋರಿಸುವ ಕೆಲವು ಉದಾಹರಣೆಗಳನ್ನಿಲ್ಲಿ ನೋಡಬಹುದು. ಶ್ರೀರಾಮನು ಸುಗ್ರೀವನ ವಾನರಸೇನೆಯೊಡನೆ ಬಂದು ಲಂಕೆಯನ್ನು ಮುತ್ತಿ ರಾವಣನನ್ನು ವಧಿಸಿ, ನಿನ್ನನ್ನು ಕರೆದೊಯ್ಯುತ್ತಾನೆಂದು ಹನುಮಂತನು ಹೇಳಿದಾಗ ಅವಳಿಗೊಂದು ಸಂದೇಹ ಹುಟ್ಟುತ್ತದೆ. ನಡುವೆ ಈ ಮಹಾಸಾಗರವು ಅಡ್ಡವಾಗಿದೆಯಲ್ಲ, ಇದನ್ನು ದಾಟಿ ವಾನರಸೇನೆ ಹೇಗೆ ಬಂದೀತೆಂದು ಕೇಳುತ್ತಾಳೆ. ಪ್ರತ್ಯುತ್ಪನ್ನಮತಿಯಾದ ಹನುಮಂತನು ಅದಕ್ಕೆ ಹೀಗೆ ಸಮಾಧಾನ ಹೇಳುತ್ತಾನೆ. ''ತಾಯಿ, ಸುಗ್ರೀವಮಹಾರಾಜನ ಸೇನೆಗೆ ಈ ಸಮುದ್ರವು ಯಾವಲೆಕ್ಕ? ಒಬ್ಬ ಸಾಮಾನ್ಯ ಸೇವಕನಾದ ನಾನೇ ಇದನ್ನು ಹಾರಿ ಬಂದುಬಿಟ್ಟಿದ್ದೇನೆ! ನಾನು ಒಬ್ಬ ರಾಜದೂತ. ಶ್ರೇಷ್ಠರಾದ ವೀರರನ್ನು

ದೂತರನ್ನಾಗಿ ಕಳಿಸುತ್ತಾರೆಯೆ? ನನಗಿಂತ ಕೆಳದರ್ಜೆಯ ಒಬ್ಬ ಸೈನಿಕನೂ ಸುಗ್ರೀವನ ಬಳಿ ಇಲ್ಲ! ಸುಗ್ರೀವನ ಸೇನೆಯಲ್ಲಿ ನಾನು ಕನಿಷ್ಠನಾದವನು.

**ಮತ್ತಃ ಪ್ರತ್ಯವರಃ ಕಶ್ಚಿತ್ ನಾಸ್ತಿ ಸುಗ್ರೀವಸಂನಿಧೌ ॥**

ಸು. ೩೯-೩೮

ಆ ವಾನರವೀರರು ಒಂದು ಸಲ ಕುಪ್ಪಳಿಸಿದರೆ ಸಾಕು, ಲಂಕೆಗೆ ಬಂದು ಬಿಡುತ್ತಾರೆ'' ಎನ್ನುತ್ತಾನೆ.

ಅವನು ಲಂಕೆಯಿಂದ ಹಿಂದಕ್ಕೆ ಬರುವಾಗ ಅಂಗದನೇ ಮೊದಲಾದ ವಾನರರು ಹನುಮಂತನ ಬರವನ್ನು, ಕಾಯುತ್ತ ಕುಳಿತಿದ್ದರು. ತಾನು ಬರುತ್ತಿರುವುದು ಅವರಿಗೆ ಗೊತ್ತಾಗಲೆಂದು ಇವನು ಆಕಾಶದಲ್ಲಿಯೇ ಗರ್ಜಿಸುತ್ತ ಬಂದ. ವಾನರರ ಕಿವಿಗಳು ನೆಟ್ಟಗಾದವು. ಸೀತೆಯನ್ನು ಕಂಡುಬಂದನೆ, ಇಲ್ಲವೆ? –ಎಂಬುದನ್ನರಿಯಲು ಕಾದುಕುಳಿತಿದ್ದರು. ಹನುಮಂತ ನಾಡಿದ ಮೊದಲನೆಯ ಮಾತು ದೃಷ್ಟಾ ಸೀತಾ – ನೋಡಿದೆ ಸೀತೆಯನ್ನು. ನೋಡಿದೆ ಎಂಬ ಮಾತನ್ನು ಮೊದಲು ಪ್ರಯೋಗಿಸಿದ್ದಾನೆ. 'ಸೀತಾ ದೃಷ್ಟಾ' ಎಂದು ಹೇಳಲಿಲ್ಲ. 'ದೃಷ್ಟಾ' ಎಂಬ ಶಬ್ದವೇ ವಾನರರಿಗೆ ಮೊದಲು ಬೇಕಾದದ್ದು. **ದೃಷ್ಟಾ ಸೀತೇತಿ ವಿಕ್ರಾಂತಃ ಸಂಕ್ಷೇಪೇಣ ನ್ಯವೇದಯತ್ ।** ಅನಂತರ ತನ್ನ ಲಂಘನ ಪ್ರಕಾರವೇ ಮೊದಲಾದ ವಿವರಣೆಯನ್ನು ಕೊಡುತ್ತಾನೆ. ಅನಂತರ ಶ್ರೀರಾಮನಿಗೆ ಸೀತಾವೃತ್ತಾಂತವನ್ನು ಹೇಳುವಾಗ, ಮೊದಲು ದಕ್ಷಿಣದಿಕ್ಕಿಗೆ ತಿರುಗಿ ಸೀತಾದೇವಿಗೆ ನಮಸ್ಕರಿಸಿ, ಆಮೇಲೆ ನಡೆದ ವೃತ್ತಾಂತವನ್ನು ವಿವರಿಸುತ್ತಾನೆ. ದೇವಿಯು ಪರಮಪರಿಶುದ್ಧಳೆಂದೂ ತನ್ನ ಪಾತಿವ್ರತ್ಯವನ್ನು ಕುಂದಿಲ್ಲದಂತೆ ಪಾಲಿಸಿಕೊಂಡಿದ್ದಾಳೆಂದೂ ತನ್ನ ವರ್ತನೆ ಯಿಂದಲೇ ತಿಳಿಸಿಬಿಡುತ್ತಾನೆ–

**ಪ್ರಣಮ್ಯ ಶಿರಸಾ ದೇವ್ಯೈ ಸೀತಾಯೈ ತಾಂ ದಿಶಂ ಪ್ರತಿ ।**
**ಉವಾಚ ವಾಕ್ಯಂ ವಾಕ್ಯಜ್ಞಃ ಸೀತಾಯಾ ದರ್ಶನಂ ಯಥಾ ॥**

ಸುಂ. ೬೫-೭

ಕವಿಯು ಹನುಮಂತನನ್ನು 'ವಾಕ್ಯಜ್ಞಃ' ಎಂದು ಕರೆದಿದ್ದಾನೆ. ಇದು ತುಂಬ ಅರ್ಥವತ್ತಾದ ವಿಶೇಷಣ. ಅವನು ವಾನರರೊಡನೆ ಮಾತಾಡುವಾಗ ಸಮುದ್ರಲಂಘನಾದಿಗಳನ್ನು ವಿಸ್ತಾರವಾಗಿ ತಿಳಿಸುತ್ತಾನೆ. ಶ್ರೀರಾಮನಿಗೆ

ಅದೆಲ್ಲವನ್ನೂ ಎರಡೇ ಮಾತಿನಲ್ಲಿ ಹೇಳಿ ಸೀತಾದೇವಿಯೊಡನೆ ತಾನು ಮಾತಾಡಿದ್ದು, ಅವಳು ಹೇಳಿದ್ದು, ಅವಳನ್ನು ಸಮಾಧಾನಗೊಳಿಸಿದ ವಿಧಾನ, ಅವಳಿಗೆ ಶ್ರೀರಾಮನಲ್ಲಿರುವ ಅಸದೃಶವಾದ ಪ್ರೀತಿ, ಭಕ್ತಿ ಮೊದಲಾದ್ದು, ಅವಳ ಕಷ್ಟಜೀವಿತ – ಇವನ್ನು ವಿಸ್ತಾರವಾಗಿ ವರ್ಣಿಸಿದ್ದಾನೆ. ಸೀತಾದೇವಿಗೂ ರಾವಣನಿಗೂ ನಡೆದ ಸಂಭಾಷಣೆಯನ್ನು ಮಾತ್ರ ತಿಳಿಸಲೇ ಇಲ್ಲ. ಅದನ್ನು ಕೇಳಿ ಶ್ರೀರಾಮನು ಇನ್ನೂ ಉದ್ವಿಗ್ನನಾದಾನೆಂದೂ, ಅವನ ಶೋಕತಾಪಗಳು ಅತಿಯಾಗಿ ಬಿಡುತ್ತವೆಯೆಂದೂ ಉದ್ದೇಶಪೂರ್ವಕವಾಗಿಯೇ ಕೈಬಿಟ್ಟಿದ್ದಾನೆ.

ಎಲ್ಲ ವಿವರಗಳನ್ನೂ ಕೇಳಿದ ಮೇಲೆ ಶ್ರೀರಾಮನು ಹನುಮಂತನನ್ನು ಹೊಗಳುತ್ತಾನೆ.

**ಕೃತಂ ಹನುಮತಾ ಕಾರ್ಯಂ ಸುಮಹದ್ಭುವಿ ದುಷ್ಕರಂ ।**
**ಮನಸಾಪಿ ಯದನ್ಯೇನ ನ ಶಕ್ಯಂ ಧರಣೀತಲೇ ॥**

ಯುದ್ಧ. ೧-೨

"ಈ ಜಗತ್ತಿನಲ್ಲಿ ಅತ್ಯಂತ ದುಷ್ಕರವಾದ ಕಾರ್ಯವನ್ನು ಹನುಮಂತನು ಮಾಡಿದ್ದಾನೆ. ಇನ್ನೊಬ್ಬನಿಗೆ ಇಷ್ಟು ಮಾಡಿಯೇನೆಂದು ಮನಸ್ಸಿನಲ್ಲಿಯೂ ಕಲ್ಪಿಸಿಕೊಳ್ಳಲಾಗುವುದಿಲ್ಲ". "ಇಂತಹ ಆಪದ್ಬಂಧುವಿಗೆ ನಾನು ಯಾವ ಬಹುಮಾನವನ್ನಿತ್ತೇನು? ಈ ದೀನಾವಸ್ಥೆಯಲ್ಲಿರುವ ನನ್ನ ಮನಸ್ಸು ಕೊರೆದು ಹೋಗುತ್ತಿದೆ. ಇವನಿಗೆ ಯೋಗ್ಯವಾದ ಯಾವ ಪ್ರಿಯ ವಸ್ತುವನ್ನು ಕೊಟ್ಟೇನು? ಇದೋ, ಪ್ರೀತಿಯಿಂದ ಹನುಮಂತನನ್ನು ಆಲಿಂಗಿಸಿಕೊಳ್ಳುತ್ತೇನೆ" ಎಂದು ನುಡಿದು ರೋಮಾಂಚಿತನಾಗಿ ಹನುಮಂತನನ್ನು ಗಟ್ಟಿಯಾಗಿ ಅಪ್ಪಿಕೊಳ್ಳುತ್ತಾನೆ.

**ಇತ್ಯುಕ್ತ್ವಾ ಪ್ರೀತಿಹೃಷ್ಟಾಂಗೋ ರಾಮಸ್ತಂ ಪರಿಷಸ್ವಜೇ ॥**

ಶ್ರೀರಾಮನ ಆಲಿಂಗನಕ್ಕಿಂತ ಹೆಚ್ಚಿನ ಯಾವ ಪಾರಿತೋಷಿಕ ಹನುಮಂತನಿಗೆ ಬೇಕಾಗಿತ್ತು?

ಹನುಮಂತನು ವಾಕ್ಯಜ್ಞನೆಂಬುದಕ್ಕೆ ಇನ್ನೊಂದು ಉದಾಹರಣೆ ರಾವಣನ ಸಂಹಾರವಾದ ಮೇಲೆ ಶ್ರೀರಾಮನ ವಿಜಯವಾರ್ತೆಯನ್ನು ಜಾನಕಿಗೆ ತಿಳಿಸುವ ಸೌಭಾಗ್ಯವೂ ಅವನಿಗೆ ಒದಗಿತು. ಅವನು ಅಶೋಕವನಕ್ಕೆ ಬಂದು ದೇವಿಯನ್ನು ನೋಡಿ **ವೈದೇಹಿ ಕುಶಲೀರಾಮಃ ಸಹಸುಗ್ರೀವ ಲಕ್ಷ್ಮಣಃ** ಎಂದು

ಹೇಳಿ ಪ್ರಿಯಮಾಖ್ಯಾಮಿ ತೇ ದೇವಿ ಎಂದು ನುಡಿದು "ನಮಗೆ ಜಯವಾಯಿತು" ಎನ್ನುತ್ತಾನೆ. ಹನುಮಂತನನ್ನು ಕಂಡೊಡನೆ ಸಂತೋಷದ ಸುದ್ದಿಯನ್ನು ತಂದಿದ್ದಾನೆಂದು ಅವಳಿಗೆ ತಿಳಿದುಹೋಯಿತು. ಶ್ರೀರಾಮ, ಲಕ್ಷ್ಮಣ, ಸುಗ್ರೀವರ ಕುಶಲವಾರ್ತೆಯೊಂದು ಅವಳಿಗೆ ಬೇಕಾಗಿತ್ತು.

## ಅಶೋಕವನಭಂಜನ

ಸೀತಾದೇವಿಯಿಂದ ಅವಳ ಚೂಡಾಮಣಿಯನ್ನು ಪಡೆದು ಪ್ರತಿಪ್ರಯಾಣಕ್ಕೆ ಸಿದ್ಧನಾಗಿ ಹೊರಟ ಹನುಮಂತನಿಗೆ ಇನ್ನೊಂದು ಆಲೋಚನೆ ಮೂಡಿತು. "ನನ್ನ ಕಾರ್ಯಭಾಗ ಮುಗಿದಂತೆಯೇ. ಈಗ ಈ ರಾಕ್ಷಸರ ಬಲಪರಾಕ್ರಮಗಳೆಷ್ಟೆಂಬುದನ್ನು ತಿಳಿದುಕೊಂಡುಹೋಗುವುದು ಉತ್ತಮ. ಇವರು ಸಾಮಭೇದದಾನೋಪಾಯಗಳಿಗೆ ಬಗ್ಗತಕ್ಕವರಲ್ಲ. ನಾಲ್ಕನೆಯದಾದ ದಂಡವನ್ನೇ ಪ್ರಯೋಗಿಸಬೇಕಾಗಿದೆ. ನಾನು ಹಿಂದಕ್ಕೆ ಹೋದಮೇಲೆ 'ಲಂಕೆಯ ದುರ್ಗಬಲ ಹೇಗಿದೆ? ರಾಕ್ಷಸರ ಪರಾಕ್ರಮ ಯಾವ ಮಟ್ಟದ್ದು?' ಎಂದು ಸುಗ್ರೀವನೋ ಶ್ರೀರಾಮನೋ ಕೇಳಬಹುದು. ಆಗ ನಾನು ಏನು ಹೇಳಬೇಕು? ಸ್ವಾಮಿಕಾರ್ಯಕ್ಕೆ ವಿರೋಧವಾಗದಂತೆ ಉಪಯುಕ್ತವಾದ ಹೆಚ್ಚಿನ ಕಾರ್ಯವನ್ನು ಸಾಧಿಸತಕ್ಕವನೇ ನಿಜವಾದ ದೂತ" ಎಂದು. ರಾಕ್ಷಸರನ್ನು ಕೆಣಕಿ ಯುದ್ಧಕ್ಕೆ ಕರೆಯಲು ಅಶೋಕವನಭಂಜನವೇ ಉತ್ತಮ ಮಾರ್ಗ ಎಂದು ನಿಶ್ಚಯಿಸಿದನು. ಇದು ಆತನ ಕಾರ್ಯನಿಷ್ಠೆಗೂ ಸ್ವಾಮಿಭಕ್ತಿಗೂ ನಿದರ್ಶನ. ಆದರೆ ಶತ್ರುದೇಶಕ್ಕೆ ಬಂದು ಒಂಟಿಯಾಗಿ ವೈರಿಗಳನ್ನು ಎದುರುಹಾಕಿಕೊಳ್ಳುವುದು ವಿವೇಕವೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಪ್ರಶ್ನೆ ಹನುಮಂತನ ಮನಸ್ಸಿಗೂ ಬಂದಿದೆ. ಆದರೆ ತಾನು ಚಂಡವಿಕ್ರಮನೆಂದೂ ರಾಕ್ಷಸಯೋಧರನ್ನು ಗೆದ್ದು "ಸುಖಂ ಗಮಿಷ್ಯಾ ಕಪೀಶ್ವರಾಲಯಂ" ಎಂದೂ ನಿಶ್ಚಯಿಸುತ್ತಾನೆ. ಇದು ಆತನ ಆತ್ಮಪ್ರತ್ಯಯ.

ಅಶೋಕವನಭಂಗವೇ ನಡೆಯಲಿಲ್ಲವೆಂದೂ ಲಂಕಾದಹನವೂ ಸಹ ಕಲ್ಪಿತವೆಂದೂ ಕೆಲವು ಆಧುನಿಕ ವಿಮರ್ಶಕರು ಹೇಳಿದ್ದುಂಟು. ಈ ಪ್ರಕರಣವು ಪ್ರಕ್ಷಿಪ್ತವೆಂದು ಅವರ ಹೇಳಿಕೆ. ಇದು ಅವರ ಅಭಿಪ್ರಾಯ ಮಾತ್ರ. ವಾಸ್ತವವಲ್ಲ. ಅಕ್ಷಕುಮಾರನ ವಧೆ, ಲಂಕಾದಹನ ವಿಚಾರಗಳು ಮುಂದೆ ಯುದ್ಧಕಾಂಡದಲ್ಲಿ ಅನೇಕ ಸ್ಥಳಗಳಲ್ಲಿ ಪ್ರಸ್ತುತವಾಗಿವೆ. ಅವೆಲ್ಲವೂ

ಪ್ರಕ್ಷಿಪ್ತಗಳೆನ್ನುವುದು ಯುಕ್ತವಲ್ಲ. ಕಾಳಿದಾಸಾದಿ ರಾಮಾಯಣ ಕವಿಗಳೂ ಲಂಕಾದಹನವನ್ನು ವರ್ಣಿಸಿದ್ದಾರೆ.

## ರಾವಣನ ಒಡ್ಡೋಲಗದಲ್ಲಿ

ರಾವಣನು ಅಂತಃಪುರದಲ್ಲಿ ನಿದ್ರಿಸುತ್ತಿದ್ದಾಗ, ಅಶೋಕವನಕ್ಕೆ ಬಂದಾಗ – ಹೀಗೆ ಎರಡು ಬಾರಿ ಅವನನ್ನು ಹನುಮಂತನು ಕಂಡಿದ್ದಾನೆ. ಆ ಸಮಯದಲ್ಲಿ ರಾವಣನ ದರ್ಪ, ತೇಜಸ್ಸು–ಮೊದಲಾದವು ಪ್ರಕಾಶಗೊಂಡಿರಲಿಲ್ಲ. ಇಂದ್ರಜಿತುವಿನ ಬ್ರಹ್ಮಾಸ್ತ್ರದಿಂದ ಬದ್ಧನಾಗಿ ರಾವಣನ ಆಸ್ಥಾನಕ್ಕೆ ಬಂದಾಗ ಅದೆಲ್ಲವೂ ಹನುಮಂತನಿಗೆ ಕಾಣಿಸಿತು. ರಾವಣನ ವೈಭವವೇನು! ಅವನ ಐಶ್ವರ್ಯವೇನು! ಅವನು ಕುಳಿತಿದ್ದ ಠೀವಿಯೇನು! ಅವನ ಪ್ರಭಾವವೇನು! ಹನುಮಂತನು ಅದೆಲ್ಲವನ್ನು ಕಂಡು ವಿಸ್ಮಿತನಾಗಿ "ಈ ರಾಕ್ಷಸೇಶ್ವರನಲ್ಲಿ ಅಧರ್ಮವೊಂದು ಪ್ರಬಲವಾಗಿ ಇಲ್ಲದೇ ಹೋಗಿದ್ದರೆ, ಈತನು ಸ್ವರ್ಗವನ್ನೇ ಆಳಬಹುದಾಗಿತ್ತು. ದೇವೇಂದ್ರನ ಮೇಲೆಯೂ ಪ್ರಭುತ್ವವನ್ನು ನಡೆಸಬಹುದಾಗಿತ್ತು" ಎಂದುಕೊಳ್ಳುತ್ತಾನೆ–

**ಅಹೋ ರೂಪಮಹೋ ಧೈರ್ಯಮಹೋ ಸತ್ತ್ವಮಹೋ ದ್ಯುತಿಃ ।**
**ಅಹೋ ರಾಕ್ಷಸರಾಜಸ್ಯ ಸರ್ವಲಕ್ಷಣಯುಕ್ತತಾ ॥**
**ಯದ್ಯಧರ್ಮೋ ನ ಬಲವಾನ್ ಸ್ಯಾದಯಂ ರಾಕ್ಷಸೇಶ್ವರಃ ।**
**ಸ್ಯಾದಹಂ ಸ್ವರ್ಗಲೋಕಸ್ಯ ಸಶಕ್ರಸ್ಯಾಪಿ ಶಾಸಿತಾ ॥**

*ಯುದ್ಧ. ೪೯–೧೭, ೧೮*

ದಶಕಂಠನ ಸಭೆಯಲ್ಲಿ ಹನುಮಂತನು ಆತನಿಗೆ ಮಾಡಿದ ಹಿತೋಪದೇಶವು ಪ್ರಭಾವಪೂರ್ಣವಾಗಿ ಅರ್ಥವತ್ತಾಗಿದೆ. ಹನುಮಂತನ ವಾಗ್ಮಿತೆಗೆ ಇದೂ ಒಂದು ಉದಾಹರಣೆಯಾಗಿದೆ. ಯಾವ ಅಂಜಿಕೆಯೂ ಇಲ್ಲದೆ ದಿಟ್ಟತನದಿಂದ ರಾವಣನಿಗೆ ಬುದ್ಧಿಹೇಳುತ್ತಾನೆ. "ಮಹಾಪ್ರಾಜ್ಞನಾದ ನೀನು ಧರ್ಮತತ್ತ್ವವನ್ನರಿತವನು. ತಪಸ್ಸನ್ನಾಚರಿಸಿದವನು. ನೀನು ಪರಸ್ತ್ರೀಯರನ್ನು ಪೀಡಿಸುವುದು ಯುಕ್ತವಲ್ಲ" ಎಂದು ನುಡಿಯುತ್ತಾನೆ. ರಾವಣನು ಜಗ್ಗದಿದ್ದಾಗ ಶ್ರೀರಾಮನ ಪರಾಕ್ರಮವನ್ನು ವರ್ಣಿಸಿ ರಾವಣನಿಗೆ ಭೀತಿಯನ್ನುಂಟುಮಾಡಲು ಪ್ರಯತ್ನಿಸುತ್ತಾನೆ. ನೀನು ಮಾಡಿದ ತಪಸ್ಸಿನ ಪುಣ್ಯಫಲವನ್ನೀಗ ಅನುಭವಿಸುತ್ತಿದ್ದೀಯೆ. ಹಾಗೆಯೇ ಪಾಪದ ಫಲವನ್ನೂ ಅನುಭವಿಸಬೇಕಲ್ಲ! ಅದರ ಕಾಲ ಈಗ

ಬಂದಂತೆ ಕಾಣುತ್ತದೆ. ಪುಣ್ಯಕಾರ್ಯವು, ಎಸಗಿದ ಪಾಪಕೃತ್ಯವನ್ನು ನಾಶ ಮಾಡುವುದಿಲ್ಲ! ಪಾಪದ ಖಾತೆ ಬೇರೆ! ಪುಣ್ಯದ ಖಾತೆ ಬೇರೆ! ಪಾಪದ ಫಲವನ್ನು ಅನುಭವಿಸಲೇಬೇಕು'' ಎಂದು ತಿಳಿವಳಿಕೆ ಕೊಡುತ್ತಾನೆ. ''ಯಾವ ಸೀತಾದೇವಿಯನ್ನು ಅಪಹರಿಸಿ ತಂದಿದ್ದೀಯೋ ಅವಳು ಕಾಮಿನಿಯಲ್ಲ, ಸರ್ವಲಂಕಾವಿನಾಶಿನಿಯಾದ ಕಾಳರಾತ್ರಿಯೆಂದು ತಿಳಿ' ಎಂದು ಎಚ್ಚರಿಸುತ್ತಾನೆ. ಶ್ರೀರಾಮನ ದಾಸನೂ ದೂತನೂ ವಾನರನೂ ಆದ ನನ್ನ ಮಾತನ್ನಾದರೂ ಕೇಳು. ಶ್ರೀರಾಮನ ಸಾಮರ್ಥ್ಯವೇನೆಂದು ಬಗೆದಿದ್ದೀಯೆ? ಈ ಚರಾಚರ ಪ್ರಪಂಚವನ್ನು ಸುಟ್ಟು ಬೂದಿಮಾಡಿ ಮತ್ತೆ ಸೃಷ್ಟಿಸುವ ಸಾಮರ್ಥ್ಯ ಅವನಿಗಿದೆ'' ಎಂದು ಭಯವನ್ನು ಮೂಡಿಸಲು ಪ್ರಯತ್ನಿಸುತ್ತಾನೆ.

ಶ್ರೀರಾಮನಿಗೆ ಸೀತಾವೃತ್ತಾಂತವನ್ನು ಕೇಳಿದಮೇಲೆ, ಆತನು ಯಾವ ಪ್ರಶ್ನೆಗಳನ್ನು ಕೇಳಬಹುದೆಂದು ಹನುಮಂತನು ಊಹಿಸಿದ್ದನೋ ಹಾಗೆಯೇ ಆಗಿಬಿಡುತ್ತದೆ. ''ಲಂಕಾನಗರದ ಕೋಟೆಕೊತ್ತಲಗಳು ಹೇಗಿವೆ? ರಕ್ಷಣಾ ವಿಧಾನವನ್ನು ಹೇಗೆ ಮಾಡಿಕೊಂಡಿದ್ದಾರೆ? ರಾವಣಸೈನ್ಯದ ಬಲಪರಾಕ್ರಮ ಗಳೇನು?'' ಎಂದು ಶ್ರೀರಾಮನೇ ಹನುಮಂತನನ್ನು ಪ್ರಶ್ನಿಸಿದ್ದಾನೆ. ಹನು ಮಂತನು ತಾನು ಕಂಡುದೆಲ್ಲವನ್ನೂ ವಿವರಿಸಿ,

**ದಗ್ಧಾ ಚ ನಗರೀ ಲಂಕಾ ಪ್ರಾಕಾರಾಶ್ಚಾವಸಾದಿತಾಃ ।**
**ಬಲೈಕದೇಶಃ ಕ್ಷಪಿತೋ ರಾಕ್ಷಸಾನಾಂ ಮಹಾತ್ಮನಾಂ ॥**

*ಯುದ್ಧ. ೩-೨೦*

ಎಂದು ಹೇಳಿದ್ದಾನೆ.

ಇಲ್ಲಿ 'ದಗ್ಧಾ ಚ ನಗರೀ ಲಂಕಾ' ಎಂದಿರುವುದನ್ನು ಗಮನಿಸಬೇಕು.

## ಎಣೆಯಿಲ್ಲದ ಸಾಹಸ

ಯುದ್ಧಕಾಂಡದಲ್ಲಿ ಹನುಮಂತನು ನಡೆಸಿದ ಸಾಹಸಕೃತ್ಯವು ಎಣೆ ಯಿಲ್ಲದ್ದು. ಧೂಮ್ರಾಕ್ಷ, ಅಕಂಪನಾದಿ ರಾಕ್ಷಸವೀರರನ್ನು ಏಕಾಕಿಯಾಗಿ ಮರ್ದಿಸಿದ. ಸಂಜೀವಿನೀ ಪರ್ವತವನ್ನು ಎರಡು ಸಲ ಹೊತ್ತು ತಂದು ರಾಮಲಕ್ಷ್ಮಣರನ್ನುಳಿಸಿದ. ಯುದ್ಧರಂಗದಲ್ಲಿ ಎಲ್ಲಿ ನೋಡಿದರೂ ಅವನ ಮೆರೆದಾಟವೇ. ಒಂದು ನಿದರ್ಶನವು ಆತನ ಅನುಪಮ ಸಾಮರ್ಥ್ಯವನ್ನು ವ್ಯಕ್ತಪಡಿಸುವುದಕ್ಕೆ ಸಾಕಾಗುತ್ತದೆ.

ರಾತ್ರಿಯುದ್ಧವನ್ನು ಇಂದ್ರಜಿತು ಆರಂಭಿಸಿದ. ಬ್ರಹ್ಮನ ವರಬಲದಿಂದ ಅದೃಶ್ಯನಾಗಿ ಆಕಾಶದಲ್ಲಿ ಸಂಚರಿಸುತ್ತ ಕಪಿಸೈನ್ಯವನ್ನು ಆಕ್ರಮಿಸಿದ. ವಾನರಸೇನೆ ತತ್ತರಿಸಿ ಹೋಯಿತು. ಸುಗ್ರೀವಾದಿಗಳು ಎಚ್ಚರದಪ್ಪಿ ಬಿದ್ದರು. ರಾಮಲಕ್ಷ್ಮಣರು ಮೂರ್ಛಿತರಾದರು. ಇಂದ್ರಜಿತುವಿನ ಮಾಯಾಶಕ್ತಿಯಿಂದ ಪಾರಾದವನೊಬ್ಬ ವಿಭೀಷಣ. ಇನ್ನೊಬ್ಬ ಹನುಮಂತ. ಇಬ್ಬರೂ ಒಂದೆಡೆ ಸೇರಿದರು. ಕತ್ತಲಲ್ಲಿ ಯಾರ ಗತಿ ಏನಾಯಿತೆಂಬುದನ್ನು ಪರೀಕ್ಷಿಸುವುದಕ್ಕಾಗಿ ಅವರಿಬ್ಬರೂ ಉಲ್ಮುಕ (ದೊಂದಿ, ಕೊಳ್ಳಿದೀಪ)ವನ್ನು ಹಿಡಿದು ಹುಡುಕುತ್ತ ಹೊರಟರು. ಒಂದು ಕಡೆ ಜಾಂಬವಂತನು ನರಳುತ್ತ ಬಿದ್ದಿರುವುದು ಕಾಣಿಸಿತು. ಅವನು ವೃದ್ಧ. ಶರಘಾತದಿಂದ ಜರ್ಜರಿತನಾಗಿದ್ದಾನೆ. ಬಳಿಗೆ ಹೋಗಿ ವಿಭೀಷಣನು "ಆರ್ಯ, ಹೇಗಿದ್ದೀಯೆ? ಶರಘಾತವೇದನೆಯು ತೀವ್ರವಾಗಿದೆಯೆ?" ಎಂದು ಕೇಳುತ್ತಾನೆ. ಧ್ವನಿಯಿಂದಲೇ ಆತನು ವಿಭೀಷಣ ನೆಂದು ಗುರುತಿಸಿ "ವಿಭೀಷಣ, ಕಣ್ಣು ಬಿಡಲಾರೆನು. ಅಂಜನಾದೇವಿಯ ಪುತ್ರನಾದ ಹನುಮಂತನು ಬದುಕಿರುವನೆ?" ಎಂದು ಕೇಳುತ್ತಾನೆ. ವಿಭೀಷಣನಿಗೆ ಆಶ್ಚರ್ಯವಾಗುತ್ತದೆ. ಅವನು "ಆರ್ಯ, ಇದೇನಿದು? ಶ್ರೀರಾಮಲಕ್ಷ್ಮಣರ ಯೋಗಕ್ಷೇಮವನ್ನು ನೀನು ಕೇಳಲಿಲ್ಲ. ಮಹಾರಾಜನಾದ ಸುಗ್ರೀವನನ್ನಾಗಲಿ, ಯುವರಾಜನಾದ ಅಂಗದನನ್ನಾಗಲಿ ಕುರಿತು ವಿಚಾರಿಸಲಿಲ್ಲ. ಹನುಮಂತನಲ್ಲಿ ಅಗಾಧವಾದ ಪ್ರೀತಿಯನ್ನು ತೋರಿಸಿಬಿಟ್ಟೆಯಲ್ಲ!" ಎನ್ನುತ್ತಾನೆ. ಆಗ ಜಾಂಬ ವಂತನು ಹೇಳಿದ್ದೇನೆಂದರೆ "ಅಪ್ಪಾ, ವಿಭೀಷಣ, ನಾನು ಹನುಮಂತನನ್ನು ಏಕೆ ವಿಚಾರಿಸಿದೆನೆಂದರೆ, ಕೇಳು. ಆ ವೀರನೊಬ್ಬನು ಬದುಕಿದ್ದರೆ ನಮ್ಮ ವಾನರಸೇನೆಯೆಲ್ಲ ಸತ್ತರೂ ಸತ್ತಹಾಗಲ್ಲ. ಅವನೇನಾದರೂ ಪ್ರಾಣವನ್ನು ಬಿಟ್ಟಿದ್ದರೆ ನಾವೆಲ್ಲವೂ ಬದುಕಿದ್ದರೂ ಸತ್ತಹಾಗೆಯೇ!". ಕೂಡಲೇ ಹನುಮಂತನು ಮುಂದೆಬಂದು ಜಾಂಬವಂತನ ಪಾದಗಳನ್ನು ಮುಟ್ಟಿ ನಮಸ್ಕರಿಸುತ್ತಾನೆ.

## ಲೋಕಸ್ವಭಾವ

ಯುದ್ಧ ಮುಗಿಯಿತು. ಶ್ರೀರಾಮನ ವಿಜಯವೃತ್ತಾಂತವನ್ನು ಸೀತಾದೇವಿಗೆ ಹನುಮಂತನು ತಿಳಿಸಿದನು. ಆನಂದದ ಸುದ್ದಿಯನ್ನು ಕೇಳಿ ದೇವಿಯು, "ವಾನರೋತ್ತಮ, ಈ ಸಂತೋಷವಾರ್ತೆಯನ್ನರುಹಿದ ನಿನಗೆ ಯಾವ ಪಾರಿ ತೋಷಕವನ್ನಿತ್ತರೂ ಅಲ್ಪವೇ. ಚಿನ್ನವನ್ನೂ ರತ್ನಗಳನ್ನೂ ಸಮಸ್ತರಾಜ್ಯವನ್ನೂ ಕೊಟ್ಟರೂ ಸಾಲದು" ಎಂದಳು. ಆಗ ಹನುಮಂತನು ಹೇಳುತ್ತಾನೆ:

"ತಾಯಿ, ಇಷ್ಟು ಒಳ್ಳೆಯ ಮಾತನ್ನಾಡಿದೆಯಲ್ಲ, ಅಷ್ಟೇ ನನಗೆ ಸಾಕು. ಅದೆಲ್ಲವನ್ನೂ ನನಗೆ ಕೊಟ್ಟಂತೆಯೇ ಆಯಿತು. ಆದರೆ ಒಂದು ಪ್ರಾರ್ಥನೆ ಇದೆ. ನಿನ್ನ ಸುತ್ತಲೂ ಈ ಕೆಟ್ಟ ರಾಕ್ಷಸಿಯರಿದ್ದಾರಲ್ಲ. ಇವರು ನಿನಗೆ ಬಹಳ ಹಿಂಸೆ ಕೊಟ್ಟಿದ್ದಾರೆ. ಆಡಬಾರದ ಮಾತುಗಳನ್ನಾಡಿದ್ದಾರೆ. ಇವರನ್ನು ದಂಡಿಸಬೇಕೆಂದು ನನಗೆ ಮನಸ್ಸಾಗಿದೆ. ಇವರನ್ನು ಪರಚಿ ಮೇಲಕ್ಕೆ ಎಸೆದು, ಕಿವಿ ಮೂಗುಗಳನ್ನು ಕಿತ್ತು, ನೆಲಕ್ಕೆ ಬಡಿದು ಚಿತ್ರಹಿಂಸೆಗಳನ್ನಿತ್ತು ಕೊಂದುಬಿಡುತ್ತೇನೆ! ನನಗೆ ಅನುಮತಿ ಕೊಡು. ಇದೇ ನಾನು ಬಯಸುವ ಪಾರಿತೋಷಕ!" ಎನ್ನುತ್ತಾನೆ. ಸೇಡುತೀರಿಸಬೇಕೆಂಬ ಮನೋಭಾವ ಲೋಕಸಾಧಾರಣವಾದದ್ದು. ಶ್ರೀರಾಮನ ಪತ್ನಿಯು ಇದನ್ನು ಎಂದಿಗಾದರೂ ಒಪ್ಪುವಳೇನು? "ಹನುಮಂತ, ಇವರು ದಾಸಿಯರು. ತಮ್ಮ ಸ್ವಾಮಿಯು ಹೇಳಿದಂತೆ ನಡೆದುಕೊಂಡಿದ್ದಾರೆ. ಅವರ ಮೇಲೆ ಕೋಪಿಸಿಕೊಳ್ಳುವುದು ಯುಕ್ತವಲ್ಲ. ನನ್ನ ಕರ್ಮಫಲವನ್ನು ನಾನು ಅನುಭವಿಸಿದೆ. 'ಸ್ವಕೃತಂ ಹ್ಯುಪಭುಜ್ಯತೇ' ಎಂದುಬಿಡುತ್ತಾಳೆ. ಸೀತೆಯ ಉದಾತ್ತಭಾವದ ಅರಿವು ಆಗ ಹನುಮಂತನಿಗೆ ಸ್ಪಷ್ಟವಾಗುತ್ತದೆ.

### ಕೀರ್ತಿಮಾಲೆ

ಶ್ರೀರಾಮಪಟ್ಟಾಭಿಷೇಕದ ಸಮಯ. ಎಲ್ಲೆಲ್ಲಿಯೂ ಸಂಭ್ರಮೋತ್ಸಾಹಗಳು ತುಳುಕುತ್ತಿವೆ. ಆನಂದತಾಂಡವ. ದೇವೇಂದ್ರನು ಸುವರ್ಣಭೂಷಿತವಾದ ಒಂದು ದಿವ್ಯ ಮುಕ್ತಾಹಾರವನ್ನು ಶ್ರೀರಾಮನಿಗೆ ಕಳಿಸಿಕೊಟ್ಟಿದ್ದಾನೆ. ಅದನ್ನವನು ಸೀತಾದೇವಿಯ ಕೊರಳಿಗೆ ಹಾಕಿದ. ಸುಗ್ರೀವಾದಿವಾನರರಿಗೆ ನಾನಾ ಪಾರಿತೋಷಕಗಳನ್ನು ಇತ್ತನು. ಹನುಮಂತನಿಗೆ ಏನನ್ನೂ ಕೊಡಲಿಲ್ಲ. ಇಲ್ಲಿದೆ ವಾಲ್ಮೀಕಿಮುನಿಗಳ ಕಾವ್ಯರಚನಾಕೌಶಲ. ಜಾನಕಿಯು ತನ್ನ ಕೊರಳಿನಿಂದ ಆ ಮುತ್ತಿನ ಸರವನ್ನು ತೆಗೆದು ಹಿಡಿದುಕೊಂಡು ಎದ್ದುನಿಂತು ಒಮ್ಮೆ ಕಪಿಸೈನ್ಯವನ್ನೂ ಒಮ್ಮೆ ತನ್ನ ಗಂಡನ ಮುಖವನ್ನೂ ನೋಡುತ್ತಿದ್ದಾಳೆ. **ಅವೈಕ್ಷತ ಹರೀನ್ ಸರ್ವಾನ್ ಭರ್ತಾರಂ ಚ ಮುಹುರ್ಮುಹುಃ** ಶ್ರೀರಾಮನು ಇಂಗಿತಜ್ಞ. ಅವಳ ಆಶಯವೇನೆಂಬುದು ತಿಳಿಯಿತು.

**ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ ।**
**ತೇಜೋ ಧೃತಿರ್ಯಶೋ ದಾಕ್ಷ್ಯಂ ಸಾಮರ್ಥ್ಯಂ ವಿನಯೋ ನಯಃ ॥**
**ಪೌರುಷಂ ವಿಕ್ರಮೋ ಬುದ್ಧಿರ್ಯಸ್ಮಿನ್ನೇತಾನಿ ನಿತ್ಯದಾ ॥**

*ಯುದ್ಧ. ೧೩೧-೮೧, ೮೨*

ಎಂದು ಹೇಳಿದ.

"ದೇವಿ, ಯಾರಲ್ಲಿ ತೇಜಸ್ಸು, ಧೈರ್ಯ, ಕೀರ್ತಿ, ದಕ್ಷತೆ, ಸಾಮರ್ಥ್ಯ, ವಿನಯ, ನೀತಿ, ಪೌರುಷ, ಪರಾಕ್ರಮ, ಬುದ್ಧಶಕ್ತಿಗಳು ಸದಾ ನೆಲೆಸಿವೆಯೋ, ಯಾರ ಕಾರ್ಯದಿಂದ ನೀನು ಸಂತುಷ್ಟಳಾಗಿದ್ದೀಯೋ ಆತನಿಗೆ ಈ ಹಾರವನ್ನು ಕೊಡು." ದೇವಿಯು ಹನುಮಂತನನ್ನು ಕರೆದು ಅವನಿಗೆ ಆ ಮುತ್ತಿನ ಸರವನ್ನಿತ್ತಳು. ಹನುಮಂತನು ಕೊರಳಲ್ಲಿ ಹಾಕಿಕೊಂಡಾಗ, ಮೇರುಪರ್ವತದ ಮೇಲೆ ಬೆಳದಿಂಗಳು ಬಿದ್ದಂತಾಯಿತು. ಬಿಳಿಯ ಮೋಡವು ಪರ್ವತದ ಮೇಲೆ ಸುಳಿದಂತಾಯಿತು.

ಲಂಕೆಯಲ್ಲಿ ಹನುಮಂತನು ಸೀತೆಯನ್ನರಸುತ್ತಿದ್ದಾಗ ಅಂತಃಪುರದಲ್ಲೆಲ್ಲಿಯೂ ಅವಳನ್ನು ಕಾಣಲಿಲ್ಲ. ಹನುಮಂತನು ಚಿಂತಾಕ್ರಾಂತನಾಗಿ, ಸೀತೆಯನ್ನು ನಾನು ಹುಡುಕಿದೆನೆಂಬ ಕೀರ್ತಿಮಾಲೆ ನನಗೆ ದೊರಕದೆ ಹೋಯಿತೆಂದು ವ್ಯಥೆಪಟ್ಟಿದ್ದನು. (ಸುಂ. ೧೩-೪೪). ಪ್ರತ್ಯಕ್ಷವಾದ ಕೀರ್ತಿಮಾಲೆ ಈಗ ಲಭಿಸಿತು.

## ಶ್ರೀರಾಮನ ಕೃತಜ್ಞತೆ – ಹನುಮಂತನ ಸರ್ವೋತ್ಕರ್ಷ

ಇನ್ನೊಂದು ದೃಶ್ಯವನ್ನು ನೋಡೋಣ. ಪಟ್ಟಾಭಿಷೇಕದ ಸಂಭ್ರಮಗಳೆಲ್ಲ ಮುಗಿದವು. ಕೆಲವು ದಿನಗಳಾದಮೇಲೆ ಸುಗ್ರೀವ, ವಿಭೀಷಣಾದಿಗಳು ತಮ್ಮ ಸ್ಥಳಕ್ಕೆ ಹಿಂದಿರುಗಲು ಸಜ್ಜಾದರು. ಶ್ರೀರಾಮನು ಅವರೆಲ್ಲರನ್ನೂ ಪ್ರಶಂಸಿಸಿ ಬೀಳ್ಕೊಟ್ಟನು. ಹನುಮಂತನನ್ನು ಆಲಿಂಗಿಸಿಕೊಂಡು "ವಾನರೋತ್ತಮ, ನೀನು ಮಾಡಿದ ಒಂದೊಂದು ಉಪಕಾರಕ್ಕೆ ನನ್ನ ಪ್ರಾಣವನ್ನರ್ಪಿಸಿದರೂ ತೀರುವುದಿಲ್ಲ. ನಿನ್ನ ಉಪಚಾರಗಳಿಗೆ ನಾನು ಸಾಲಗಾರನಾಗಿಯೇ ಉಳಿಯುತ್ತೇನೆ. ಪ್ರತ್ಯುಪಕಾರಮಾಡಿ ತೀರಿಸುತ್ತೇನೆಂದು ಹೇಳುವುದಿಲ್ಲ. ಏಕೆಂದರೆ, ಪ್ರತ್ಯುಪಕಾರ ಮಾಡುವುದಾದರೆ ನಿನಗೊಂದು ದೊಡ್ಡ ವಿಪತ್ತು ಬರಲೆಂದು ಹಾರೈಸಿದಂತಾಗುತ್ತದೆ. ನಿನಗೆ ಅಂತಹ ವಿಪತ್ತು ಬರುವುದು ಬೇಡ" ಎಂದು ಹೇಳಿ, ತನ್ನ ಕಂಠದಿಂದ ವೈಡೂರ್ಯಖಚಿತವಾದ ಹಾರವನ್ನು ಹನುಮಂತನ ಕೊರಳಿಗೆ ಹಾಕಿದನು. ಹನುಮಂತನು "ಶ್ರೀರಾಮ, ನನಗೆ ನಿನ್ನಲ್ಲಿ ಭಕ್ತಿಭಾವವು ಸದಾ ನೆಲಸಿರಲಿ. ನನ್ನ ಮನಸ್ಸು ನಿನ್ನ ಸ್ಮರಣೆಯಿಂದ ಕದಲದೆ ಇರಲಿ. ನಿನ್ನ ಚರಿತಾಮೃತವು ಎಲ್ಲಿಯವರೆಗೆ ಈ ಲೋಕದಲ್ಲಿ ವಿಶ್ರುತವಾಗಿರುವುದೋ ಅಲ್ಲಿಯವರೆಗೆ ಬದುಕಿ ಅದನ್ನು ಕೇಳಿ ಆನಂದಿಸುತ್ತಿರಬೇಕೆಂದು ನನ್ನ

ಅಪೇಕ್ಷೆ'' ಎಂದನು. ಶ್ರೀರಾಮನು 'ತಥಾಸ್ತು' ಎಂದು ನುಡಿದನು (ಉತ್ತರ. ಸರ್ಗ. ೪೦.)

## ಉಪಸಂಹಾರ

ಆಂಜನೇಯನು ಭಕ್ತಶಿರೋಮಣಿಗಳಲ್ಲೊಬ್ಬನೆಂದು ವಿಖ್ಯಾತನಾಗಿದ್ದಾನೆ. ಧ್ರುವ, ಪ್ರಹ್ಲಾದಾದಿಗಳಂತೆ ಬರಿಯ ನಾಮಜಪದ ಭಕ್ತನಲ್ಲ ಇವನು. ತನ್ನ ಬುದ್ಧಿಬಲಗಳೆಲ್ಲವನ್ನೂ ಶ್ರೀರಾಮನ ಕಾರ್ಯಕ್ಕಾಗಿ ವಿನಿಯೋಗಿಸಿ, ಮಹತ್ತರವಾದ ಸೇವೆಯನ್ನು ಸಲ್ಲಿಸಿದವನು ಈತ. ಆಂಜನೇಯನಿಲ್ಲದೆ ಶ್ರೀರಾಮಾಯಣವು ಹೇಗೆ ನಡೆದೀತೆಂದು ಊಹಿಸಲೂ ಶಕ್ಯವಿಲ್ಲ. ಅವನು ಶ್ರೀರಾಮಭಕ್ತನು ಮಾತ್ರವಲ್ಲದೆ ಭಾರತೀಯರಿಗೆ ದೇವತಾಸ್ವರೂಪನೂ ಆಗಿದ್ದಾನೆ. ಈ ದೇಶದ ಹಳ್ಳಿಹಳ್ಳಿಗಳಲ್ಲಿಯೂ ಹನುಮಂತನ ಗುಡಿಯಿದೆ. ಅವನ ಅರ್ಚನೆ ಪ್ರತಿದಿನ ನಡೆಯುತ್ತದೆ. ಹನುಮಂತನನ್ನು ಉಪಾಸನೆ ಮಾಡುವ ಭಕ್ತರಿದ್ದಾರೆ. ಮಂತ್ರಶಾಸ್ತ್ರದಲ್ಲಿ ಸಹ ಆತನ ಉಪಾಸನಾಪ್ರಕಾರಗಳು ಉಕ್ತವಾಗಿವೆ. ಸಹಸ್ರನಾಮ, ಅಷ್ಟೋತ್ತರನಾಮಗಳು ರಚಿತವಾಗಿವೆ. ಚಿಕ್ಕ ಮಕ್ಕಳ ಕೊರಳಲ್ಲಿ ಹನುಮಂತನ ಮುದ್ರೆಯಿರುವ ತಾಳಿಯನ್ನು ಕಟ್ಟುವ ಸಂಪ್ರದಾಯ ನಮ್ಮಲ್ಲಿದೆ. ಹನುಮಂತನಿಲ್ಲದ ಶ್ರೀರಾಮನ ದೇವಾಲಯವಿಲ್ಲ. ಚಿತ್ರಪಟವಿಲ್ಲ. ಆದರೆ ಶ್ರೀರಾಮನಿಲ್ಲದ ಹನುಮಂತನ ಮೂರ್ತಿ ಇದೆ. ಚಿತ್ರಪಟವಿದೆ. ಭಕ್ತಿ, ಶ್ರದ್ಧೆ, ಕಾರ್ಯದಕ್ಷತೆ, ಉತ್ಸಾಹ, ಧರ್ಮನಿಷ್ಠೆ, ಪರಾಕ್ರಮ, ನಯ, ವಿನಯಾದಿ ಗುಣಗಳಲ್ಲಿ ಹನುಮಂತನಿಗೆ ಸದೃಶನಾದವನು ಹನುಮಂತನೊಬ್ಬನೇ.

ಬಹಳ ವರ್ಷಗಳ ಹಿಂದೆ 'ಜಯಕರ್ನಾಟಕ' ಎಂಬ ಮಾಸಪತ್ರಿಕೆಯಲ್ಲಿ ಒಂದು ಲೇಖನವನ್ನು ಓದಿದ್ದೆ. ಅದರ ಸಾರಾಂಶವಿಷ್ಟು: ರಾಮ, ಲಕ್ಷ್ಮಣ-ಮೊದಲಾದವರು ಆರ್ಯಜನಾಂಗದವರು. ಹನುಮಂತ, ಸುಗ್ರೀವ-ಮೊದಲಾದವರು ದ್ರಾವಿಡರು. ವಾಲ್ಮೀಕಿ ಆರ್ಯಪಕ್ಷಪಾತಿ. ದ್ರಾವಿಡರನ್ನು ಕೀಳಾಗಿ ಕಂಡಿದ್ದಾನೆ. ಹನುಮಂತನನ್ನು ಕಪಿಯೆಂದೂ ರಾಮನ ಸೇವಕನೆಂದೂ ವರ್ಣಿಸಿದ್ದಾನೆ. ಹನುಮಂತನ ನಿಜವಾದ ಹೆಸರು ಹಣಮಪ್ಪ. ಇವನೇ ಕಥೆಯಲ್ಲಿ ಮುಖ್ಯನಾದ್ದರಿಂದ ಇದು ಹಣಮಾಯಣ, ರಾಮಾಯಣವಲ್ಲ. ವಾಲ್ಮೀಕಿಯದು ಕುತ್ಸಿತದೃಷ್ಟಿ-ಎಂದು.

ಆರ್ಯರು ಹೊರಗಿಂದ ಬಂದವರೆಂಬ ಆರ್ಯದ್ರಾವಿಡವಾದದ

ಮೂರ್ಖಾಲಾಪ ಒತ್ತಟ್ಟಿಗಿರಲಿ. ವಾಲ್ಮೀಕಿಮುನಿಗಳಿಂದಲೇ ಹನುಮಂತನು ವಿಖ್ಯಾತನಾಮಧೇಯನಾಗಿ ದೇವತಾಸ್ಥಾನಕ್ಕೆ ಏರಿದ್ದಾನೆಂಬುದೂ ರಾಮಾಯಣವನ್ನು ವಾಲ್ಮೀಕಿಮುನಿಗಳು ಬರೆಯದಿದ್ದರೆ ಈ 'ಹಣಮಪ್ಪ'ನ ಹೆಸರನ್ನು ಸಹ ನಾವು ಕೇಳುತ್ತಿರಲಿಲ್ಲವೆಂಬುದೂ ಲೇಖಕಮಹಾಶಯರಿಗೆ ಹೊಳೆಯಲಿಲ್ಲ.

**ಉಲ್ಲಂಘ್ಯ ಸಿಂಧೋಃ ಸಲಿಲಂ ಸಲೀಲಂ**
**ಯಃ ಶೋಕವಹ್ನಿಂ ಜನಕಾತ್ಮಜಾಯಾಃ ।**
**ಆದಾಯ ತೇನೈವ ದದಾಹ ಲಂಕಾಂ**
**ನಮಾಮಿ ತಂ ಪ್ರಾಂಜಲಿರಾಂಜನೇಯಮ್ ॥**

*

೪

# ವಿಭೀಷಣ

ಶ್ರೀಮದ್ರಾಮಾಯಣದಲ್ಲಿ ಅಣ್ಣತಮ್ಮಂದಿರ ಮೂರು ಗುಂಪನ್ನು ನಾವು ನೋಡುತ್ತೇವೆ. ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನರದೊಂದು. ವಾಲಿ ಸುಗ್ರೀವರದು ಇನ್ನೊಂದು. ರಾವಣ, ಕುಂಭಕರ್ಣ, ವಿಭೀಷಣರದು ಮತ್ತೊಂದು. ಸೋದರರನ್ನು ದಾಯಾದರೆಂದೂ ದಾಯಾದಿಗಳೆಂದೂ ಧರ್ಮಶಾಸ್ತ್ರದಲ್ಲಿ ವ್ಯವಹಾರವಿದೆ. ದಾಯವೆಂದರೆ ಸಂದಾಯವಾಗಬೇಕಾದ ಪಿತ್ರಾರ್ಜಿತದ ಒಂದು ಭಾಗ. 'ದಾಯಮತ್ತೀತಿ ದಾಯದಃ'. ದಾಯಕ್ಕೆ ಭಾಗಿಯಾದವನೆಂದರ್ಥ. ದಾಯಾದಮಾತ್ಸರ್ಯ ಎನ್ನುವುದೂ ಪ್ರಸಿದ್ಧವಾದ ದುರ್ಗುಣ.

ಶ್ರೀರಾಮನೇ ಮೊದಲಾದ ಅಣ್ಣತಮ್ಮಂದಿರಲ್ಲಿ ಮಾತ್ಸರ್ಯದ ಸುಳಿವೂ ಇರಲಿಲ್ಲ. ಅವರ ಸೌಭ್ರಾತ್ರವೆಂಬುದು ವಿಖ್ಯಾತವಾದದ್ದು. ಮಂಥರ, ಕೈಕೇಯಿಯರಿಂದ ಅದು ಕೃತಕವಾಗಿ ಕಾಣಿಸಿತು. ಕಾಣಿಸಿ ಮರೆಯಾಯಿತು. ಅಷ್ಟರಲ್ಲಿ ಒಂದು ಅನರ್ಥವೇ ನಡೆದುಹೋಗಿತ್ತು. ಅಪವಾದಕ್ಕೆ ಗುರಿಯಾದ ಭರತನು ಸತ್ತ್ವಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಮೂಸೆಯಲ್ಲಿ ಕರಗಿಸಿದ ಅಪರಂಜಿಯಂತೆ, ಶುಭ್ರನಾಗಿ ಹೊರಬಂದನು. ವಾಲಿಸುಗ್ರೀವರ ವೈರವು ವಾಲಿಯ ವಧೆಯಲ್ಲಿ ಪರಿಣಮಿಸಿತು. ಇನ್ನು ರಾವಣವಿಭೀಷಣರ ಪರಸ್ಪರ ದ್ವೇಷಕ್ಕೆ ಕಾರಣ ಅತ್ಯಲ್ಪ. ಧರ್ಮ–ಅಧರ್ಮಗಳ ವಿಷಯದಲ್ಲಿದ್ದ ಭಿನ್ನಾಭಿಪ್ರಾಯವು ಅಷ್ಟು ದೊಡ್ಡದಾಗಿ ಪರಿಣಮಿಸಿದ್ದು ಆಶ್ಚರ್ಯವೇ ಸರಿ. ಅದಕ್ಕೆ ಕಾರಣವು ದಾಯಾದತನವೆಂಬ ಸ್ಫೋಟಕಸಾಮಗ್ರಿ.

ಭ್ರಾತೃ ಎಂಬ ಶಬ್ದಕ್ಕೆ ಸಹೋದರನೆಂದು ಅರ್ಥ. ಭ್ರಾತೃವ್ಯ ಎಂದರೆ ಶತ್ರುವೆಂದರ್ಥ! 'ವ್ಯನ್‌ಸಪತ್ನೇ' ಎಂಬ ಪಾಣಿನಿಸೂತ್ರದಿಂದ ಭ್ರಾತೃವ್ಯ ಶಬ್ದವು ನಿಷ್ಪನ್ನವಾಗಿದೆ. ದಾಯಾದಮಾತ್ಸರ್ಯವೆಂಬುದು ಅನಾದಿಯಾಗಿ ಬಂದದ್ದು. ದೇವಾಸುರರು ಭ್ರಾತೃಗಳಾದರೂ ಪರಸ್ಪರ ಭ್ರಾತೃವ್ಯರಾಗಿಬಿಟ್ಟರು.

ಪ್ರಕೃತ, ಉಪನ್ಯಾಸದ ವಿಷಯ ವಿಭೀಷಣನ ಪಾತ್ರಚಿತ್ರಣ. ಈತನ ವಿಚಾರವಾಗಿ ಎರಡು ಅಭಿಪ್ರಾಯಗಳಿವೆ. ವಿಭೀಷಣನು ವಿಷ್ಣುಭಕ್ತ.

ಶ್ರೀರಾಮನಿಗೆ ಶರಣಾಗತನಾಗಿ ಬಂದವನು. ಶರಣಾಗತಿಯ ತತ್ತ್ವವು ಇಲ್ಲಿ ಪ್ರಕಾಶಿತವಾಗಿದೆ –ಎಂದು ವಿಶಿಷ್ಟಾದ್ವೈತಿಗಳು ಹೇಳಿದ್ದಾರೆ. ಇನ್ನೊಂದು ಆಧುನಿಕ ವಿಮರ್ಶಕರ ಅಭಿಪ್ರಾಯ. ವಿಭೀಷಣನು ಅಣ್ಣನಾದ ರಾವಣನ ಕಷ್ಟಕಾಲದಲ್ಲಿ ಅವನನ್ನು ತೊರೆದುಬಂದವನು. ಅಣ್ಣನ ಶತ್ರುವಿಗೆ ಸಹಾಯ ಮಾಡಿದವನು. ಆತನು ಭ್ರಾತೃದ್ರೋಹಿಯೂ ರಾಜ್ಯದ್ರೋಹಿಯೂ ಆದ ಸ್ವಾರ್ಥಿ–ಎಂದು ಇವರ ಹೇಳಿಕೆ. ಇದನ್ನೀಗ ವಿಚಾರಮಾಡೋಣ.

ವಿಭೀಷಣನ ಪೂರ್ವಕಥೆಯನ್ನರಿಯಬೇಕಾದರೆ ಮೊದಲು ನಾವು ಉತ್ತರಕಾಂಡಕ್ಕೆ ಹೋಗಬೇಕಾಗುತ್ತದೆ. ರಾವಣ, ಕುಂಭಕರ್ಣ, ವಿಭೀಷಣ, ಶೂರ್ಪಣಖೆ–ಈ ನಾಲ್ವರು ವಿಶ್ರವಸ್ಸೆಂಬ ಋಷಿಯ ಮಕ್ಕಳು. ಕೈಕಸಿಯೆಂಬ ರಾಕ್ಷಸಿಯ ಗರ್ಭದಿಂದ ಜನಿಸಿದವರು. ವಿಭೀಷಣನು ಎಲ್ಲರಿಗಿಂತ ಕಿರಿಯನು. ಅವರಲ್ಲಿ ವಿಭೀಷಣನೊಬ್ಬನು ತನಗೆ ಅನುರೂಪನಾದ ಮಗನೂ ಧರ್ಮಾತ್ಮನೂ ಆಗುವನೆಂದು ವಿಶ್ರವಸ್ಸು ಭವಿಷ್ಯವನ್ನು ನುಡಿದಿದ್ದನು. ವಿಭೀಷಣನು ಹುಟ್ಟಿದಾಗ ದೇವತೆಗಳು ಸಂತೋಷದಿಂದ ಪುಷ್ಪವೃಷ್ಟಿಯನ್ನು ಸುರಿಸಿದರು. ಅವನು ಮಹಾ ಸತ್ತ್ವ; ಧರ್ಮಾತ್ಮ; ಧರ್ಮನಿಷ್ಠ. ವೇದಾಧ್ಯಯನನಿರತನೂ ವಿಜಿತೇಂದ್ರಿಯನೂ ಆಗಿದ್ದನೆಂದು ವರ್ಣನೆ ಇದೆ.

**ವಿಭೀಷಣಸ್ತು ಧರ್ಮಾತ್ಮಾ ನಿತ್ಯಂ ಧರ್ಮೇ ವ್ಯವಸ್ಥಿತಃ ।**
**ಸ್ವಾಧ್ಯಾಯನಿಯತಾಹಾರ ಉವಾಸ ವಿಜಿತೇಂದ್ರಿಯಃ ॥**

*ಉತ್ತರ. ೯–೩೯.*

ಅನಂತರ ಈ ಸಹೋದರರು ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ತಮಗೆ ಬೇಕಾದ ವರಗಳನ್ನು ಪಡೆದುಕೊಂಡರು. ವಿಭೀಷಣನು ಬ್ರಹ್ಮನನ್ನು ಕೇಳಿ ಪಡೆದುಕೊಂಡ ವರ ಇದು–

**ಪರಮಾಪದ್ಗತಸ್ಯಾಪಿ ಧರ್ಮೇ ಮಮ ಮತಿರ್ಭವೇತ್ ।**
**ಅಶಿಕ್ಷಿತಂ ಚ ಬ್ರಹ್ಮಾಸ್ತ್ರಂ ಭಗವನ್ ಪ್ರತಿಭಾತು ಮೇ ॥**
**ಯಾ ಯಾ ಮೇ ಜಾಯತೇ ಬುದ್ಧಿರ್ಯೇಷು ಯೇಷ್ವಾಶ್ರಮೇಷು ಚ ।**
**ಸಾ ಸಾ ಭವತು ಧರ್ಮಿಷ್ಠಾ ತಂ ತು ಧರ್ಮಂ ಚ ಪಾಲಯೇ ॥**

*ಉತ್ತರ ೧೦–೩೧, ೩೨*

"ಬ್ರಹ್ಮದೇವ, ಎಂತಹ ಆಪತ್ತು ಒದಗಿದಾಗಲೂ ನನಗೆ ಧರ್ಮದಲ್ಲಿ ನಿಷ್ಠೆ

ಇರಲಿ. ಗುರೂಪದೇಶವಿಲ್ಲದಿದ್ದರೂ ಬ್ರಹ್ಮಾಸ್ತ್ರವು ನನಗೆ ದೊರೆಯಲಿ. ನಾನು ಯಾವ ಯಾವ ಆಶ್ರಮದಲ್ಲಿದ್ದರೂ ಧರ್ಮಿಷ್ಠವಾದ ಬುದ್ಧಿಯು ಮಾತ್ರ ನನಗೆ ಬರಲಿ. ಅಂತಹ ಧರ್ಮವನ್ನು ಪಾಲಿಸುವ ಶಕ್ತಿಯೂ ದೊರೆಯಲಿ" ಎಂದು ಈ ಶ್ಲೋಕಗಳ ತಾತ್ಪರ್ಯ. ಬ್ರಹ್ಮದೇವನು ಆ ವರಗಳನ್ನು ಅನುಗ್ರಹಿಸಿದನಲ್ಲದೆ, ಅವನ ಧರ್ಮಬುದ್ಧಿಯಿಂದ ಸಂಪ್ರೀತನಾಗಿ ಅಮರತ್ವವನ್ನೂ ಅನುಗ್ರಹಿಸಿದನು. ವಿಭೀಷಣನು ಚಿರಂಜೀವಿಯಾದನು. ಇಷ್ಟು ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಳ್ಳೋಣ. ಅಲ್ಲದೆ ಅರಣ್ಯಕಾಂಡದಲ್ಲಿ ಶೂರ್ಪಣಖೆಯು ಶ್ರೀರಾಮನಿಗೆ ತನ್ನ ಸಹೋದರರ ವಿಷಯವಾಗಿ ಹೇಳುತ್ತ-

**ವಿಭೀಷಣಸ್ತು ಧರ್ಮಾತ್ಮಾ ನ ತು ರಾಕ್ಷಸಚೇಷ್ಟಿತಃ ॥**

*ಅರಣ್ಯ ೧೭-೨೪*

ಎಂದಿದ್ದಾಳೆ. "ವಿಭೀಷಣನಾದರೋ ಧರ್ಮಾತ್ಮನಾಗಿದ್ದಾನೆ. ಅವನು ರಾಕ್ಷಸರ ಚೇಷ್ಟೆಯನ್ನು ಮಾಡತಕ್ಕವನಲ್ಲ!"

## ಹನುಮಂತನ ಪ್ರಸಂಗದಲ್ಲಿ

ಇಂದ್ರಜಿತು ಹನುಮಂತನನ್ನು ಬಂಧಿಸಿ ರಾವಣನೆದುರಿಗೆ ತಂದು ನಿಲ್ಲಿಸಿದನು. ಹನುಮಂತನನ್ನು ಕೊಲ್ಲಬೇಕೆಂದು ರಾವಣನ ಆಜ್ಞೆಯಾಯಿತು. ಅದನ್ನು ತಡೆದವನು ವಿಭೀಷಣ. ಅಣ್ಣನಿಗೆ ತುಂಬ ನಯ ವಿನಯಗಳಿಂದಲೇ ಬುದ್ಧಿಹೇಳಿ ದೂತವಧೆಯು ರಾಜನೀತಿಯಲ್ಲವೆಂದು ತಿಳಿಸುತ್ತಾನೆ. ರಾವಣನನ್ನು 'ಧರ್ಮಾರ್ಥವಿನೀತಬುದ್ಧಿ'ಯೆಂದು ಹೊಗಳುತ್ತಾನೆ. ರಾವಣನು ವಿಭೀಷಣನ ಮಾತನ್ನು ಮನ್ನಿಸಿ 'ಸಮ್ಯಗುಕ್ತಂ ಹಿ ಭವತಾ ದೂತವಧ್ಯಾ ವಿಗರ್ಹಿತಾ' ಎಂದು ನುಡಿದು, ಹನುಮಂತನ ಬಾಲಕ್ಕೆ ಬೆಂಕಿಹಚ್ಚಿ ಸುಡಬೇಕೆಂದು ಆಜ್ಞಾಪಿಸುತ್ತಾನೆ.

ಇದನ್ನು ಗಮನಿಸಿದರೆ ರಾವಣವಿಭೀಷಣರು ಸಹೋದರಪ್ರೀತಿಯಿಂದಲೇ ವರ್ತಿಸುತ್ತಿದ್ದರೆಂದು ತಿಳಿದುಬರುತ್ತದೆ. ರಾವಣನು ಸೀತೆಯನ್ನಪಹರಿಸಿ ತಂದದ್ದು ವಿಭೀಷಣನಿಗೆ ಗೊತ್ತಿತ್ತು. "ಅಣ್ಣನು ಇಂತಹ ಎಷ್ಟೋ ದುರಾಚಾರಗಳನ್ನು ಮಾಡುತ್ತಿದ್ದಾನೆ. ಅದೆಲ್ಲವನ್ನೂ ತಡೆಯುವುದು ತನ್ನಿಂದಾಗದು" ಎಂದು ಅವನು ತಟಸ್ಥನಾಗಿರಬೇಕು. ಸೀತಾದೇವಿಗೆ ಸಮಾಧಾನಹೇಳಿ ಸಂತೈಸು

ವುದಕ್ಕೋಸ್ಕರ ತನ್ನ ಪತ್ನಿಯಾದ ಸರಮೆಯನ್ನು ಆಕೆಯ ಬಳಿಗೆ ಆಗಾಗ ಕಳಿಸುತ್ತಿದ್ದನು.

## ಮಂತ್ರಾಲೋಚನಾ ಸಭೆಯಲ್ಲಿ

ಲಂಕೆಯನ್ನು ಸುಟ್ಟುಹಾಕಿ ಹನುಮಂತನು ಯಶಸ್ವಿಯಾಗಿ ಹಿಂದಿರುಗಿ ಹೋದಮೇಲೆ ರಾವಣನಿಗೆ ಮೊದಲನೆಯ ಬಿಸಿ ಮುಟ್ಟುತ್ತದೆ. ಆಪ್ತರಾದ ರಾಕ್ಷಸರ ಸಭೆಯನ್ನು ಸೇರಿಸಿ ಮುಂದೇನು ಮಾಡಬೇಕೆಂದು ಅವರ ಸಲಹೆಯನ್ನು ಕೇಳಿದನು. ಅವನು ಲಜ್ಜೆಯಿಂದ ತಲೆತಗ್ಗಿಸಿ ಮಾತಾಡುತ್ತಿದ್ದನು. ರಾಕ್ಷಸರೆಲ್ಲರೂ ತಮ್ಮ ಪರಾಕ್ರಮಗಳನ್ನು ವರ್ಣಿಸಿ ರಾವಣನಿಗೆ ಸಮಾಧಾನ ಹೇಳಿದರು. "ಇದೋ ಈಗಲೇ ಹೋಗಿ ರಾಮಲಕ್ಷ್ಮಣಾದಿಗಳನ್ನು ಹನುಮಂತ ನನ್ನು ಕೊಂದುಹಾಕಿ ಬರುತ್ತೇವೆಂದು ಕೂಗಾಡಿದರು. ಈ ಸಮಯದಲ್ಲಿ ಒಂದು ಕನ್ನಡಪದ್ಯವು ಸ್ಮರಣೆಗೆ ಬರುತ್ತದೆ. ಮಾಧ್ಯಮಿಕ ಶಾಲೆಯಲ್ಲೋದುವಾಗ ಪಠ್ಯಪುಸ್ತಕದಲ್ಲಿದ್ದ ಪದ್ಯವಿದು. ವಿಭೀಷಣನು ಹೇಳುತ್ತಾನೆ–

ಹೋಹೊ ಗಜಬಜಿದೇಕೆ ಮಾಮಾ
ಸಾಹಸಿಗಳಹುದಹುದು ಬಲ್ಲೆವು
ಬೇಹು ಕಪಿ ತಾನೊಂದು ಬಂದೀಪುರವನನಲಂಗೆ ।
ಆಹುತಿಯನಿತ್ತುರುಹಿ ದನುಜ ಸ
ಮೂಹವನು ಕೊಲುವಾಗ ನಿಮ್ಮಯ
ಬಾಹುಬಲವೇನಾಯ್ತು ನಾಚಿಕೆಯಿಲ್ಲ ನಿಮಗೆಂದ ॥

ರಾಕ್ಷಸರು ತೆಪ್ಪಗಾದರು. ವಿಭೀಷಣನು ರಾವಣನಿಗೆ ಕೈಮುಗಿದು ಹೇಳಿದ್ದೇನೆಂದರೆ, "ಮಹಾರಾಜ, ಸಾಮದಾನಭೇದದಂಡವೆಂಬ ನಾಲ್ಕು ಉಪಾಯಗಳಲ್ಲಿ ಮೊದಲನೆಯ ಮೂರು ಫಲಕಾರಿಯಾಗದಿದ್ದಾಗ ಮಾತ್ರ ದಂಡೋಪಾಯವನ್ನು ಕೈಗೊಳ್ಳಬೇಕೆಂದು ರಾಜನೀತಿಶಾಸ್ತ್ರವಿದೆ. ಯುದ್ಧವು ರಾಮನೊಡನೆ ಸುಲಭಸಾಧ್ಯವಲ್ಲ. ಒಂದು ಕಪಿಯೇ ಸಮುದ್ರವನ್ನು ಹಾರಿ ಬಂದು ನಮ್ಮೆಲ್ಲರ ಕಣ್ಣೆದುರಿಗೆ ಇಷ್ಟು ಅನರ್ಥಗಳನ್ನು ಮಾಡಿಹೋಯಿತಲ್ಲ, ಕಪಿಸೈನ್ಯದ ಬಲವೆಷ್ಟಿರಬೇಕು? ಇದನ್ನು ಊಹಿಸುವುದಕ್ಕಾದರೂ ಸಾಧ್ಯವಾದೀತೆ? ರಾಮಲಕ್ಷ್ಮಣರು ಅಸಾಧಾರಣ ಪರಾಕ್ರಮಿಗಳೆಂಬುದೂ ನಮಗೆ ಗೊತ್ತಾಗಿದೆ. ಖರದೂಷಣಾದಿಗಳೆಲ್ಲರನ್ನೂ ರಾಮನೊಬ್ಬನೇ ಸಂಹರಿಸಿದನಲ್ಲವೆ? ಇಷ್ಟಾಗಿ

ಈ ಯುದ್ಧವಾದರೂ ಏತಕ್ಕೆ? ನಮ್ಮ ತಪ್ಪಿಗಾಗಿ ಆತನು ಯುದ್ಧಕ್ಕೆ ಸಿದ್ಧನಾಗಿ ಬರಬೇಕಾಯಿತು.

**ಅಯಶಸ್ಯಮನಾಯುಷ್ಯಂ ಪರದಾರಾಭಿಮರ್ಶನಂ ।**
**ಅರ್ಥಕ್ಷಯಕರಂ ಘೋರಂ ಪಾಪಸ್ಯ ಚ ಪುನರ್ಭವಮ್ ॥**

*ಯುದ್ಧ. ೯–೧೫*

"ಪರಸ್ತ್ರೀಯರನ್ನು ಕೆಣಕುವುದರಿಂದ ಕೀರ್ತಿಗೆ ಭಂಗವಾಗುತ್ತದೆ. ಆಯುಸ್ಸು ಕಡಮೆಯಾಗುತ್ತದೆ. ಇದು ಘೋರವಾದ ಪಾಪಕೃತ್ಯ. ಎಲ್ಲ ಪುರುಷಾರ್ಥಗಳಿಗೆ ಹಾನಿಯಾಗುತ್ತದೆ."

ಜಾನಕಿಯಿಂದಲ್ಲವೆ ನಮಗೀಗ ದೊಡ್ಡ ಸಮಸ್ಯೆ ಎದುರಾಗಿರುವುದು? ಅವಳನ್ನು ರಾಮನಿಗೆ ಒಪ್ಪಿಸಿಬಿಡು. ಅಣ್ಣ, ನಿನ್ನನ್ನು ಬೇಡಿಕೊಳ್ಳುತ್ತೇನೆ. ನಿನ್ನ ತಮ್ಮನಾಗಿ ವಿಜ್ಞಾಪಿಸುತ್ತೇನೆ. ಜಾನಕಿಯನ್ನು ರಾಮನಿಗೆ ಕೊಟ್ಟುಬಿಡು" ಎಂದು ವಿಧವಿಧವಾಗಿ ವಿಭೀಷಣನು ಬೇಡಿಕೊಂಡನು. ರಾವಣನು ಒಂದು ಮಾತನ್ನೂ ಆಡದೆ ಸಭೆಯನ್ನು ವಿಸರ್ಜಿಸಿ ಅಂತಃಪುರಕ್ಕೆ ಹೊರಟುಹೋದನು.

'ರಾಜಸಭೆಯಲ್ಲಿ ತಾನಾಡಿದ ಹಿತೋಕ್ತಿಯು ಅಣ್ಣನಿಗೆ ಹಿಡಿಸಲಿಲ್ಲ. ಪ್ರತ್ಯೇಕವಾಗಿ ಕಂಡು ಇನ್ನೊಮ್ಮೆ ಮಾತಾಡಬೇಕು' ಎಂದು ನಿರ್ಧರಿಸಿ ಮಾರನೇ ದಿನ ಪ್ರಾತಃಕಾಲವೇ ವಿಭೀಷಣನು ರಾವಣನ ಭವನಕ್ಕೆ ಹೋಗುತ್ತಾನೆ. ಅಲ್ಲಿ ಮತ್ತೆ ರಾವಣನನ್ನು ಕಂಡು "ಅಣ್ಣ, ನಮ್ಮ ನಗರದಲ್ಲಿ ಬಹಳ ಅಪಶಕುನಗಳಾಗುತ್ತಿವೆ. ವೈದೇಹಿಯನ್ನು ನೀನು ತಂದ ದಿನದಿಂದ ಈ ಅಶುಭ ಚಿಹ್ನೆಗಳು ತಲೆದೋರಿವೆ. ಅಗ್ನಿಶಾಲೆಯಲ್ಲಿ ಹವಿಸ್ಸನ್ನು ಸುರಿದಾಗ ಅಗ್ನಿಯು ಜ್ವಲಿಸುವುದಿಲ್ಲ. ಹಸುಗಳ ಹಾಲು ಒಡೆದು ಹೋಗುತ್ತಿದೆ. ಕುದುರೆಗಳು ದೈನ್ಯದಿಂದ ನಿಷ್ಕಾರಣವಾಗಿ ಕೆನೆಯುತ್ತಿವೆ" ಎಂದು ಕೆಲವು ಅಶುಭ ಚಿಹ್ನೆಗಳನ್ನು ಪಟ್ಟಿಮಾಡುತ್ತಾನೆ. 'ಜಾನಕಿಯನ್ನು ರಾಮನಿಗೆ ಒಪ್ಪಿಸಿಬಿಡು' ಎಂದು ಬೇಡಿಕೊಳ್ಳುತ್ತಾನೆ. 'ನಾನು ಅಜ್ಞಾನದಿಂದಲೋ ಅವಿವೇಕದಿಂದಲೋ ಈ ಮಾತನ್ನಾಡುತ್ತಿರಬಹುದು. ಮಹಾರಾಜ, ಇದು ಪಥ್ಯವಾದ ನುಡಿ ಹೌದು. ನನ್ನಲ್ಲಿ ತಪ್ಪನ್ನೆಣಿಸಬೇಡ' ಎಂದು ವಿನಯದಿಂದ ನಿವೇದಿಸುತ್ತಾನೆ. ರಾವಣನ ಉತ್ತರ ಒಂದೇ "ನನಗೆ ಯಾರ ಹೆದರಿಕೆಯೂ ಇಲ್ಲ. ಸೀತೆ ಎಂದೆಂದಿಗೂ ಬಿಟ್ಟುಕೊಡುವುದಿಲ್ಲ. ರಾಮನಿಗೆ ಅವಳು ದೊರೆಯುವುದಿಲ್ಲ. ನೀನು ಹೊರಟುಹೋಗು" ಎಂದು ನಿಷ್ಠುರವಾಗಿ ತಿಳಿಸಿಬಿಡುತ್ತಾನೆ.

## ಎರಡನೆಯ ಮಂತ್ರಾಲೋಚನಾಸಭೆ

ರಾವಣನು ಮತ್ತೊಮ್ಮೆ ಸಭೆಯನ್ನು ಸೇರಿಸುತ್ತಾನೆ. ಸಮಸ್ತ ಸೇನಾಪತಿಗಳೂ ಯೋಧಮುಖ್ಯರೂ ಸಭೆಗೆ ಬರುತ್ತಾರೆ. ವಿಶೇಷವೇನೆಂದರೆ, ಈ ಸಲ ಕಂಭಕರ್ಣನೂ ಬಂದಿರುತ್ತಾನೆ. ಸೀತೆಯನ್ನು ಒಪ್ಪಿಸುವುದಿಲ್ಲವೆಂಬ ನಿರ್ಧಾರ ಆಗಿಹೋಗಿದೆ. ಯುದ್ಧದ ವಿಧಾನ ಹೇಗೆಂಬುದನ್ನು ನಿರ್ಣಯಿಸುವುದಕ್ಕಾಗಿ ಈ ಸಭೆ. ರಾವಣನು "ನಾನು ಕಾಮಮೋಹಿತನಾಗಿ ಸೀತೆಯನ್ನು ಅಪಹರಿಸಿ ತಂದಿದ್ದೇನೆ. ಅವಳಿಗೆ ಒಂದು ವರ್ಷ ಅವಧಿಯನ್ನಿತ್ತಿದ್ದೇನೆ. ಈಗ ರಾಮನು ವಾನರಸೇನೆಯೊಂದಿಗೆ ಸಮುದ್ರದ ತೀರಕ್ಕೆ ಬಂದಿದ್ದಾನೆ. ಮುಂದೆ ಯುದ್ಧವಾಗುವುದು ನಿಶ್ಚಿತ. ಯುದ್ಧದ ಮಾರ್ಗೋಪಾಯವೇನು?" ಎಂಬ ಪ್ರಶ್ನೆಯನ್ನು ಮುಂದಿಡುತ್ತಾನೆ. ಆಗ ಕುಂಭಕರ್ಣನು ಹೇಳಿದ ಮಾತು ವಿಸ್ಮಯಕಾರಿ. "ಮಹಾರಾಜ, ಸೀತೆಯನ್ನು ತರುವುದಕ್ಕೆ ಮೊದಲು ನೀನು ಮಂತ್ರಾಲೋಚನೆ ಮಾಡಬೇಕಾಗಿತ್ತು. ಆಗ ನೀನು ಯಾರನ್ನೂ ಕೇಳಲಿಲ್ಲ. ಈಗ ಕೇಳುತ್ತಿದ್ದೀಯ! ಇದು ತಲೆಕೆಳಗಾದ ರಾಜನೀತಿ. ರಾಮನು ನಿನ್ನನ್ನು ಕೊಲ್ಲದೆ ಉಳಿಸಿದನಲ್ಲ, ಅದು ನಮ್ಮ ಅದೃಷ್ಟ! ಒಳ್ಳೆಯದು. ಆದದ್ದು ಆಗಿಹೋಯಿತು. ನಾನು ನಿನ್ನ ವೈರಿಗಳನ್ನು ವಧಿಸಿ ಇದೆಲ್ಲವನ್ನೂ ಸರಿಪಡಿಸುತ್ತೇನೆ! **ಅಹಂ ಸಮೀಕರಿಷ್ಯಾಮಿ ಹತ್ವಾ ಶತ್ರೂಂಸ್ತವಾನಘ** " ಎಂದು ಹೇಳುತ್ತಾನೆ.

ಮತ್ತೆ ವಿಭೀಷಣನ ಹಿತೋಪದೇಶ ನಡೆಯುತ್ತದೆ. ಪ್ರಹಸ್ತನಿಗೂ ಅವನಿಗೂ ವಿವಾದ ನಡೆಯುತ್ತದೆ. ಇಂದ್ರಜಿತು ಚಿಕ್ಕಪ್ಪನನ್ನು ಕೆಟ್ಟ ಮಾತುಗಳಿಂದ ನಿಂದಿಸುತ್ತಾನೆ. ವಿಭೀಷಣನು ಅವನನ್ನು ಗದರಿಸುತ್ತಾನೆ. ವಿಭೀಷಣನು ಹೇಳುತ್ತಿದ್ದ ಹಿತೋಪದೇಶದಿಂದ ರಾವಣನು ಬೇಸತ್ತು ಕ್ರುದ್ಧನಾಗುತ್ತಾನೆ. "ಎಲೈ ವಿಭೀಷಣ, ದಾಯಾದಿಗಳ ದುರ್ಬುದ್ಧಿಯೇನೆಂಬುದನ್ನು ನಾನು ಬಲ್ಲೆ. ನನ್ನ ವೈಭವ ಪರಾಕ್ರಮಗಳನ್ನು ಕಂಡು ನಿನಗೆ ಹೊಟ್ಟೆಕಿಚ್ಚು ಎದ್ದಿದೆ. ಸ್ವಾರ್ಥಿಗಳಾದ ದಾಯಾದಿಗಳು ಹೀಗೆಯೇ ಹೇಳುತ್ತಾರೆ. ನಿನ್ನಂಥ ಅಯೋಗ್ಯನನ್ನು ನಾನು ಪ್ರೀತಿಸಿದ್ದೇ ತಪ್ಪಾಯಿತು. ಕುಲಕ್ಕೆ ಮೃತ್ಯು ಕೊಡಲಿಯ ಕಾವು. ಆನೆಗೆ ಆನೆಯೇ ವೈರಿ. ನನ್ನ ಕೀರ್ತಿಗೆ ಕಳಂಕವನ್ನು ತರಲು ಹೊರಟಿದ್ದೀಯೆ. ಇನ್ನೊಬ್ಬನು ಹೀಗೆ ಉಪದೇಶಕ್ಕೆ ಹೊರಟಿದ್ದರೆ ಕೊಂದುಹಾಕಿಬಿಡುತ್ತಿದ್ದೆ. ಒಂದು ನಿಮಿಷವೂ ಅವನು ಬದುಕಿರುತ್ತಿರಲಿಲ್ಲ. ಕುಲಗೇಡಿ ನೀನು. ನಮ್ಮ ವಂಶದ ಒಂದು ಕೊಳೆ. **ತ್ವಾಂ ತು ಧಿಕ್ ಕುಲಪಾಂಸನಂ** " ಎಂದು ಅಬ್ಬರಿಸುತ್ತಾನೆ.

ವಿಭೀಷಣನಿಗೆ ತಾಳ್ಮೆ ತಪ್ಪಿತು. ಗದಾಪಾಣಿಯಾಗಿ ಎದ್ದುನಿಂತ. “ಮಹಾರಾಜ, ನೀನು ನನಗೆ ಅಣ್ಣ. ತಂದೆಗೆ ಸಮಾನ. ತೋರಿದಂತೆ ನನ್ನನ್ನು ಹೀಯಾಳಿಸಿ ಮಾತಾಡಬಹುದು. ನನ್ನನ್ನು ‘ಕುಲಪಾಂಸನ’ ಎಂದು ಧಿಕ್ಕರಿಸಿದೆಯಲ್ಲ, ಇದೊಂದು ಮಾತನ್ನು ನಾನು ಸಹಿಸಲಾರೆ. ನಾನು ಆಡಿದ್ದು ಧರ್ಮಯುಕ್ತವಾದ ಹಿತೋಪದೇಶ. ಮಹಾರಾಜ, ಪ್ರಿಯವಾದ ಮಾತನ್ನಾಡ ತಕ್ಕವರು ಬಹಳ ಜನರಿದ್ದಾರೆ. ಆದರೆ ಪ್ರಿಯವಲ್ಲದ ಪಥ್ಯವನ್ನು ಹೇಳತಕ್ಕವರು ದುರ್ಲಭ. ರಾಮಬಾಣಗಳಿಂದ ನೀನು ಹತನಾಗಬಾರದು. ನೀನು ಸುಖವಾಗಿರಬೇಕು–ಎಂಬ ಉದ್ದೇಶದಿಂದ ಹಿತೋಕ್ತಿಗಳನ್ನಾಡಿದೆನು. ಅದು ತಪ್ಪಾದರೆ ನನ್ನನ್ನು ಕ್ಷಮಿಸು. ನಾನಿಲ್ಲದೆಯೇ ನೀನು ಸುಖವಾಗಿರು. **ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸುಖೀಭವ ಮಯಾ ವಿನಾ** ” ಎಂದು ಹೇಳಿ ಹೊರಟುಹೋಗುತ್ತಾನೆ. ಆತನ ನಾಲ್ವರು ಆಪ್ತಸಚಿವರು ವಿಭೀಷಣನೊಡನೆ ತೆರಳುತ್ತಾರೆ. ಸಭಾಮಧ್ಯದಲ್ಲಿ ಹಾಗೆ ಅವಮಾನ ಮಾಡಿದಾಗ ಮಾನಶಾಲಿಯಾದ ಯಾವನು ಸಹಿಸಿಕೊಂಡಿದ್ದಾನು? ವಿಭೀಷಣನು ಸಹಿಸಿಕೊಂಡು ಸುಮ್ಮನಾಗಿದ್ದರೆ, ಈ ವಿಮರ್ಶಕರು “ಅವನೊಬ್ಬ ಮಾನಗೇಡಿ, ಹೇಡಿ” ಎಂದು ಹಂಗಿಸುತ್ತಿದ್ದರು.

## ಶರಣಾಗತಿ

ಮುಂದೆ ವಿಭೀಷಣನ ಕರ್ತವ್ಯವೇನು? ಅವನು ತನ ಸಚಿವರೊಡನೆ ಆಕಾಶಮಾರ್ಗದಲ್ಲಿ ಸಮುದ್ರವನ್ನು ಲಂಘಿಸಿ ವಾನರಸೇನೆಯೆದುರಿಗೆ ಬಂದು ನಿಂತನು. ಸುಗ್ರೀವನನ್ನು ನೋಡಿ “ನಾನು ರಾವಣನ ತಮ್ಮ ವಿಭೀಷಣ. ಸೀತಾದೇವಿಯನ್ನು ಶ್ರೀರಾಮನಿಗೆ ಅರ್ಪಿಸಬೇಕೆಂದು ರಾವಣನಿಗೆ ಬುದ್ಧಿಹೇಳಿದೆ. ಅವನು ಒಪ್ಪಲಿಲ್ಲ. ನನಗೆ ಕೆಟ್ಟಮಾತುಗಳನ್ನಾಡಿ, ನಾನೊಬ್ಬ ದಾಸನೋ ಎಂಬಂತೆ ಅವಮಾನ ಮಾಡಿದನು. ಆದ್ದರಿಂದ ನಾನು ಅವನನ್ನು ತ್ಯಜಿಸಿ ಶ್ರೀರಾಮನಿಗೆ ಶರಣಾಗಿದ್ದೇನೆ.

**ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ॥**

ಮಕ್ಕಳು ಮಡದಿಯರನ್ನು ಬಿಟ್ಟು ರಾಘವನಿಗೆ ಶರಣಾಗಿದ್ದೇನೆ, ಇದನ್ನು ಆತನಿಗೆ ತಿಳಿಸಿರಿ” ಎಂದು ಹೇಳಿ ಆಕಾಶದಲ್ಲಿಯೇ ನಿಂತನು.

ಸುಗ್ರೀವಾದಿಗಳಿಗೆ ಇದೊಂದು ಅನಿರೀಕ್ಷಿತ ಘಟನೆಯಾಗಿ ತೋರಿತು.

ಸುಗ್ರೀವನು ಶ್ರೀರಾಮನಿಗೆ ಈ ವಿಚಾರವನ್ನು ತಿಳಿಸಿ "ಈ ರಾಕ್ಷಸರು ನಂಬಲು ಯೋಗ್ಯರಲ್ಲ. ನಮ್ಮನ್ನು ವಂಚಿಸಿ ಕೊಲ್ಲಬೇಕೆಂಬ ದುರುದ್ದೇಶದಿಂದ ವಿಭೀಷಣನು ಬಂದಿರಬೇಕು. ಅವನನ್ನು ವಧಿಸುವುದೇ ಯುಕ್ತ" ಎಂದು ಸಲಹೆಯನ್ನಿತ್ತನು. ಅಂಗದನೇ ಮೊದಲಾದವರ ಅಭಿಪ್ರಾಯವೂ ಅದೇ. ಹನುಮಂತನು "ವಿಭೀಷಣನು ಯಾವ ಆಶಯದಿಂದ ಬಂದಿದ್ದಾನೆಂದು ನಿಶ್ಚಯಿಸುವುದು ಕಷ್ಟ. ಅವನು ನೇರವಾಗಿ ಸ್ಪಷ್ಟಧ್ವನಿಯಿಂದ ಮಾತಾಡು ವುದನ್ನು ನೋಡಿದರೆ ವಿಶ್ವಾಸಾರ್ಹನೆಂದು ತೋರುತ್ತದೆ. ಬಹುಶಃ ವಾಲಿವಧೆಯಿಂದ ನಿನ್ನ ಪರಾಕ್ರಮವೇನೆಂಬುದನ್ನು ನಿಶ್ಚಯಿಸಿ ರಾಜ್ಯಾಪೇಕ್ಷೆ ಯಿಂದ ಬಂದಿರಬೇಕು. ಅವನನ್ನು ಸಂಗ್ರಹಿಸಬೇಕೆ ಬೇಡವೆ ಎಂಬ ವಿಷಯವನ್ನು ನೀನೇ ನಿಶ್ಚಯಿಸಬೇಕು" ಎಂದು ಹೇಳಿದನು. ಹೀಗೆಯೇ ಅವರಲ್ಲಿ ಚರ್ಚೆ ನಡೆದ ಮೇಲೆ ಶ್ರೀರಾಮನ ಕಡೆಯ ನಿರ್ಣಯ ಇದು – "ಈ ರಾಕ್ಷಸನು ದುಷ್ಟನೋ ದುಷ್ಟನಲ್ಲವೋ ಎಂಬುದು ಹೇಗಾದರೂ ಇರಲಿ. ಈತ ನನಗೇನನ್ನೂ ಮಾಡಲಾರ.

**ಅಂಗುಲ್ಯಗ್ರೇಣ ತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ ॥**

ವಾನರೇಶ್ವರ–ಸುಗ್ರೀವ, ನಾನು ಮನಸ್ಸುಮಾಡಿದರೆ ಬೆರಳಿನ ತುದಿಯಿಂದ ಈ ರಾಕ್ಷಸರೆಲ್ಲರನ್ನೂ ಕೊಂದು ಎಸೆದೇನು! ಅದಿರಲಿ. ವಿಭೀಷಣನು ನನಗೆ ಶರಣಾಗತನಾಗಿ ಬಂದಿದ್ದಾನೆ. ಶರಣಾಗತರನ್ನು ರಕ್ಷಿಸುವುದು ನನ್ನ ವ್ರತ. ವಿಭೀಷಣನಿರಲಿ, ರಾವಣನೇ ಸ್ವತಃ ಶರಣಾಗತನಾದರೂ ಕ್ಷಮಿಸುತ್ತೇನೆ!" ಎಂದನು.

ಪ್ರಸಿದ್ಧವಾದ ಈ ಶ್ಲೋಕ ಇಲ್ಲಿ ಬರುತ್ತದೆ–

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।**
**ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ ॥**

*ಯುದ್ಧ. ೧೮-೩೩*

"ವಾನರೇಶ್ವರ, ಅವನನ್ನು ಕರೆದುಕೊಂಡು ಬಾ. ವಿಭೀಷಣನಿಗೆ ಅಭಯವನ್ನು ನೀಡಿದ್ದೇನೆ" ಎಂದಮೇಲೆ, ಸುಗ್ರೀವನು ಬೇರೆ ಮಾರ್ಗವಿಲ್ಲದೆ ವಿಭೀಷಣನನ್ನು ಕರೆತರುತ್ತಾನೆ. ವಿಭೀಷಣನ ವೃತ್ತಾಂತವನ್ನು ಕೇಳಿ ಶ್ರೀರಾಮನು ಅವನನ್ನು ತನ್ನ ಸೇನೆಯಲ್ಲಿ ಸೇರಿಸಿಕೊಳ್ಳುತ್ತಾನೆ. ಸಮುದ್ರಜಲವನ್ನು ತರಿಸಿ ಲಂಕಾ

ರಾಜ್ಯಕ್ಕೆ ವಿಭೀಷಣನು ಒಡೆಯನೆಂದು ಪಟ್ಟಗಟ್ಟುತ್ತಾನೆ. ಇಲ್ಲಿಗೆ ಒಂದು ಘಟ್ಟ ಮುಗಿಯುತ್ತದೆ. ವಿಭೀಷಣನ ಮುಂದಿನ ವೃತ್ತಾಂತವನ್ನು ಕೇಳಿದಮೇಲೆ, ಆತನ ಚಾರಿತ್ರವನ್ನು ಯಥಾಮತಿಯಾಗಿ ವಿಮರ್ಶಿಸಬಹುದು. ವಿಭೀಷಣನು ಶ್ರೀರಾಮನಿಗೆ ರಾವಣನ ಬಲಪರಾಕ್ರಮಗಳೇನೆಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ. ಆತನು ಬ್ರಹ್ಮನ ವರಬಲದಿಂದ ದೇವದಾನವ ರಾಕ್ಷಸರಿಗೆ ಅವಧ್ಯನೆಂದೂ ಕುಂಭಕರ್ಣ, ಪ್ರಹಸ್ತ, ಇಂದ್ರಜಿತು ಮುಂತಾದವರ ಸಾಮರ್ಥ್ಯವನ್ನೂ ಮಾಚದೆ ಹೇಳಿದ್ದಾನೆ. ರಾವಣನ ಪಕ್ಷದಲ್ಲಿ ಕೋಟಿಗಟ್ಟಲೆ ರಾಕ್ಷಸರು ಯುದ್ಧಾಪೇಕ್ಷಿಗಳಾಗಿ ನಿಂತಿದ್ದಾರೆಂದು ವಿವರಿಸಿದ್ದಾನೆ. ಅವೆಲ್ಲವನ್ನೂ ಕೇಳಿದಮೇಲೆ ಶ್ರೀರಾಮನು "ವಿಭೀಷಣ, ರಾವಣನು ರಸಾತಳಕ್ಕೇ ಹೋಗಲಿ, ಬ್ರಹ್ಮನಿಗೆ ಶರಣಾಗಲಿ, ಅವನು ಬದುಕಿ ಉಳಿಯುವುದಿಲ್ಲ.

**ಅಹತ್ವಾ ರಾವಣಂ ಸಂಖ್ಯೇ ಸಪುತ್ರಬಲಬಾಂಧವಂ ।**
**ಅಯೋಧ್ಯಾಂ ನ ಪ್ರವೇಕ್ಷ್ಯಾಮಿ ತ್ರಿಭಿಸ್ತೈರ್ಭ್ರಾತೃಭಿಃ ಶಪೇ ॥**

"ಪುತ್ರರು, ಸೇನೆ, ಬಂಧುಗಳಿಂದ ಸಮೇತನಾದ ರಾವಣನನ್ನು ಯುದ್ಧದಲ್ಲಿ ಕೊಲ್ಲದೆ ನಾನು ಅಯೋಧ್ಯೆಯನ್ನು ಪ್ರವೇಶಿಸುವುದಿಲ್ಲ. ಇದೋ, ನನ್ನ ಮೂವರು ಸೋದರರ ಆಣೆ!" ಎಂದು ಪ್ರತಿಜ್ಞೆಮಾಡಿ, ಅನಂತರ ವಿಭೀಷಣನಿಗೆ ಪಟ್ಟಾಭಿಷೇಕಮಾಡಿಸಿದ್ದಾನೆ.

## ವಿಭೀಷಣನ ಸಹಾಯ

ವಾನರಸೇನೆಯು ಸಮುದ್ರವನ್ನು ದಾಟುವ ಬಗೆಯೇನೆಂಬ ಪ್ರಶ್ನೆ ಮೊದಲು ಎದುರಾಯಿತು. ಸಮುದ್ರರಾಜನನ್ನು ಆರಾಧಿಸಿ ಮೆಚ್ಚಿಸಿಕೊಳ್ಳುವುದು ಉತ್ತಮ. ಶ್ರೀರಾಮನ ಪೂರ್ವಜರಿಂದ ಉಪಕೃತನಾದ್ದರಿಂದ ಅವನು ಈ ಸಮಯದಲ್ಲಿ ಸಹಾಯಮಾಡುತ್ತಾನೆಂದು ಸಲಹೆ ನೀಡಿದವನು ವಿಭೀಷಣ. ಅದು ಶ್ರೀರಾಮನಿಗೂ ಸಂಮತವಾಯಿತು.

ವಿಭೀಷಣನು ನೇರವಾಗಿ ರಾವಣಸೇನೆಯೊಡನೆ ಯುದ್ಧಮಾಡಲಿಲ್ಲ. ಅವನು ಗದಾಪಾಣಿಯಾಗಿ ವಾನರಸೇನಾ ಮಧ್ಯದಲ್ಲಿ ಸಂಚರಿಸುತ್ತ ಯುದ್ಧದ ಪರಿಸ್ಥಿತಿಯನ್ನು ಗಮನಿಸುತ್ತ ಸಮಯೋಚಿತವಾದ ಸಲಹೆಗಳನ್ನು ನೀಡುತ್ತ ಹೋಗಿದ್ದಾನೆ.

ವಿಭೀಷಣನಿಂದಾದ ಒಂದು ಮಹತ್ತರವಾದ ಸಹಾಯವು ಉಲ್ಲೇಖನೀಯ

ವಾದದ್ದು. ರಾವಣನ ಸೇನೆಯಲ್ಲಿ ಇಂದ್ರಜಿತು ಅಪ್ರತಿಮನಾದ ವೀರ; ಮಾಯಾದಿ ಯುದ್ಧಪ್ರಸಂಗದಲ್ಲಿ ಒಂದು ಸಲ ಮಾಯಾಸೀತೆಯನ್ನು ಎಳೆತಂದು ಹನುಮಂತನೇ ಮೊದಲಾದವರೆದುರಿಗೆ ಖಡ್ಗದಿಂದ ಕತ್ತರಿಸಿ ಕೊಂದು ಬಿಡುತ್ತಾನೆ. ಹನುಮಂತನು ನಿಜವಾದ ಸೀತೆಯೇ ಹತಳಾದಳೆಂದು ಭ್ರಮಿಸಿ, ಈ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸುತ್ತಾನೆ. ಶ್ರೀರಾಮನ ಶೋಕಕ್ಕೆ ಮಿತಿಯಿಲ್ಲವಾಗುತ್ತದೆ. ವಾನರಸೇನೆಯೆಲ್ಲವೂ ದಿಕ್ಕುಗಾಣದೆ ಮೋಹಗೊಳ್ಳುತ್ತದೆ. ಆ ಸಮಯದಲ್ಲಿ ವಿಭೀಷಣನು ಬಂದು, ಅದೆಲ್ಲವೂ ಇಂದ್ರಜಿತುವಿನ ಮಾಯೆಯೆಂದೂ ಸರ್ವಥಾ ಸೀತೆಯನ್ನು ಅವನು ವಧಿಸಿಲ್ಲವೆಂದೂ ಹೇಳಿ ಸಮಾಧಾನ ಪಡಿಸುತ್ತಾನೆ. "ಇಂದ್ರಜಿತುವಿನ ಅಭಿಪ್ರಾಯವೀಗ ನನಗೆ ತಿಳಿಯಿತು. ನಿಮ್ಮೆಲ್ಲರನ್ನೂ ಹೀಗೆ ಮೋಹಗೊಳಿಸಿ ಅವನು ನಿಕುಂಭಿಳಾ ಯಾಗಭೂಮಿಗೆ ಹೋಗಿದ್ದಾನೆ. ಅಲ್ಲಿ ಅಭಿಚಾರಯಾಗಮಾಡುತ್ತಾನೆ. ಅನಂತರ ಅವನನ್ನು ಗೆಲ್ಲಲು ಯಾರಿಗೂ ಸಾಧ್ಯವಿಲ್ಲ. ಈಗ ತಡಮಾಡತಕ್ಕದ್ದಲ್ಲ. ಆ ಯಾಗವಾಗದಂತೆ ತಡೆಯಲೇಬೇಕು. ಆ ಪಾಪಿಗೆ ಬ್ರಹ್ಮದತ್ತವಾದ ವರವಿದೆ. ಯಾಗಮಾಡುವುದರೊಳಗೆ ಅವನನ್ನು ಮುಗಿಸಬೇಕು. ಲಕ್ಷ್ಮಣನು ನನ್ನೊಡನೆ ಬರಲಿ. ನಿಕುಂಭಿಳಾಯಾಗದ ಸ್ಥಳವನ್ನು ತೋರಿಸುತ್ತೇನೆ" ಎಂದು ನುಡಿದು ಲಕ್ಷ್ಮಣನೊಡನೆ ಹೋಗುತ್ತಾನೆ. ಅನಂತರ ಇಂದ್ರಜಿತುವಿನ ವಧೆಯಾಗುತ್ತದೆ. ಹೀಗೆ ಶ್ರೀರಾಮಾದಿಗಳನ್ನು ಸಂತೈಸಿ, ನಿಕುಂಭಿಳಾಯಾಗವನ್ನು ತಡೆದು, ಲಕ್ಷ್ಮಣನಿಂದ ಇಂದ್ರಜಿತುವಿನ ಸಂಹಾರಮಾಡಿಸಿದ್ದು ಬಹುದೊಡ್ಡ ಉಪಕಾರವೇ ಹೌದು.

## ಕುಂಭಕರ್ಣಸಮಾಗಮ

ಯುದ್ಧರಂಗದಲ್ಲಿ ಕುಂಭಕರ್ಣನಿಗೂ ವಿಭೀಷಣನಿಗೂ ನಡೆದ ಸಂಭಾಷಣೆ ಕುತೂಹಲಕರವಾದದ್ದು. ಪ್ರಹಸ್ತಾದಿಗಳ ವಧೆಯಾದ ಮೇಲೆ ರಾವಣನು ಚಿಂತಾಕ್ರಾಂತನಾಗಿ, ಯುದ್ಧದಲ್ಲಿ ಸಹಾಯಮಾಡಲೆಂದು ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುತ್ತಾನೆ. ಕುಂಭಕರ್ಣನು ರಾವಣಸಭೆಗೆ ಬಂದಮೇಲೆ ನಡೆದ ಸಂಗತಿಯೆಲ್ಲ ತಿಳಿಯಿತು. ರಾವಣನನ್ನುದ್ದೇಶಿಸಿ "ಅಣ್ಣ, ನಾನು ಮೊದಲೇ ಹೇಳಿದಂತೆ ನೀನು ತಪ್ಪುಮಾಡಿದ್ದೀಯೆ. ನಮ್ಮನ್ನು ಕೇಳದೆ ಸೀತೆಯನ್ನು ತಂದದ್ದರಿಂದ ಈ ವಿಪತ್ತು ಬಂದಿತು. ವಿಭೀಷಣನು ಹೇಳಿದಂತೆ ಈಗಲಾದರೂ ನಡೆಯುವುದು ಉತ್ತಮ" ಎಂದು ಹೇಳಿದನು. ರಾವಣನು

ಕ್ರುದ್ಧನಾಗಿ "ಹಳಸಿದ್ದನ್ನು ಮತ್ತೆ ಹೇಳಬೇಡ. **'ಗತಂ ತು ಗತಮೇವ ಹಿ'**. ನನ್ನಲ್ಲಿ ಸ್ನೇಹವಿದ್ದರೆ, ನಿನಗೆ ಪರಾಕ್ರಮವಿದ್ದರೆ ಉಚಿತವಾದ್ದನ್ನು ಮಾಡು" ಎಂದು ಗದರಿಸಿದನು. ಇವನಿಗೆ ಹಿತೋಪದೇಶವು ಯುಕ್ತವಲ್ಲವೆಂದೆಣಿಸಿ ಕುಂಭಕರ್ಣನು ಯುದ್ಧಸಂನದ್ಧನಾಗಿ ರಣಭೂಮಿಗೆ ಬಂದನು. ರಣಭೂಮಿಯಲ್ಲಿ ಒಂದು ಸಲ ಕುಂಭಕರ್ಣನೆದುರಿಗೆ ವಿಭೀಷಣನು ಗದಾಪಾಣಿಯಾಗಿ ಬರುತ್ತಾನೆ. ಆಗ ಕುಂಭಕರ್ಣನು ವಿಭೀಷಣನನ್ನುದ್ದೇಶಿಸಿ ಹೇಳುವ ಮಾತಿದು–

"ವತ್ಸ–ವಿಭೀಷಣ, ನೀನು ರಾಮನನ್ನು ಆಶ್ರಯಿಸಿದ್ದರಿಂದ ನಮ್ಮ ಕರ್ತವ್ಯವನ್ನೇ ನಡೆಸಿದಂತಾಯಿತು. ರಾಕ್ಷಸರಲ್ಲಿ ಸತ್ಯಧರ್ಮಗಳನ್ನು ಪಾಲಿಸ ತಕ್ಕವನು ನೀನೊಬ್ಬನೇ. ಧರ್ಮನಿಷ್ಠರಿಗೆ ಕೇಡು ಆಗುವುದಿಲ್ಲ. ನಮ್ಮ ವಂಶದಲ್ಲಿ ನೀನೊಬ್ಬನಾದರೂ ಉಳಿದುಕೊಳ್ಳುತ್ತೀಯ. ರಾಮನ ಅನುಗ್ರಹದಿಂದ ನಿನಗೆ ಲಂಕಾರಾಜ್ಯವು ದೊರೆಯುವುದು. ಯುದ್ಧಪ್ರಸಂಗದಲ್ಲಿ ನನ್ನ ಸ್ವಭಾವವೇನು ಎಂಬುದು ನಿನಗೆ ಗೊತ್ತಿದೆ. ನಾನು ಹೊಡೆದಾಡುವಾಗ ಎದುರಿಗೆ ಬಂದವರು ನನ್ನವರೇ ಪರಕೀಯರೇ–ಎಂಬುದೇ ನನಗೆ ತಿಳಿಯುವುದಿಲ್ಲ. ಆದ್ದರಿಂದ ದೂರಹೋಗು. ತಮ್ಮ, ನಿನ್ನನ್ನು ನಾನು ಉಳಿಸಲೇಬೇಕು." ಕುಂಭಕರ್ಣನ ಆಶಯವೇನಿರಬಹುದು? ಆ ತಾಮಸ ಪ್ರಕೃತಿಯವನಿಗೂ ಧರ್ಮಾಧರ್ಮಗಳ ವಿವೇಕವುಂಟಾಗಿರುವುದು ನಮಗೆ ಆಶ್ಚರ್ಯವನ್ನುಂಟುಮಾಡುತ್ತದೆ. ವಿಭೀಷಣನು ನಡೆದುಹೋದ ಸಂಗತಿಯನ್ನು ಕುಂಭಕರ್ಣನಿಗೆ ತಿಳಿಸಿ, ಕಣ್ಣಲ್ಲಿ ನೀರು ತುಂಬಿ ಕೊಂಡು ದೂರಹೋಗಿ, ಗದೆಯನ್ನೂರಿ ಚಿಂತಾಕ್ರಾಂತನಾಗಿ ನಿಂತುಬಿಡುತ್ತಾನೆ. ವಿಭೀಷಣನ ಚಿಂತೆ ಏನೆಂಬುದನ್ನು ಸಹೃದಯರಾದ ಶ್ರೋತೃಗಳು ಊಹಿಸಿ ಕೊಳ್ಳಬೇಕು. ಕವಿಯು ಮೌನವನ್ನವಲಂಬಿಸಿದ್ದಾನೆ.

ರಾವಣನಿಗೆ ಅಂತ್ಯಕಾಲವು ಸಮೀಪಿಸಿತು. ಮಹಾವೇಗನೂ ಮಹಾ ದ್ಯುತಿಯೂ ಆದ ರಾಕ್ಷಸೇಂದ್ರನು ರಾಮಾಸ್ತ್ರದಿಂದ ಹತನಾಗಿ ಬಿದ್ದನು. ವಿಭೀಷಣನಿಗೆ ಅಳು ಒತ್ತರಿಸಿಬಂದಿತು. ರಾಮಾಯಣದಲ್ಲಿ ಒಂದು ಸರ್ಗವೇ ವಿಭೀಷಣನ ಶೋಕವಿಲಾಪವಾಗಿದೆ. ರಕ್ತವು ನೀರಿಗಿಂತ ದಪ್ಪವಲ್ಲವೆ? **'ಶೋಕವೇಗಪರೀತಾತ್ಮಾ ವಿಲಲಾಪ ವಿಭೀಷಣಃ'**. ರಾವಣನ ಮಹಿಮೆಯನ್ನು ಕೀರ್ತಿಸುತ್ತ ಹೇಳುತ್ತಾನೆ–

**ಏಷೋಽಽಹಿತಾಗ್ನಿಶ್ಚ ಮಹಾತಪಾಶ್ಚ ವೇದಾಂತಗಃ ಕರ್ಮಸು ಚಾಗ್ರ್ಯವೀರ್ಯಃ**

"ಇವನು ಆಹಿತಾಗ್ನಿ. ಮಹತ್ತರವಾದ ತಪಸ್ಸನ್ನು ಮಾಡಿದವನು. ವೇದಾಂತ

ವಿಶಾರದ. ಶಾಸ್ತ್ರೋಕ್ತಕರ್ಮವನ್ನು ಉತ್ತಮ ರೀತಿಯಲ್ಲಿ ನಡೆಸುತ್ತಿದ್ದ ಕರ್ಮನಿಷ್ಠ.'' ರಾವಣನ ವಿಸ್ಮಯಕಾರಿಗಳಾದ ಗುಣಗಳು ಇಲ್ಲಿ ಪ್ರಕಟವಾಗಿವೆ. ವಿಭೀಷಣನೇ ರಾವಣನ ಅಂತ್ಯಸಂಸ್ಕಾರವನ್ನು ವಿಧಿವತ್ತಾಗಿ ನೆರವೇರಿಸುತ್ತಾನೆ. ಅಂತ್ಯಕ್ರಿಯೆ ಗಳೆಲ್ಲವೂ ಮುಗಿದಮೇಲೆ ಶ್ರೀರಾಮನ ಆಜ್ಞೆಯಂತೆ ಲಕ್ಷ್ಮಣನು ಲಂಕೆಗೆ ಹೋಗಿ ವಿಭೀಷಣನಿಗೆ ಪಟ್ಟಾಭಿಷೇಕಮಾಡಿಸುತ್ತಾನೆ. ಇವಿಷ್ಟು ವಿಭೀಷಣನ ಗುಣಸ್ವಭಾವಗಳನ್ನು ವ್ಯಕ್ತಪಡಿಸುವ ಸಂನಿವೇಶಗಳು.

ಈ ಹಿನ್ನೆಲೆಯಲ್ಲಿ ನಾವು ವಿಭೀಷಣನ ಗುಣಶೀಲಗಳನ್ನು ಪರಿಶೀಲಿಸ ಬೇಕು. ಆತನ ವಿಷಯವಾಗಿ ರಾಮಾಯಣದ ಕವಿ ಹೇಳಿರುವುದೆಲ್ಲವೂ ನಮಗೆ ಆಧಾರವೇ. ಹೇಳಿರುವುದರಲ್ಲಿ ಒಂದನ್ನು ಕಲ್ಪನಾವಿಲಾಸವೆಂದು ತಳ್ಳುವುದು ಅಥವಾ ಉಪೇಕ್ಷಿಸುವುದು ಯುಕ್ತವಲ್ಲ. ಮೊದಲನೆಯದಾಗಿ ವಿಭೀಷಣನ ತಂದೆ ವಿಶ್ರವಸ್ಸು ಕೈಕಸಿಗೆ, ವಿಭೀಷಣನು ಧರ್ಮಾತ್ಮನಾಗುವನೆಂದೂ ಭವಿಷ್ಯವನ್ನು ನುಡಿದಿದ್ದ. ಎರಡನೆಯದಾಗಿ ವಿಭೀಷಣನೇ ತನಗೆ ಧರ್ಮಿಷ್ಠವಾದ ಬುದ್ಧಿ ಸದಾ ಇರಬೇಕೆಂದೂ ಕಷ್ಟಕಾಲದಲ್ಲಿಯೂ ಆ ಬುದ್ಧಿ ಸ್ಥಿರವಾಗಿರಬೇಕೆಂದೂ ಬ್ರಹ್ಮನಿಂದ ವರವನ್ನು ಪಡೆದಿದ್ದ. ಬ್ರಹ್ಮನಿತ್ತ ವರವೂ ಸುಳ್ಳಾಗುತ್ತದೆಯೆಂದು ಹೇಳುವುದು ಅಸಂಗತ. ಶೂರ್ಪಣಖೆಯೂ ಸಹ ಶ್ರೀರಾಮನಿಗೆ ವಿಭೀಷಣನು ಧರ್ಮಾತ್ಮನೆಂದೂ ರಾಕ್ಷಸಸ್ವಭಾವವು ಅವನಲ್ಲಿಲ್ಲವೆಂದೂ ಹೇಳಿದ್ದಾಳೆ. ಹೀಗಿರುವಾಗ ಆತನು ಭ್ರಾತೃದ್ರೋಹಿಯೆಂದೂ ಸಮಯಸಾಧಕನೆಂದೂ ಸ್ವಾರ್ಥಿಯಾಗಿ ರಾಜ್ಯಕ್ಕೆ ಕೇಡುತಂದನೆಂದೂ ಆಪಾದಿಸುವುದರ ಅರ್ಥವೇನು? ಅದು ತಿರುಳಿಲ್ಲದ್ದು. ಇನ್ನೊಬ್ಬರಲ್ಲಿ ಕೆಟ್ಟದ್ದನ್ನೇ ಹುಡುಕುವ ಚಾಳಿ ಕೆಲವರಿಗಿರುತ್ತದೆ. ಅವರು ಗುಣವನ್ನು ದೋಷವನ್ನಾಗಿ ತಿರುಗಿಸಿಬಿಡುತ್ತಾರೆ.

ವಿಭೀಷಣ ರಾವಣನ ಮಂತ್ರಾಧಿವೇಶನ ಸಭೆಯಲ್ಲೊಂದುಸಲ ಹಿತೋಪದೇಶವನ್ನು ಮಾಡಿದ್ದಾನೆ. ರಾವಣನು ಮುಖತಿರುಗಿಸಿಕೊಂಡು ಹೊರಟುಹೋದ. ಅನಂತರ ಅವನು ಹೋಗಿ ಖಾಸಗಿಯಾಗಿ ಬುದ್ಧಿವಾದ ಹೇಳಿದ್ದಾನೆ. "ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡು. ಅನಾವಶ್ಯಕವಾಗಿ ಯುದ್ಧವನ್ನು ಹೇರಿಕೊಳ್ಳುವುದು ಬೇಡ. ನಿಶ್ಚಿಂತೆಯಿಂದ ನಾವು ಸುಖವಾಗಿ ಇರೋಣ'' ಎಂದು ಬೇಡಿಕೊಂಡಿದ್ದಾನೆ. ಮತ್ತೆ ಮುಂದಿನ ಸಭೆಯಲ್ಲಿ ಮೂರನೆಯ ಸಲ "ಈ ಪಾಪಕೃತ್ಯವು ಬೇಡ. ಸೀತೆಯನ್ನು ಒಪ್ಪಿಸಿ ಬಿಡುವುದೇ ಯೋಗ್ಯವಾದದ್ದು'' ಎಂದು ಉಪದೇಶಿಸಿದ್ದಾನೆ. ರಾಜದ್ರೋಹಿಯಾದ ಸಮಯಸಾಧಕನು ಇಷ್ಟು ಕಳಕಳಿಯಿಂದ ಬೇಡಿಕೊಂಡು ಯುದ್ಧವನ್ನು

ತಪ್ಪಿಸುವುದಕ್ಕಾಗಿ ಶ್ರಮಿಸುತ್ತಾನೆಯೆ? ಯುದ್ಧವನ್ನು ತಪ್ಪಿಸಿದರೆ ವಿಭೀಷಣನಿಗೆ ಬರುವ ಲಾಭವೇನು? ಸಮಯಸಾಧಕನಾಗಿದ್ದರೆ ರಾವಣನಿಗೆ ತಿಳಿಸದೆ ಗುಪ್ತವಾಗಿ ಹೋಗಿ ಶ್ರೀರಾಮನ ಕಡೆಗೆ ಸೇರಿಕೊಳ್ಳುತ್ತಿದ್ದ. ರಾವಣನು ಗೆಲ್ಲಲಿ, ಸೋಲಲಿ- ಉಭಯ ಸಂದರ್ಭಗಳಲ್ಲಿಯೂ ತನಗೆ ನಷ್ಟವಾಗದಂತೆ ನಡೆದುಕೊಳ್ಳುತ್ತಿದ್ದ. ಇಷ್ಟಾಗಿ ರಾಮನಿಗೆ ಯುದ್ಧದಲ್ಲಿ ಜಯವಾಗುತ್ತದೆಯೆಂಬ ಭರವಸೆಯೇನು? ಅವನು ಕಪಿಸೇನೆಯೊಡನೆ ಸಮುದ್ರವನ್ನು ದಾಟಿ ಬರಬಲ್ಲನೆ? ಎಂಬ ಪ್ರಶ್ನೆಯೂ ಪೆಡಂಭೂತವಾಗಿ ನಿಂತಿತ್ತು. ರಾವಣನ ಬಲಪರಾಕ್ರಮಗಳಾಗಲಿ, ಪ್ರಹಸ್ತ ಕುಂಭಕರ್ಣಾದಿಗಳ ಸಾಮರ್ಥ್ಯವಾಗಲಿ, ಇಂದ್ರಜಿತುವಿನ ಮಾಯಾ ವೈಭವವಾಗಲಿ ವಿಭೀಷಣನಿಗೆ ತಿಳಿಯದ ಸಂಗತಿಗಳಲ್ಲ. ಒಂದು ವೇಳೆ ರಾಮನು ಪರಾಜಿತನಾದರೆ ಅವನನ್ನಾಶ್ರಯಿಸಿದ ತನ್ನ ಗತಿ ಏನಾದೀತೆಂಬ ಚಿಂತೆ ಅವನಿಗಿರಲಿಲ್ಲವೆ?

ಇನ್ನು ಕೆಲವರು ಕೇಳುವುದುಂಟು. “ಒಳ್ಳೆಯದು. ವಿಭೀಷಣನು ರಾವಣನನ್ನು ತೊರೆದು ಹೋದರೂ ತಟಸ್ಥನಾಗಿ ಎಲ್ಲಾದರೂ ಇದ್ದುಬಿಡ ಬೇಕಾಗಿತ್ತು. ಶ್ರೀರಾಮನ ಪಕ್ಷವನ್ನು ಆಶ್ರಯಿಸಿದ್ದೇಕೆ? ಅವನಿಗೆ ಯುದ್ಧದಲ್ಲಿ ಸಹಾಯಮಾಡಿದ್ದೇಕೆ?” ಎಂದು. ಉತ್ತರವೇನೆಂದರೆ, ಇಲ್ಲೊಂದು ಧರ್ಮ ಸೂಕ್ಷ್ಮತೆಯುಂಟು. ಒಬ್ಬನು ಪಾಪಕೃತ್ಯವನ್ನು ಮಾಡಿದರೆ, ಅದನ್ನು ಮಾಡಿದ ಕರ್ತನೊಬ್ಬನೇ ಪಾಪಿಯಲ್ಲ. ಅದನ್ನು ಮಾಡಿಸಿದವನು, ಒಪ್ಪಿಗೆ ನೀಡಿದವನು, ಸಾಕ್ಷಿಯಾಗಿ ತಟಸ್ಥನಾಗಿರತಕ್ಕವನು – ಇವರಿಗೂ ಪಾಪವು ಗಂಟುಬೀಳುತ್ತದೆ ಎಂದು ಧರ್ಮಶಾಸ್ತ್ರವಿದೆ. ಒಬ್ಬ ದುಷ್ಟನು ಇನ್ನೊಬ್ಬರ ಮನೆಗೆ ಬೆಂಕಿಹಚ್ಚಲು ತೊಡಗಿದಾಗ ಅಥವಾ ಒಬ್ಬ ಹೆಣ್ಣುಮಗಳನ್ನು ಕೆಣಕಿ ಅತ್ಯಾಚಾರಕ್ಕೆ ಸಂನದ್ಧನಾದಾಗ, ಅದನ್ನು ನೋಡುತ್ತಾ ಸುಮ್ಮನಿರುವುದು ಅಧರ್ಮವೇ. ಪಾಪಕೃತ್ಯವೇ. ದುಷ್ಕರ್ಮವನ್ನು ಪ್ರತಿಭಟಿಸದೆ ಸಾಕ್ಷಿಯಾಗಿ ನೋಡುತ್ತ ಇದ್ದವನು ಲೋಕದಲ್ಲಿಯೂ ನಿಂದಾರ್ಹನಾಗುತ್ತಾನೆ. ವಿಭೀಷಣನ ಧಾರ್ಮಿಕ ಬುದ್ಧಿ ಅವನನ್ನು ಸುಮ್ಮನಿರಿಸಲಿಲ್ಲ. ಈ ಸಮಯದಲ್ಲಿ ಶ್ರೀರಾಮನಿಗೆ ತನ್ನಿಂದಾದ ಸಹಾಯಮಾಡಲೇಬೇಕು, ಸಾಧ್ವಿಯಾದ ಜಾನಕಿಯ ಮಾನ ರಕ್ಷಣೆಯನ್ನು ಮಾಡಲೇಬೇಕು, ರಾವಣನ ಅತ್ಯಾಚಾರಗಳು ಮಿತಿಮೀರಿದವು –ಎಂಬ ಭಾವನೆ ವಿಭೀಷಣನಿಗೆ ಬಂದದ್ದು ಸಹಜವೂ ಹೌದು, ಯುಕ್ತವೂ ಹೌದು. ಅವನು ತಾಟಸ್ಥ್ಯವನ್ನು ವಹಿಸಿದ್ದರೆ ಅಧರ್ಮವಾಗುತ್ತಿತ್ತು. ಆದರೂ ತನ್ನ ಹತ್ತಿರದ ಬಂಧುಗಳೊಡನೆ ನೇರವಾಗಿ ಯುದ್ಧಕ್ಕಿಳಿಯಲು ಅವನಿಗೆ

ಮನಸ್ಸಾಗಲಿಲ್ಲ. ಅವನಿಂದ ಶ್ರೀರಾಮನಿಗಾದದ್ದು ವಾಕ್‌ಸಹಾಯ. ವಿಭೀಷಣ ನೇನೂ ಹೇಡಿಯಲ್ಲ. ಅವನು ಗದಾಪಾಣಿಯಾಗಿ ರಣರಂಗದಲ್ಲಿ ಸಂಚರಿಸುತ್ತಲೇ ಇದ್ದ. ಬ್ರಹ್ಮಾಸ್ತ್ರವೂ ಸಹ ಅವನಿಗೆ ವಶವಾಗಿತ್ತೆಂಬುದನ್ನು ನೆನಪಿನಲ್ಲಿಡಬೇಕು.

ಅವನು ರಾಜ್ಯಕಾಮಿಯಾಗಿದ್ದನೇ ಇಲ್ಲವೆ? ಎಂಬ ಒಂದು ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ. ಅವನು ಶರಣಾರ್ಥಿಯಾಗಿ ಶ್ರೀರಾಮನ ಬಳಿಗೆ ಬಂದಾಗ, ಸುಗ್ರೀವಾದಿಗಳು ಅದೊಂದು ಕಪಟನಾಟಕವೆಂದೂ ಆ ರಾಕ್ಷಸನನ್ನು ನಂಬಬಾರದೆಂದೂ ಹೇಳಿದರು. ಹನುಮಂತನಾದರೋ ವಿಭೀಷಣನು ರಾಜ್ಯಾಪೇಕ್ಷೆಯಿಂದ ವಾಸ್ತವವಾಗಿಯೂ ಶರಣಾರ್ಥಿಯಾಗಿ ಬಂದಿರಬೇಕೆಂದು ತರ್ಕಿಸಿದ್ದಾನೆ. ಶ್ರೀರಾಮನೂ ಸಹ 'ರಾಜ್ಯಾಕಾಂಕ್ಷೀ ಚ ರಾಕ್ಷಸಃ' ಎಂದು ನುಡಿದಿದ್ದಾನೆ. ಸಹೋದರನಾದ ರಾವಣನಿಗೆ, ಲಂಕಾರಾಜ್ಯಕ್ಕೆ ಅಂತಹ ಆಪತ್ಕಾಲವು ಒದಗಿದಾಗ ಶತ್ರುಪಕ್ಷಕ್ಕೆ ಬಂದು ಸೇರತಕ್ಕವನು ಸ್ವಾರ್ಥಿಯಾಗಿಯೇ ಇರುತ್ತಾನೆಂದು ಅವರು ಊಹಿಸಿದ್ದು ಸಹಜವಾಗಿದೆ. ರಾವಣನ ಆಸ್ಥಾನದಲ್ಲಿ ವಿಭೀಷಣನಿಗಾದ ಅವಮಾನ ಪ್ರಸಂಗವು ಅವರಿಗೆ ಗೊತ್ತಿಲ್ಲ. ತೀವ್ರವಾದ ಅವನ ಧರ್ಮನಿಷ್ಠೆಯೂ ತಿಳಿದಿಲ್ಲ. ರಾಜ್ಯಾಪೇಕ್ಷೆಯಿಂದಲೇ ವಿಭೀಷಣನು ಬಂದಿದ್ದಾನೆಂದು ನಿಶ್ಚಯಿಸಿ, ಶ್ರೀರಾಮನು ವಿಭೀಷಣನಿಗೆ ಸಾಂಕೇತಿಕವಾದ ಪಟ್ಟಾಭಿಷೇಕವನ್ನೂ ಮಾಡಿಸುತ್ತಾನೆ. ಪಟ್ಟಾಭಿಷೇಕಮಾಡಿಸಿದ್ದರಿಂದ ತಾನು ರಾವಣನನ್ನು ಜಯಿಸಬಲ್ಲೆನೆಂಬ ದೃಢವಾದ ಆತ್ಮವಿಶ್ವಾಸವು ಅಭಿವ್ಯಕ್ತವಾಗುವುದು. ಅಲ್ಲದೆ ರಾಕ್ಷಸರ ಬಲದ ಗುಟ್ಟನ್ನು ವಿಭೀಷಣನು ತಿಳಿಸಿಕೊಡುತ್ತಾನೆಂಬ ರಾಜನೀತಿಯೂ ಇದರಲ್ಲಡಗಿದೆ.

ಆದ್ದರಿಂದ ಶ್ರೀರಾಮನೂ ಹನುಮಂತನೂ ಹೇಳಿದ ಪ್ರಕಾರ ವಿಭೀಷಣನ ರಾಜ್ಯಾಪೇಕ್ಷೆ ಅವರಿಬ್ಬರ ಊಹೆಯೆಂದೇ ತಿಳಿಯಬಹುದು. ಪಟ್ಟಾಭಿಷೇಕ ಮಾಡಿಸಿಕೊಂಡದ್ದರಿಂದ ವಿಭೀಷಣನಿಗೆ ಅದು ಸಂಮತವಾಯಿತೆಂದೂ ಹೇಳಬಹುದು. ಅಲ್ಲದೆ ವಿಭೀಷಣನೇ ಒಂದು ಕಡೆ ತನ್ನ ರಾಜ್ಯಾಭಿಲಾಷೆಯನ್ನು ಹೇಳಿಕೊಂಡಿದ್ದಾನೆ. ಇಂದ್ರಜಿತುವಿನ ನಾಗಪಾಶಗಳಿಂದ ಶ್ರೀರಾಮಲಕ್ಷ್ಮಣರು ಬಂಧಿತರಾಗಿ ಮೂರ್ಛೆಹೋದರು. ಅವರು ಬದುಕಲಾರರೆಂದು ಶೋಕಿಸುತ್ತ ವಿಭೀಷಣನು ಈ ಮಾತನ್ನು ಹೇಳುತ್ತಾನೆ–

**ಜೀವನ್ನದ್ಯ ವಿಪನ್ನೋಽಸ್ಮಿ ನಷ್ಟರಾಜ್ಯಮನೋರಥಃ ॥**

*ಯುದ್ಧ. ೫೦–೧೯*

"ನನ್ನ ರಾಜ್ಯಾಭಿಲಾಷೆ ಮಣ್ಣುಗೂಡಿತು. ನಾನು ಬದುಕಿದ್ದು ವಿಪತ್ತಿಗೊಳಗಾದೆನು"

ಆದ್ದರಿಂದ ವಿಭೀಷಣನಿಗೆ ರಾಜ್ಯಾಭಿಲಾಷೆ ಇತ್ತು ಎಂದು ಗೊತ್ತಾಗುತ್ತದೆ. ಇಲ್ಲಿ ವಿಚಾರಮಾಡಬೇಕಾದ ಅಂಶ ಉಂಟು. ಆತನು ರಾವಣನೊಡನೆ ಸ್ನೇಹದಲ್ಲಿದ್ದಾಗ ಎಂದೂ ರಾಜ್ಯಾಭಿಲಾಷೆಯನ್ನು ಇಟ್ಟುಕೊಂಡಿರಲಿಲ್ಲ. ಅವನ ಸುಖಜೀವನಕ್ಕೆ ಯಾವ ಕೊರತೆಯೂ ಇರಲಿಲ್ಲ. ರಾವಣನ ದುರಾಚಾರಗಳನ್ನು ಕಂಡೂ ಅಸಹಾಯಕನಾಗಿ ಅವನನ್ನು ತಡೆಯಲಾರದೆ ತನ್ನ ಪಾಡಿಗಿದ್ದನು. ರಾವಣನು ಬ್ರಹ್ಮನಿಂದ ವರವನ್ನು ಪಡೆಯುವಾಗ ಮರಣರಾಹಿತ್ಯವನ್ನು ಕೇಳಿಕೊಂಡಿದ್ದನು. ಅದಕ್ಕೆ ಬ್ರಹ್ಮನು ಒಪ್ಪದಿದ್ದಾಗ–

**ಸುಪರ್ಣನಾಗಯಕ್ಷಾಣಾಂ ದೈತ್ಯದಾನವರಕ್ಷಸಾಂ ।**
**ಅವಧ್ಯೋಽಹಂ ಪ್ರಜಾಧ್ಯಕ್ಷ ದೇವತಾನಾಂ ಚ ಶಾಶ್ವತ ॥**

*ಉತ್ತರ. ೧೦–೧೯*

ಎಂದು ಸುಪರ್ಣಾದಿಗಳಿಂದ ತನಗೆ ಮರಣವಾಗದಿರಲೆಂಬ ವರವನ್ನು ಪಡೆದು, ಮನುಷ್ಯನೇ ಮೊದಲಾದವರು ಹುಲ್ಲುಕಡ್ಡಿಗೆ ಸಮರೆಂದು ಉಪೇಕ್ಷಿಸಿದ್ದನು. ಆದ್ದರಿಂದಲೇ ಹನುಮಂತನು ರಾವಣನನ್ನು ಧಿಕ್ಕರಿಸಿ ಅವನಿಗೆ ಬುದ್ಧಿ ಹೇಳುವಾಗ

**ಸುಗ್ರೀವೋ ನ ಹಿ ದೇವೋಽಯಂ ನಾಸುರೋ ನ ಚ ರಾಕ್ಷಸಃ ॥**

*ಸುಂ. ೫೧–೨೭*

ಎಂದು ಎಚ್ಚರಿಸಿದ್ದಾನೆ. ಮನುಷ್ಯನಾದ ಶ್ರೀರಾಮನೂ ಸುಗ್ರೀವಾದಿ ವಾನರರೂ ಈಗ ಶತ್ರುಗಳಾಗಿ ಬಂದಿದ್ದಾರೆ. ಶ್ರೀರಾಮನು ಏಕಾಕಿಯಾಗಿ ಖರದೂಷಣಾದಿಗಳನ್ನು ಸಂಹರಿಸಿದ್ದು ವಿಭೀಷಣನಿಗೆ ತಿಳಿದಿದೆ. ಮಹಾ ವೀರನಾದ ವಾಲಿಯನ್ನು ವಧಿಸಿದ್ದೂ ಗೊತ್ತಿದೆ. ವಾನರನಾದ ಹನುಮಂತನ ಸಾಹಸಪರಾಕ್ರಮಗಳನ್ನು ಸ್ವತಃ ಕಂಡಿದ್ದಾನೆ. ಹೀಗೆ ಮಾನವರೂ ವಾನರರೂ ಒಟ್ಟಾಗಿ ಯುದ್ಧಕ್ಕಾಗಿ ಬಂದದ್ದು ಒಂದು ಅಸಾಧಾರಣವಾದ ಘಟನೆ. ಲಂಕೆಯನ್ನು ಆಕ್ರಮಿಸಲು ಅದುವರೆಗೆ ಯಾರೂ ಬಂದಿರಲಿಲ್ಲ. ಆಕ್ರಮಿಸುವ ಧೈರ್ಯವು ಇಂದ್ರಾದಿದೇವತೆಗಳಿಗೂ ಇರಲಿಲ್ಲ. ಈ ಕಾರಣಗಳಿಂದ

ವಿಭೀಷಣನ ಮನಸ್ಸಿಗೆ ದೊಡ್ಡ ಆತಂಕವು ತಲೆದೋರಿತು. ಆದ್ದರಿಂದಲೇ ಅವನು ರಾವಣನಿಗೆ ಅನೇಕಸಲ ಬುದ್ಧಿವಾದವನ್ನು ಹೇಳಿ ಯುದ್ಧವನ್ನು ತಪ್ಪಿಸಲು ಯತ್ನಿಸಿದನು. ಯಾವಾಗ ರಾವಣನು ಸಂಧಿಗೆ ಒಪ್ಪದೆ ಹೋದನೋ ಆಗ ಯುದ್ಧವು ಅನಿವಾರ್ಯವೆಂದೂ ರಾವಣನ ಮೃತ್ಯುಕಾಲ ಸಮೀಪಿಸಿತೆಂದೂ ಅವನಿಗೆ ನಿಶ್ಚಯವಾಗಿ ಹೋಯಿತು. ರಾವಣನೊಡನೆ ಅವನ ಮಕ್ಕಳೂ ಹತರಾಗುವುದು ನಿಶ್ಚಯ. ಕುಂಭಕರ್ಣನೂ ಯುದ್ಧದಲ್ಲಿ ಸಾಯಬಹುದು ಅಥವಾ ಸುಖವಾಗಿ ನಿದ್ರಿಸುತ್ತ ಮಲಗಿರಬಹುದು! ಅನಂತರ ರಾಜ್ಯದ ಪರಿಸ್ಥಿತಿಯೇನು? ಲಂಕಾರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಉಳಿಯತಕ್ಕವನು ವಿಭೀಷಣನೊಬ್ಬನೇ. ಅಲ್ಲದೆ ಶ್ರೀರಾಮನು ಸಾಂಕೇತಿಕವಾಗಿ ಪಟ್ಟಾಭಿಷೇಕವನ್ನು ಸಹ ಮಾಡಿಸಿ ಬಿಟ್ಟಿದ್ದಾನೆ. ಈ ಕಾರಣಗಳಿಂದ ವಿಭೀಷಣನಿಗೆ ಮುಂದೆ ತಾನು ಲಂಕೆಗೆ ರಾಜನಾಗುತ್ತೇನೆಂಬ ಕಲ್ಪನೆ ಬಂದಿರುವುದು ಸಹಜವೇ. ಅವನ 'ರಾಜ್ಯ ಮನೋರಥ'ವು ಮನಃಕಲ್ಪಿತವಾದ ಒಂದು ಭವಿಷ್ಯಚ್ಚಿಂತನೆಯೇ ಹೊರತು ಲೋಭದಿಂದ ಉದಿಸಿದ ರಾಜ್ಯಕಾಮನೆಯಲ್ಲ.

ಅತ್ಯಂತ ತಾಮಸಸ್ವಭಾವದವನೂ ಅವಿವೇಕಿಯೂ ಕ್ರೂರಿಯೂ ಆದ ಕುಂಭಕರ್ಣನಿಗೆ ಸಹ ಈ ಭವಿಷ್ಯಚ್ಚಿಂತನೆಯುಂಟಾಗಿದೆ. ಆದ್ದರಿಂದಲೇ ಅವನು ರಾವಣನಿಗೆ ಹಿತೋಪದೇಶವನ್ನು ಮಾಡಲು ಪ್ರಯತ್ನಿಸಿದ. ಯುದ್ಧಭೂಮಿಯಲ್ಲಿ ಅವನು ವಿಭೀಷಣನಿಗೆ ಹೇಳಿದ ಮಾತನ್ನು ಹಿಂದೆ ಉದಾಹರಿಸಿದ್ದರೂ ಈಗೊಮ್ಮೆ ಸ್ಮರಿಸಿಕೊಳ್ಳಬಹುದು–

**ನಾಸ್ತಿ ಧರ್ಮಾಭಿರಕ್ತಾನಾಂ ವ್ಯಸನಂ ತು ಕದಾಚನ ।**
**ಸಂತಾನಾರ್ಥಂ ತ್ವಮೇವೈಕಃ ಕುಲಸ್ಯಾಸ್ಯ ಭವಿಷ್ಯಸಿ ॥**
**ರಾಘವಸ್ಯ ಪ್ರಸಾದಾತ್ತ್ವಂ ರಕ್ಷಸಾಂ ರಾಜ್ಯಮಾಪ್ಸ್ಯಸಿ ॥**

*ಯುದ್ಧ. ೬೭-೧೫೦, ೧೫೧*

ಇಷ್ಟಾಗಿ ರಾವಣನು ಹತನಾದ ಮೇಲೆ ಲಂಕೆಯಲ್ಲಿ ಆಸೆಪಡ ಬೇಕಾದದ್ದು ಏನು ಉಳಿದಿತ್ತು? ರಾಕ್ಷಸರೆಲ್ಲರೂ ಯೋಧರಾದ್ದರಿಂದ ಎಲ್ಲರೂ ಹತರಾಗಿದ್ದರು. ಮಕ್ಕಳು, ಮುದುಕರು, ಹೆಂಗಸರು ಮಾತ್ರ ಉಳಿದಿರ ಬಹುದು. ಹನುಮಂತನಿಂದಲೂ ವಾನರ ಸೇನೆಯಿಂದಲೂ ಲಂಕೆಯು ಎರಡು ಸಲ ದಗ್ಧವಾಗಿತ್ತು. ಲಂಕೆಯಲ್ಲಿ ಉಳಿದದ್ದು ಸಾವು, ನೋವು, ನಷ್ಟ,

ಕಷ್ಟಗಳ ರಾಶಿ. ಆಸೆಪಡಬೇಕಾದ್ದೇನೂ ಇರಲಿಲ್ಲ. ಅದೆಲ್ಲವನ್ನು ಸರಿಪಡಿಸುವ ಭಾರ, ಹೊಣೆಗಳು ಮಾತ್ರ ವಿಭೀಷಣನ ಹೆಗಲಿನಲ್ಲಿ ಬಿದ್ದವು.

ವಿಭೀಷಣನು ಲಂಕೆಯ ರಾಜನಾದ್ದರಿಂದಲೇ ಅಳಿದುಳಿದ ಪ್ರಜೆಗಳು ಚೇತರಿಸಿಕೊಂಡರೆಂದೂ ಮುಂದೆ ಆ ರಾಜ್ಯವು ಪ್ರಗತಿಪಥವನ್ನು ಏರಿ ವೈಭವ ದಿಂದ ಬಾಳಿತೆಂದೂ ಊಹಿಸಬಹುದು. ವಿಭೀಷಣನು ಸ್ವತಃ ಧರ್ಮಾತ್ಮ ನಾದ್ದರಿಂದಲೂ ಶ್ರೀರಾಮನ ಅನುಗ್ರಹಕ್ಕೆ ಪಾತ್ರನಾದ್ದರಿಂದಲೂ ಆ ರಾಜ್ಯಕ್ಕೆ ಯಾವ ವಿಪತ್ತೂ ತಲೆದೋರಲಿಲ್ಲ. ಇಲ್ಲದಿದ್ದರೆ ರಾವಣನ ಪೂರ್ವ ವೈರಿಗಳು ಆ ರಾಜ್ಯವನ್ನು ಧ್ವಂಸಮಾಡದೆ ಬಿಡುತ್ತಿರಲಿಲ್ಲ. ಅಣ್ಣನಾಗಿರಲಿ, ತಂದೆಯೇ ಆಗಿರಲಿ, ರಾಜನು ಪಾಪಿಯೂ ಅಧರ್ಮನಿರತನೂ ಆಗಿದ್ದಾಗ, ಆತನನ್ನು ರಾಜಪದವಿಯಿಂದ ಕಿತ್ತುಹಾಕುವುದು, ತಪ್ಪೆಂದು ಜಗತ್ತಿನ ಯಾವ ನೀತಿ ಶಾಸ್ತ್ರಜ್ಞನೂ ಹೇಳಲಾರ. ಪ್ರಜೆಗಳು ಅಂತಹ ರಾಜನ ಮೇಲೆ ದಂಗೆಯೆದ್ದರೆ ದೇಶದ್ರೋಹವೆಂದು ಯಾವನೂ ಬಗೆಯುವುದಿಲ್ಲ. ಚಾಣಕ್ಯನು ನಂದರಾಜನನ್ನು ಉರುಳಿಸಿದ್ದು ಕುಟಿಲನೀತಿಯಿಂದಲೇ ಎಂಬುದನ್ನು ಸ್ಮರಿಸಿಕೊಳ್ಳಬೇಕು. ವಿಭೀಷಣನು ಯಾವ ಕುಟಿಲಮಾರ್ಗವನ್ನೂ ಅನುಸರಿಸಲಿಲ್ಲ. ಅಣ್ಣನಿಗೆ ಸಾಕಷ್ಟು ಬುದ್ಧಿವಾದವನ್ನು ಹೇಳಿ, ರಾಜಮಾರ್ಗದಲ್ಲಿಯೇ ನಡೆದು ಶ್ರೀರಾಮ ನನ್ನು ಆಶ್ರಯಿಸಿದ್ದಾನೆ. ಆತನು ಮೊದಲಿನಿಂದಲೂ ಧರ್ಮಾತ್ಮನೆಂದೇ ವರ್ಣಿಸುತ್ತ ಬಂದಿರುವ ವಾಲ್ಮೀಕಿಮುನಿಗಳ ದೃಷ್ಟಿಯಲ್ಲಿ ವಿಭೀಷಣನು ಮಾಡಿದ್ದು ಧರ್ಮಸಂಮತವೆಂದೇ ಆಗಿರುವಾಗ, ನಾವು ಆತನ ವರ್ಣನೆ ಯನ್ನು ನಿಂದಿಸುವುದು ಯುಕ್ತವಲ್ಲ.

ವಿಶಿಷ್ಟಾದ್ವೈತಿಗಳಾದರೋ ವಿಭೀಷಣನು ಭಗವಂತನ ಪರಮಭಕ್ತನೆಂದೂ ಭಾಗವತಶಿರೋಮಣಿಯೆಂದೂ ಅವನು ಆಶ್ರಯಿಸಿದ್ದುದು ಶರಣಾಗತಿಮಾರ್ಗ ವೆಂದೂ ಸ್ತುತಿಸುತ್ತಾರೆ. **ತ್ಯಕ್ತ್ವಾಪುತ್ರಾಶ್ಚ ದಾರಾಂಶ್ಚ ರಾಘವಂ ಶರಣಂ ಗತಃ** ಎಂಬ ಮಾತಿನಿಂದ ಅವನ ಪ್ರಪತ್ತಿಯೂ **ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ** ಎಂಬ ಶ್ಲೋಕದಿಂದ ಶ್ರೀರಾಮನ ಭಕ್ತವಾತ್ಸಲ್ಯವೂ ಸೂಚಿತ ವಾಗಿವೆಯೆಂದು ಹೇಳುತ್ತಾರೆ. ವಿಭೀಷಣನು ಧರ್ಮಾತ್ಮನೆಂಬ ನಮ್ಮ ನಿಲುವಿಗೆ ಇದು ಪೋಷಕವೇ ಆದ್ದರಿಂದ ಅವರ ನಂಬಿಕೆಯನ್ನು ವಿರೋಧಿಸ ಬೇಕಾದ್ದೇನೂ ಇಲ್ಲ. ಆದರೆ ಶರಣಾಗತಿತತ್ತ್ವವು ಮಾತ್ರ ವಿಭೀಷಣನ ವಿಷಯದಲ್ಲಿ ದೂರಾನೀತವೆಂದು ನನ್ನ ಅಭಿಪ್ರಾಯವಿದೆ. ಹಿಂದೆ ಪಂಪಾ ತೀರದಲ್ಲಿ ಹನುಮಂತನ ಭೇಟಿಯಾದಾಗ, ಶ್ರೀರಾಮನ ಪ್ರೇರಣೆಯಂತೆ

ಲಕ್ಷ್ಮಣನು ಹನುಮಂತನಿಗೆ ಶ್ರೀರಾಮನ ಪರಿಚಯವನ್ನು ಹೇಳುತ್ತಾನೆ. ಶ್ರೀರಾಮನು ಸುಗ್ರೀವನಿಗೆ ಶರಣಾಗತನಾಗಿ ಬಂದಿದ್ದಾನೆಂದು ಮತ್ತೆ ಮತ್ತೆ ಹೇಳಿದ್ದಾನೆ. "ಸುಗ್ರೀವಂ ಶರಣಂ ಗತಃ, ಸುಗ್ರೀವಂ ನಾಥಮಿಚ್ಛತಿ, ಸುಗ್ರೀವಂ ವಾನರೇಂದ್ರಂ ತು ರಾಮಃ ಶರಣಮಾಗತಃ" ಎಂದು ಅನೇಕಸಲ ನುಡಿದು. ಸುಗ್ರೀವನು ಪ್ರಸನ್ನನಾಗಲೆಂದು ಬೇಡಿಕೊಂಡಿದ್ದಾನೆ. ಶರಣ ಶಬ್ದವು ಆಶ್ರಯ ದಾತನೆಂಬ ಅರ್ಥದಲ್ಲಿ ಬಹುಸ್ಥಳಗಳಲ್ಲಿ ಪ್ರಯುಕ್ತವಾಗಿದೆ. ಶರಣಾಗತಿತತ್ತ್ವವನ್ನೇ ಇದು ಸೂಚಿಸಲಾರದು. ವಿಭೀಷಣನು ಭಗವದ್ಭಕ್ತನಾಗಿದ್ದರೆ ಮೊದಲಿನಿಂದಲೂ ಆಗಿರಬೇಕು. ಈಗ ಹೊಸದಾಗಿ ಶರಣಾಗತನಾಗುವ ಸಂದರ್ಭವೇನಿದೆ? ಭಕ್ತಿ ಮಾರ್ಗದವನಿಗೆ ಪರಮಾತ್ಮನು ಪ್ರತ್ಯಕ್ಷನಾಗಿ ಎದುರಿಗೆ ಕಾಣಿಸಿಕೊಳ್ಳ ಬೇಕಾದ್ದೇನೂ ಇಲ್ಲ. ಶ್ರೀರಾಮನು ವಿಷ್ಣುವಿನ ಅವತಾರವೆಂದು ವಿಭೀಷಣನಿಗೆ ಗೊತ್ತಾದದ್ದು ಹೇಗೆ? 'ಸಕೃದೇವ ಪ್ರಪನ್ನಾಯ' ಎಂಬ ಶ್ರೀರಾಮನ ನುಡಿಯಲ್ಲಿ ಪ್ರಯುಕ್ತವಾದ ಪ್ರಪನ್ನ ಶಬ್ದವು ಶರಣ ಶಬ್ದದಂತೆ ಸಾಮಾನ್ಯಾರ್ಥದಲ್ಲಿ ಬಂದದ್ದು. ಶ್ರೀರಾಮನಿಗೆ ವಿಭೀಷಣನು ತನ್ನ ಪರಮ ಭಕ್ತನೆಂದು ಗೊತ್ತಿದ್ದರೆ ಆ ಮಾತನ್ನೇ ಮೊದಲು ಹೇಳಬೇಕಾಗಿತ್ತು. ವಿಭೀಷಣನು ಬಂದುದರ ಉದ್ದೇಶವೇನಿರಬಹುದೆಂದು ವಾನರರನ್ನು ಕೇಳುವ ಪ್ರಸಂಗವೇ ಇರಲಿಲ್ಲ. ಅಲ್ಲದೆ 'ರಾಜ್ಯಕಾಂಕ್ಷೀ ಚ ರಾಕ್ಷಸಃ' ಎಂದು ಸ್ವಯಂ ಹೇಳಿದ್ದಾನೆ. ಭಕ್ತಿಯಿಂದ ಪ್ರಪನ್ನನಾದವನು ವಿಭೀಷಣನೆಂದು ಆತನು ಹೇಳಲಿಲ್ಲ.

ಇದು ಹೇಗಾದರೂ ಇರಲಿ; ಲಂಬಿಸಬೇಕಾಗಿಲ್ಲ. ನನ್ನ ಪೂರ್ವೋಕ್ತ ಪ್ರತಿಪಾದನೆಗೆ ಈ ನಂಬಿಕೆ ಪೋಷಕವೇ ಹೊರತು ವಿರುದ್ಧವೇನಲ್ಲ. ಹೀಗೆ ಎಲ್ಲ ದೃಷ್ಟಿಯಿಂದ ನೋಡಿದಾಗಲೂ ವಿಭೀಷಣನು ಅನುಸರಿಸಿದ ಮಾರ್ಗವು ಸರಿಯಾದದ್ದೆಂದೂ ಯಾವ ಸತ್ಪುರುಷನಾದರೂ ಅನುಸರಿಸುತ್ತಿದ್ದ ದಾರಿಯೇ ಇದೆಂದೂ ನಿಃಸಂದೇಹವಾಗಿ ನಿರ್ಧರಿಸಬಹುದು. ಅವನು ಭ್ರಾತೃದ್ರೋಹಿಯೂ ಅಲ್ಲ, ರಾಜ್ಯದ್ರೋಹಿಯೂ ಅಲ್ಲ. ಅವನೊಬ್ಬ ಪ್ರಶಂಸನೀಯನಾದ ಸತ್ಪುರುಷನೇ ಸರಿ.

*

# ನಮ್ಮ ಕೇಂದ್ರದ ಕೆಲವು ಪ್ರಕಟನೆಗಳು

- ಗೋವಿಂದ ಪೈ ಸಮಗ್ರ ವಾಙ್ಮಯ ಸಮೀಕ್ಷೆ -ಡಾ। ಶ್ರೀನಿವಾಸ ಹಾವನೂರು 6-00
- ಗೋವಿಂದ ಪೈ ಅವರ ಛಂದೋಗತಿ -ಎಸ್. ಶಂಕರನಾರಾಯಣ ಭಟ್ 12-00
- ಕಲಾವಿದ ಕೃಷ್ಣ ಹೆಬ್ಬಾರ -ಪ್ರೊ। ಕು. ಶಿ. ಹರಿದಾಸ ಭಟ್ಟ 60-00
- ವಚನ ಸಾಹಿತ್ಯ ಮತ್ತು ವೀರಶೈವ ಧರ್ಮ -ಡಾ। ಪ್ರಭುಶಂಕರ 8-00
- ವಾಗ್ಗೇಯಕಾರ ವಾದಿರಾಜ -ಪ್ರೊ। ಎಂ. ರಾಜಗೋಪಾಲಾಚಾರ್ಯ 4-00
- ರಂಗ ಪ್ರಸಂಗ -ಪ್ರೊ। ಎಂ. ರಾಜಗೋಪಾಲಾಚಾರ್ಯ 8-00
- ತುಳು ದೇವೀ ಮಹಾತ್ಮೆ (ತುಳು) -ವೆಂಕಟರಾಜ ಪುಣಿಂಚತ್ತಾಯ (ಸಂ) 35-00
- ಕಾವೇರಿ (ತುಳು) -ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯ (ಸಂ) 15-00
- ಮಹಾಭಾರತ ತಾತ್ಪರ್ಯ ನಿರ್ಣಯ -ಬನ್ನಂಜೆ ಗೋವಿಂದಾಚಾರ್ಯ 10-00
- ಗೋವಿಂದ ಪೈ ಸಂಶೋಧನ ಸಂಪುಟ
  -ಪ್ರೊ। ಹೆರಂಜೆ ಕೃಷ್ಣ ಭಟ್ಟ, ಪ್ರೊ। ಮುರಳೀಧರ ಉಪಾಧ್ಯ, ಹಿರಿಯಡಕ (ಸಂ) 650-00
- ಸಂಶೋಧನ ಪ್ರಜ್ಞೆ -ಪ್ರೊ। ಹೆರಂಜೆ ಕೃಷ್ಣ ಭಟ್ಟ (ಸಂ) 20-00
- ಆಚಾರ್ಯ ಮಧ್ವ -ಬನ್ನಂಜೆ ಗೋವಿಂದಾಚಾರ್ಯ 25-00
- ಆವೆಯ ಮಣ್ಣಿನ ಆಟದ ಬಂಡಿ -ಬನ್ನಂಜೆ ಗೋವಿಂದಾಚಾರ್ಯ 60-00
- ತುಳು ನಿಘಂಟು -ಡಾ। ಯು.ಪಿ. ಉಪಾಧ್ಯಾಯ (ಪ್ರ.ಸಂ)
  ಸಂ. ೧ - ೩. (ಉತ್ತಮ) 240-00
  (ಸಾದಾ) 180-00
- ಕೊಂಕಣಿ ಭಾಷೆ ಮತ್ತು ಸಾಹಿತ್ಯ -ಮುರಳೀಧರ ಉಪಾಧ್ಯ (ಸಂ) 75-00
- ದೈವಲೀಲೆ -ವಿದ್ವಾನ್ ಸೇಡಿಯಾಪು ಕೃಷ್ಣ ಭಟ್ಟ 20-00
- ಸೇಡಿಯಾಪು -ಪ್ರೊ। ಪಾದೇಕಲ್ಲು ವಿಷ್ಣು ಭಟ್ಟ 60-00
- ಗೋಪಾಲಕೃಷ್ಣ ಅಡಿಗ -ಪ್ರೊ। ಬಿ. ಎ ಕೆದಿಲಾಯ 24-00
- Dravidian and Negro-African -Dr. U.P. Upadhyaya 75-00
  Dr.(Smt) Susheela Upadhyaya
- A Comparative Study of Tulu Dialects
  -Dr. K. Padmanabha Kekunnaya 150-00
- Discovery of Facts -Sediyapu Krishna Bhat 300-00

ಅಂಕುರ ಪ್ರಿಂಟ್ಸ್, ಬೆಂಗಳೂರು